ದೆಹಲಿ ಕರ್ನಾಟಕ ಸಂಘದ

ಅಭಿಮತ

ಜೂನ್ 2026 । ಬೆಲೆ ರೂ.1

ಕಾಡು ಉಳಿದರೆ ನಾಡು ಉಳಿವುದು

ದೆಹಲಿ ಕರ್ನಾಟಕ ಸಂಘದ ಆವರಣದಲ್ಲಿ ದಿನಾಂಕ 21.06.2026 ಆಯೋಜಿಸಲಾಗಿದ್ದ 12ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಡಾ. ಶಿವಕುಮಾರ ಹರ್ಷಿ, ಕಾರ್ಯಕಾರಿ ಸಮಿತಿ ಸದಸ್ಯರು, ದೆಹಲಿ ಮತ್ತು ಎನ್‌ಸಿಆರ್.ನ ಆಜೀವ ಸದಸ್ಯರೊಂದಿಗೆ ಸಂಘದ ಅಧ್ಯಕ್ಷ ಶ್ರೀ ರೇಣುಕುಮಾರ್ ಆರ್.

ಸಂಪುಟ 36 । ಸಂಚಿಕೆ 9
ಜೂನ್-2026

ದೆಹಲಿ ಕರ್ನಾಟಕ ಸಂಘದ
ಅಭಿಮತ

ಪ್ರಧಾನ ಸಂಪಾದಕರು
ರೇಣುಕಾ ನಿಡಗುಂದಿ

ಸಂಪಾದಕ ಮಂಡಳಿ
ಚಂದ್ರಶೇಖರ ಎನ್.ಪಿ.
ಸಂತೋಷ್ ಕುಮಾರ್ ಉಪಾಧ್ಯಾಯ
ಪ್ರಕಾಶ್ ಶೆಟ್ಟಿ ಉಳೆಪಾಡಿ
ಹರಿಪ್ರಿಯ ಎಸ್.
ಪ್ರಸಾದ್ ನಾಯ್ಕ್
ನಟರಾಜ್ ಸಿ.

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ-2026-28

ಅಧ್ಯಕ್ಷರು
ರೇಣುಕುಮಾರ್ ಆರ್.
9868393953

ಉಪಾಧ್ಯಕ್ಷರು
ವಸಂತ ಶೆಟ್ಟಿ ಬೆಳ್ಳಾರೆ
9958697823
ಶೋಭಾ ಗೌಡ
8800588150

ಪ್ರಧಾನ ಕಾರ್ಯದರ್ಶಿ
ರಾಧಾಕೃಷ್ಣ
9818252183

ಖಜಾಂಚಿ
ಆಶಾಲತಾ ಎಂ.
9891249149

ಜಂಟಿ ಕಾರ್ಯದರ್ಶಿಗಳು
ಸಂತೋಷ ಜಿ.
9911235783
ಅಶ್ವಿನಿ ಬಿ.ಎಸ್.
9036235665

ಸಮಿತಿ ಸದಸ್ಯರು
ಪೂಜಾ ಪಿ. ರಾವ್
9810882498
ಶಿವಪ್ಪ ಎಂ.
9868159328
ಡಾ. ವೆಂಕಟಾಚಲ ಜಿ. ಹೆಗಡೆ
9312712476
ಡಾ. ಎಂ.ಎಸ್. ಶಶಿ ಕುಮಾರ್
9811689327
ನಾರಾಯಣ ಬಿ.
9868393978
ಕೃಷ್ಣಪ್ಪ ಎಂ.
9911156695
ಜಯಶ್ರೀ ಬಸವರಾಜು ಬಿ.ಕೆ.
9560760341
ಶುಭಾ ದೇವಿಪ್ರಸಾದ್
9319762969
ಆರ್. ಹರಿಕೃಷ್ಣ
9971518457
ರಾಜಕುಮಾರ್
9911150475

ಚಿತ್ರಕೃಪೆ :
ಶಿವಶಂಕರ್ ಬಣಗಾರ್
ಪ್ರಸಿದ್ಧ ಛಾಯಾಗ್ರಾಹಕರು, ಹಂಪಿ

ಸಂಪಾದಕೀಯ...

ಜೂನ್ ತಿಂಗಳು ಬಂತೆಂದರೆ ಇಡೀ ದೇಶ ಕಣ್ಣರಳಿಸಿ ಮುಂಗಾರು ಮಳೆಯ ಹನಿಗಳಿಗಾಗಿ ಕಾಯುತ್ತದೆ. ಕಡು ಬೇಸಿಗೆಯ ಶಾಖದಿಂದ ಬೆಂದು ಹೋಗಿದ್ದ ಭೂಮಿಗೆ, ಸುಡುವ ಬಿಸಿಲಿನಿಂದ ಒಣಗಿ, ಬಿರುಕು ಬಿಟ್ಟ ಭೂಮಿಗೆ ಮಳೆಯ ಮೊದಲ ಹನಿ ಬಿದ್ದಾಗ ಮಣ್ಣಿನಿಂದ ಏಳುವ ಸುಗಂಧ ಹೊಸ ಜೀವಕಳೆ ತರುತ್ತದೆ. 'ಮುಂಗಾರು ಮಳೆ' ಭಾರತಕ್ಕೆ ಕಾಲಿಡುವುದು ಇದೇ ಜೂನ್ ತಿಂಗಳಿನಲ್ಲಿ.

ಜೂನ್ ತಿಂಗಳೆಂದರೆ ಬೇಸಿಗೆ ರಜೆ ಮುಗಿದು ಶಾಲಾ-ಕಾಲೇಜುಗಳು ಮರುಪ್ರಾರಂಭವಾಗುತ್ತವೆ. ಹೊಸ ಪುಸ್ತಕಗಳ ಸುಗಂಧ, ಹೊಸ ಆಸೆಗಳು, ಹೊಸ ಗೆಳೆಯರು ಮತ್ತು ಮಳೆಗಾಲದ ಆರಂಭದೊಂದಿಗೆ ವಿದ್ಯಾರ್ಥಿ ಜೀವನದ ಹೊಸ ಅಧ್ಯಾಯ ಶುರುವಾಗುವುದು ಇದೇ ತಿಂಗಳಿನಲ್ಲಿ. ಜಿಟಿಜಿಟಿ ಮಳೆಯಲ್ಲಿ ಹೊಸ ಪುಸ್ತಕಗಳು, ಹೊಸ ಯೂನಿಫಾರ್ಮ್, ಪಾಟೀಚೀಲ ನೆನೆಯದಂತೆ ಸರ್ಕಸ್ ಮಾಡುತ್ತಾ ಶಾಲೆಗೆ ಹೋಗುತ್ತಿದ್ದ ಬಾಲ್ಯದ ದಿನಗಳ ನೆನಪುಗಳ ತಂಗಾಳಿ ದೆಹಲಿಯ ಬಿರುಬಿಸಿಲಿಗೆ ತಂಪೆರೆಯುತ್ತದೆ. ಇತ್ತೀಚೆಗಷ್ಟೇ ಕಳೆದ ವಿಶ್ವ ಪರಿಸರ ದಿನಾಚರಣೆಯೂ ನಮಗೆ ಪ್ರಕೃತಿಯ ಪುನರುತ್ಥಾನದ ಪಾಠವನ್ನೇ ಕಲಿಸಿದೆ.

ಭಾರತದ ಪರಿಸರ ಹೋರಾಟಗಳಿಗೊಂದು ಇತಿಹಾಸವಿದೆ. ಚಿಪ್ಕೋ ಚಳವಳಿಯಲ್ಲಿ ಗ್ರಾಮಸ್ಥರು ಮರಗಳನ್ನು ಅಪ್ಪಿಕೊಂಡು ಕಾಡನ್ನು ಉಳಿಸಿದರು. ಕರ್ನಾಟಕದ ಅಪ್ಪಿಕೋ ಚಳವಳಿ ಕೂಡ ಇದೇ ಮನೋಭಾವದ ಪ್ರತೀಕ. ಬಿರ್ಸಾ ಮುಂಡಾ ಅವರ ಹೋರಾಟವೂ ಭೂಮಿ, ಅರಣ್ಯ ಮತ್ತು ಸ್ವಾಭಿಮಾನದ ರಕ್ಷಣೆಯ ಹೋರಾಟವಾಗಿತ್ತು.

ಇಂತಹ ಸಂದರ್ಭದಲ್ಲಿ ನಮಗೆ ಜೀನ್ ಜಿಯೋನೋ ಅವರ ಜಗತ್ಪ್ರಸಿದ್ಧ ಕೃತಿ "ಮರಗಳನ್ನು ನೆಟ್ಟ ಮನುಷ್ಯ" (The Man Who Planted Trees) ಕತೆ ನೆನಪಾಗುತ್ತದೆ.

ವಿಶ್ವ ಮಹಾಯುದ್ಧದ ಕರಾಳ ದಿನಗಳಲ್ಲಿ ಫ್ರಾನ್ಸ್‌ನ ಒಂದು ಬೆಟ್ಟದ ಪ್ರದೇಶ ಸಂಪೂರ್ಣವಾಗಿ ಒಣಗಿ, ಬರಡಾಗಿ, ಹತಾಶೆಯಿಂದ ಜನರೆಲ್ಲಾ ಹಳ್ಳಿ ಬಿಟ್ಟು ವಲಸೆ ಹೋಗಿರುತ್ತಾರೆ. ಆದರೆ ಅಲ್ಲಿ 'ಎಲ್ಜಿಯಾರ್ಡ್ ಬೌಫಿಯರ್' ಎಂಬ ಒಬ್ಬನೇ ಒಬ್ಬ ಒಂಟಿ ಕುರಿಗಾಹಿ ಇರುತ್ತಾನೆ. ಆತ ಯಾರ ಭರವಸೆಗೂ ಕಾಯದೆ, ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ಪ್ರತಿದಿನ ನೂರು ಓಕ್ ಮರದ ಬೀಜಗಳನ್ನು ಆ ಬರಡು ನೆಲದಲ್ಲಿ ನೆಡುತ್ತಾ ಹೋಗುತ್ತಾನೆ. ಹಗಲಿರುಳು ನಡೆದ ಆತನ 40 ವರ್ಷಗಳ ನಿರಂತರ ಕಾಯಕದ ಫಲವಾಗಿ, ಆ ಬರಡು ಪ್ರದೇಶವು ಹಚ್ಚಹಸಿರಿನ ದಟ್ಟ ಕಾಡಾಗಿ ಮಾರ್ಪಡುತ್ತದೆ! ಒಣಗಿದ್ದ ನದಿಗಳಲ್ಲಿ ಮತ್ತೆ ನೀರು ಹರಿಯುತ್ತದೆ. ವ್ಯವಸ್ಥೆಯು ಸೋತುಹೋಗಿದ್ದ ಜಾಗದಲ್ಲಿ ಒಬ್ಬಂಟಿ ಮನುಷ್ಯನ ದೃಢ ಸಂಕಲ್ಪ ಹೊಸ ಜೀವ ತುಂಬುತ್ತದೆ. ಹಳ್ಳಿಗಳಿಗೆ ಜನ ಮರಳಿ ಬಂದು ಹಬ್ಬದಂತೆ ಬದುಕುತ್ತಾರೆ. ಸರ್ಕಾರಕ್ಕೆ ಈ ಕಾಡು ಹೇಗೆ ಬೆಳೆಯಿತು ಎಂಬ ರಹಸ್ಯವೇ ತಿಳಿಯುವುದಿಲ್ಲ.

बड़ा हुआ तो क्या हुआ, जैसे पेड़ खजूर।
पंथी को छाया नहीं, फल लागे अति दूर ।।

ಖರ್ಜೂರದ ಮರದಂತೆ ಪ್ರಯಾಣಿಕನಿಗೆ ನೆರಳನ್ನೂ ಕೊಡದ, ಕೈಗೆಟುಕದಂತೆ ಹಣ್ಣನ್ನೂ ಸುಲಭವಾಗಿ ನೀಡದ ಬದುಕಿಗೆ ಅರ್ಥವೇನು? ಮರವು ತನ್ನ ಅಸ್ತಿತ್ವವನ್ನು ಇತರರಿಗೆ ಉಪಯೋಗವಾಗುವ ಮೂಲಕ ಸಾರ್ಥಕಗೊಳಿಸುತ್ತದೆ. ಇಂತಹ ದೋಹೆಗಳಿಂದ ಸಮಾಜದ ಕಣ್ಣು ತೆರೆಸಿದ ಕ್ರಾಂತಿಕಾರಿ ಸಂತ ಕಬೀರರ ಜಯಂತಿಯೂ ಇದೇ ತಿಂಗಳಿನಲ್ಲಿ. ಕಬೀರರು ಭಾರತೀಯ ಸಾಹಿತ್ಯ ಮತ್ತು ಆಧ್ಯಾತ್ಮಿಕ ಲೋಕದ ಅತ್ಯಂತ ಪ್ರಭಾವಶಾಲಿ ದಾರ್ಶನಿಕ ಕವಿ ಹಾಗೂ ಸಮಾಜ ಸುಧಾರಕರಾಗಿದ್ದರು.

ಗಾಜಾದಲ್ಲಿ ನಡೆಯುತ್ತಿರುವ ಯುದ್ಧ ಸಂಘರ್ಷದ ಕುರಿತು ವಿಶ್ವಸಂಸ್ಥೆಯ ವಿವಿಧ ಸಂಸ್ಥೆಗಳು ಪ್ರಕಟಿಸಿರುವ ವರದಿಗಳು ಮಕ್ಕಳ ಮೇಲಿನ ಪರಿಣಾಮದ ಬಗ್ಗೆ ತೀವ್ರ ಆತಂಕ ವ್ಯಕ್ತಪಡಿಸಿವೆ. ಸಾವಿರಾರು ಮಕ್ಕಳು ಸಾವಿಗೀಡಾಗಿರುವುದು, ಗಾಯಗೊಂಡಿರುವುದು, ಶಿಕ್ಷಣ ಮತ್ತು ಆರೋಗ್ಯದಂತಹ ಮೂಲಭೂತ ಹಕ್ಕುಗಳಿಂದ ವಂಚಿತರಾಗಿರುವುದು ಹಾಗೂ ಹಸಿವು, ಸ್ಥಳಾಂತರ ಮತ್ತು ಮಾನಸಿಕ ಆಘಾತವನ್ನು ಅನುಭವಿಸುತ್ತಿರುವುದು ಜಾಗತಿಕ ಸಮುದಾಯದ ಆತಂಕಕ್ಕೆ ಕಾರಣವಾಗಿದೆ. ಈ ಹಿನ್ನೆಲೆಯಲ್ಲಿ ಮಾಜಿ ನ್ಯಾಯಮೂರ್ತಿ ಶ್ರೀನಿವಾಸನ್ ಮುರಳೀಧರ್ ಅವರು ಎತ್ತಿರುವ ಪ್ರಶ್ನೆ ಗಮನಾರ್ಹವಾಗಿದೆ..

ಇತ್ತ ಕರ್ನಾಟಕದಲ್ಲಿ ಮೇ ತಿಂಗಳ ರಾಜಕೀಯ ಹಗ್ಗಜಗ್ಗಾಟಕ್ಕೆ ತೆರೆ ಬಿದ್ದು, ಜೂನ್ ಆರಂಭದಲ್ಲಿ ನೂತನ ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಅಧಿಕಾರ ವಹಿಸಿಕೊಂಡಿದ್ದಾರೆ. ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು. ಹೊಸ ಸರ್ಕಾರದ ಮುಂದೆ ಗ್ಯಾರಂಟಿ ಯೋಜನೆಗಳ ನಿರ್ವಹಣೆ, ಬೆಂಗಳೂರಿನ ಅಭಿವೃದ್ಧಿ ಮತ್ತು ಪೊಲೀಸ್ ಇಲಾಖೆಯಲ್ಲಿ 'ಆಂಟಿ-ರೌಡಿ ಸ್ಕ್ವಾಡ್'ನಂತಹ ಆಡಳಿತಾತ್ಮಕ ಸುಧಾರಣೆಗಳ ಸವಾಲುಗಳಿವೆ. ಬಸವಣ್ಣನವರು ಆಶಿಸಿದ ಕಲ್ಯಾಣ ರಾಜ್ಯ ಕೇವಲ ಭಾಷಣಗಳಿಗೆ ಸೀಮಿತವಾಗಬಾರದು. ಹೊಸದಾಗಿ ಬಿತ್ತಲಾದ ಈ ಆಡಳಿತದ ಬೀಜಗಳು ನಿಜವಾದ ಜನಕಲ್ಯಾಣದ ಮರಗಳಾಗಿ ಬೆಳೆಯಬೇಕಿವೆ.

ಆದರೆ ಇತಿಹಾಸವನ್ನು ನೋಡಿ, ಜಗತ್ತಿನಲ್ಲಿ ಸಂಭವಿಸಿದ ಯಾವುದೇ ದೊಡ್ಡ ಕ್ರಾಂತಿ ಅಥವಾ ಧನಾತ್ಮಕ ಬದಲಾವಣೆಗಳು ಸದ್ದಿನಿಂದ ಆರಂಭವಾಗಲಿಲ್ಲ. ಸಮಾಜ ಸುಧಾರಕರು, ಮಹಾನ್ ಚಿಂತಕರು ಮತ್ತು ಯಾವುದೇ ಪ್ರಚಾರ ಬಯಸದ ಸಾಮಾನ್ಯ ಸೇವಕರು ನಿಶ್ಯಬ್ದವಾಗಿ,ಎಲೆಯ ಮರೆಯ ಕಾಯಂತೆ ತಮ್ಮ ಕೃತಿಯ ಮೂಲಕ ಸಮಾಜದ ಬೇರುಗಳನ್ನು ಗಟ್ಟಿಗೊಳಿಸುತ್ತಾ ಹೋದರು. ಭೂಮಿಯ ಆಳದಲ್ಲಿ ಬೀಜವೊಂದು ನಿಶ್ಯಬ್ಧವಾಗಿ ಸೀಳಿ ಮೊಳಕೆಯೊಡೆಯುವಂತೆ, ಸಮಾಜದ ನಿಜವಾದ ಪ್ರಗತಿಯೂ ಸದ್ದಿಲ್ಲದ ಕಾಯಕದಲ್ಲೇ ಅಡಗಿರುತ್ತದೆ.❑

ರೇಣುಕಾ ನಿಡಗುಂದಿ

ಕಾವಲು ಸಮಿತಿ | ಶ್ರೀ ಎನ್.ಎ. ಮಾಧವ | ಶ್ರೀ ಎಂ.ವಿ. ವೆಂಕಟೇಶ್ | ಶ್ರೀಮತಿ ರಾಧಾ ಕೌಜಲಗಿ

ನಾವು–ನೀವು

ಪ್ರಿಯ ಓದುಗರೇ,

ಮೊಟ್ಟಮೊದಲಿಗೆ ನಾಡಿನ ನೂತನ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿರುವ ಸನ್ಮಾನ್ಯ ಶ್ರೀ ಡಿ.ಕೆ ಶಿವಕುಮಾರ್ ಅವರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾರ್ದಿಕ ಅಭಿನಂದನೆಗಳು.

ಜೂನ್ ತಿಂಗಳು ಪರಿಸರದ ಕುರಿತು ಮತ್ತೊಮ್ಮೆ ನಮ್ಮನ್ನು ಗಂಭೀರವಾಗಿ ಚಿಂತಿಸುವಂತೆ ಮಾಡುತ್ತದೆ. ವಿಶ್ವ ಪರಿಸರ ದಿನವನ್ನು ಆಚರಿಸುವಾಗ, ನಾವು ಬದುಕುತ್ತಿರುವ ದೆಹಲಿಯ ಪರಿಸರ ನಮ್ಮ ಮುಂದೊಂದು ಕಠಿಣ ಪ್ರಶ್ನೆಯಾಗಿ ನಿಲ್ಲುತ್ತದೆ. ಉಸಿರಾಡುವ ಗಾಳಿಯಿಂದ ಕುಡಿಯುವ ನೀರಿನವರೆಗೆ, ಬಿಸಿಲಿನ ತೀವ್ರತೆಯಿಂದ ಮಳೆಗಾಲದ ಅವಾಂತರಗಳವರೆಗೆ–ಪ್ರಕೃತಿ ನಮ್ಮ ನಿರ್ಲಕ್ಷ್ಯಕ್ಕೆ ತನ್ನದೇ ಭಾಷೆಯಲ್ಲಿ ಉತ್ತರಿಸುತ್ತಿದೆ.

ಒಂದು ದಿನ ಗಿಡ ನೆಟ್ಟು, ಪರಿಸರದ ಘೋಷಣೆ ಕೂಗುವುದರಿಂದ ನಮ್ಮ ಹೊಣೆಗಾರಿಕೆ ಮುಗಿಯುವುದಿಲ್ಲ. ಮರಗಳನ್ನು ಉಳಿಸುವುದು, ಜಲಮೂಲಗಳನ್ನು ಕಾಪಾಡುವುದು, ಕಸದ ನಿರ್ವಹಣೆಯಲ್ಲಿ ಜವಾಬ್ದಾರಿ ತೋರುವುದು ಮತ್ತು ನಗರವನ್ನು ಬದುಕಲು ಯೋಗ್ಯವಾಗಿಸುವುದು ನಮ್ಮೆಲ್ಲರ ಸಾಮೂಹಿಕ ಕರ್ತವ್ಯ. ದೆಹಲಿಯ ಹೊಗೆ, ಧೂಳು ಮತ್ತು ಉಸಿರುಗಟ್ಟಿಸುವ ವಾತಾವರಣದ ನಡುವೆ 'ಪರಿಸರ ಸಂರಕ್ಷಣೆ' ಕೇವಲ ಘೋಷಣೆಯಲ್ಲ; ಅದು ಬದುಕಿನ ಅನಿವಾರ್ಯತೆ.

ಇದೇ ಸಂದರ್ಭದಲ್ಲಿ ನಾವು ನಾಡಪ್ರಭು ಕೆಂಪೇಗೌಡರ ಜಯಂತಿಯನ್ನೂ ಸ್ಮರಿಸುತ್ತಿದ್ದೇವೆ. ದೂರದೃಷ್ಟಿಯ ನಗರ ನಿರ್ಮಾತೃ ಕೆಂಪೇಗೌಡರು ಕೆರೆಗಳು, ವ್ಯಾಪಾರುಕಟ್ಟೆಗಳು ಮತ್ತು ಜನಜೀವನದ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ನಗರವನ್ನು ರೂಪಿಸಿದವರು. ಅವರ ನಗರ ಕಲ್ಪನೆಯಲ್ಲಿ ಅಭಿವೃದ್ಧಿಯ ಜೊತೆಗೆ ಜನಪರ ಕಾಳಜಿಯೂ ಇತ್ತು. ಇಂದು ನಿಯಂತ್ರಣವಿಲ್ಲದೆ ಬೆಳೆಯುತ್ತಿರುವ ಮಹಾನಗರಗಳ ನಡುವೆ ಕೆಂಪೇಗೌಡರ ದೂರದೃಷ್ಟಿ ನಮಗೆ ಹೊಸ ಪಾಠವನ್ನು ಹೇಳುತ್ತದೆ.

ದೆಹಲಿ ಇರಲಿ, ಬೆಂಗಳೂರು ಇರಲಿ–ನಗರಗಳು ಕೇವಲ ಕಾಂಕ್ರೀಟ್ ಕಟ್ಟಡಗಳ ಗುಚ್ಛವಾಗಬಾರದು. ಮರ, ನೀರು, ಗಾಳಿ ಮತ್ತು ಮನುಷ್ಯನ ಸಹಬಾಳ್ವೆಯ ತಾಣಗಳಾಗಬೇಕು. ಪರಿಸರ ದಿನದ ಸಂದೇಶ ಮತ್ತು ಕೆಂಪೇಗೌಡರ ನಗರ ನಿರ್ಮಾಣದ ದೂರದೃಷ್ಟಿ ಒಂದೇ ಕಡೆ ಸೇರುವುದು ಇಲ್ಲಿಯೇ.

ಪ್ರಕೃತಿಯನ್ನು ಉಳಿಸುವುದು ಎಂದರೆ ನಮ್ಮ ಮುಂದಿನ ಪೀಳಿಗೆಯ ಬದುಕನ್ನು ಉಳಿಸುವುದು. ಇತಿಹಾಸವನ್ನು ಸ್ಮರಿಸುವುದು ಎಂದರೆ ಅದರ ಪಾಠಗಳನ್ನು ವರ್ತಮಾನದಲ್ಲಿ ಅಳವಡಿಸಿಕೊಳ್ಳುವುದು.

ಇನ್ನು ಸಂಘದ ಪರಿಸರದಲ್ಲಿ ಅಹ್ಲಾದಕರ ವಾತಾವರಣ ಮೂಡಿಸುವ ಉದ್ದೇಶದಿಂದ ಹಲವು ಪರಿಣಾಮಕಾರಿ ನಿರ್ಣಯಗಳನ್ನು ತೆಗೆದುಕೊಂಡಿದ್ದು, ಕಾರ್ಯಕ್ರಮಗಳ ಆಯೋಜನೆಯಲ್ಲಿಯೂ ವಿಭಿನ್ನತೆ ಕಾಣಬಹುದಾಗಿದೆ. ಮುಂದಿನ ದಿನಗಳಲ್ಲಿ ಸ್ಥಳೀಯರಿಗೆ ಹೆಚ್ಚಿನ ಅವಕಾಶವನ್ನು ಒದಗಿಸುವುದರೊಂದಿಗೆ ಉನ್ನತ ಗುಣಮಟ್ಟದ ಕಾರ್ಯಕ್ರಮಗಳ ಆಯೋಜನೆಗಳಿಗೂ ಸಹ ನಮ್ಮ ತಂಡ ಕಾರ್ಯ ಪ್ರವೃತ್ತವಾಗಿದೆ.

ಅಭಿಮತ ಅರ್ಥಪೂರ್ಣವಾಗಿ ಮೂಡಿ ಬರುತ್ತಿರುವುದರ ಬಗ್ಗೆ ಮೆಚ್ಚುಗೆ ಗಳಿಸುತ್ತಿದ್ದು ಅಭಿಮತ ಪತ್ರಿಕೆಯಲ್ಲಿಯೂ ಸ್ಥಳೀಯರ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುವ ಸಲುವಾಗಿ ನನ್ನದೊಂದು ಮನವಿ. ತಾವುಗಳೆಲ್ಲರೂ ತಾವು ಕಂಡಂತಹ ಸ್ವಾರಸ್ಯಕರ ಸಂಗತಿಗಳು, ಐತಿಹಾಸಿಕ ಸ್ಮಾರಕಗಳು ಇನ್ನಿತರ ವಿಶೇಷತೆಗಳ ಬಗ್ಗೆ ದಯವಿಟ್ಟು ಸಂಪಾದಕರಿಗೆ ಬರವಣಿಗೆ ಮೂಲಕ ತಿಳಿಸಿದಲ್ಲಿ ಅವುಗಳನ್ನು ಸಹ ಅಭಿಮತದಲ್ಲಿ ಪ್ರಕಟಿಸುವ ಪ್ರಯತ್ನ ಮಾಡಲಾಗುವುದು. ಬನ್ನಿ ಎಲ್ಲರೂ ಸೇರಿ ಕನ್ನಡದ ತೇರನ್ನು ಎಳೆಯೋಣ.❑

ರೇಣುಕುಮಾರ್ ಆರ್.
ಅಧ್ಯಕ್ಷರು

ಮುನ್ನೋಟ

ನಮ್ಮ ಧ್ವನಿ ಬರಿ ಮಾತಲ್ಲ, ಭಾಷೆಯಲ್ಲ ಅದು ಕರುನಾಡಿನ ಪರಂಪರೆ, ಇತಿಹಾಸ ಮತ್ತು ಚರಿತ್ರೆ. ನಮ್ಮ ನಾಡಿನ ಆಚರಣೆಗಳು ಪ್ರಾಚೀನ, ಮಂದಿರಗಳು ಮತ್ತು ಮಂದಿರದ ಮಹತ್ವ ರಾಷ್ಟ್ರ ಮತ್ತು ವಿಶ್ವದಾದ್ಯಂತ ಪ್ರಚಲಿತ. ಮೇ ತಿಂಗಳು ರಜೆಗೆ ತಾಯ್ನಾಡಿಗೆ ಹೋಗುವ ನಮ್ಮ ದೆಹಲಿ ಕನ್ನಡಿಗರು ಜೂನ್ ತಿಂಗಳು ಮತ್ತೆ ವಾಪಸ್ ತಮ್ಮ ಕಾಯಕಕ್ಕೆ ಮತ್ತು ಜುಲೈನಲ್ಲಿ ಶಾಲೆಗಳು ಪುನರಾರಂಭವಾಗುವ ಹೊತ್ತಿಗೆ ವಾಪಸ್ ಆಗುವ ದಿನಗಳಿಗೆ ಪೂರ್ವ ತಯಾರಿಯಲ್ಲಿರುತ್ತಾರೆ.

ಪುತ್ತಿಗೆ ಮಠ ಉಡುಪಿಯ ಮಧ್ವ ಮಠ–ಶ್ರೀ ಕೃಷ್ಣ ದೇವರ ಆರಾಧನೆ. ಸಹಸ್ರಾರು ಭಕ್ತಾದಿಗಳನ್ನು ಸೆಳೆಯುವ ಈ ಮಠದ ಒಂದು ಶಾಖಾ ಮಂದಿರ ದೆಹಲಿಯ ವಸಂತಕುಂಜ್‌ನಲ್ಲಿ ಯತಿಕುಲಚಕ್ರವರ್ತಿ ಶ್ರೀ ಶ್ರೀ ಡಾ. ಸುಗುಣೇಂದ್ರ ತೀರ್ಥರು ಸಂಸ್ಥಾನ ಪೂಜೆ ಮಾಡಿ ಭಕ್ತಾದಿಗಳಿಗೆ ಅರ್ಪಿಸಿದ್ದು ವಿಶೇಷ. ಶೂಟಿಂಗ್ ಕ್ರೀಡಾಪಟು ಕುಮಾರಿ ಐಶ್ವರ್ಯ ದೆಹಲಿ ಭೇಟಿ ಸಂದರ್ಭದಲ್ಲಿ ಅವರನ್ನು ಅಭಿನಂದಿಸಿದ್ದು ಕನ್ನಡದ ಕುವರಿ ಜರ್ಮನಿಯಲ್ಲಿ ಕೀರ್ತಿ ತಂದಿರುವುದು ಹೆಮ್ಮೆಯ ವಿಷಯ.

ಆರೋಗ್ಯವಿದ್ದರೆ ಎಲ್ಲವೂ ಚೆಂದ. ಉತ್ತಮ ಆರೋಗ್ಯಕ್ಕಾಗಿ ಆಹಾರ, ವ್ಯಾಯಾಮ ಮತ್ತು ಶಿಸ್ತು ಅತ್ಯಗತ್ಯ. ಗುರುಗಾಂವ್‌ನ ಖ್ಯಾತ ಆಸ್ಪತ್ರೆಯಲ್ಲಿ ಸೇವೆ ಮಾಡುತ್ತಿರುವ ಡಾ. ನಿರಂಜನ್ ನಾಯ್ಕ್ ಅವರು ಕಳೆದ ಸಂಚಿಕೆಯಲ್ಲಿ ನೀಡಿದ ಆರೋಗ್ಯಕರ ಜೀವನ ಶೈಲಿಯ ಕುರಿತ ಮಾಹಿತಿ ಆರೋಗ್ಯ ಜೀವನ ಸುಧಾರಣೆಗೆ ಉತ್ತಮವಾದ ಮಾರ್ಗಸೂಚಿಯಾಗಿದೆ. ಅದೇ ರೀತಿಯಲ್ಲಿ ಜೂನ್ 21ರಂದು ಹಲವಾರು ಭಾಗಗಳಲ್ಲಿ ನೆಲೆಸಿರುವ ಕನ್ನಡಿಗರು ಯೋಗಾಸನ ಮಾಡುವ ಮೂಲಕ ಆರೋಗ್ಯಕರ ಜೀವನ ಶೈಲಿಯೆಡೆಗೆ ಹೆಜ್ಜೆ ಇಟ್ಟಿರುವುದು ಸುವಿಚಾರ. ದೆಹಲಿ ಕರ್ನಾಟಕ ಸಂಘದ ಆವರಣದಲ್ಲೂ 21ರ ಬೆಳಿಗ್ಗೆ 12ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲಾಯಿತು.

ಇನ್ನು ಜೂನ್ ಕಳೆಯುತ್ತಿದ್ದಂತೆ ಜುಲೈ ತಿಂಗಳು ದೆಹಲಿ ಕರ್ನಾಟಕ ಸಂಘದ ಚಟುವಟಿಕೆಗಳು ಎಂದಿನಂತೆ ಆರಂಭವಾಗಲಿವೆ. ಜುಲೈ ತಿಂಗಳಲ್ಲಿ ದೆಹಲಿ ಕರ್ನಾಟಕ ಸಂಘದ ವಾರ್ಷಿಕ ಆಚರಣೆ ನಿಗದಿಯಾಗಿದ್ದು ಸ್ಥಳೀಯ ಕನ್ನಡಿಗರಿಗೆ ಹಾಡು ಮತ್ತು ನೃತ್ಯ ತರಬೇತಿಗಳನ್ನು ಆಯೋಜಿಸಲಾಗಿದೆ. ಕರ್ನಾಟಕದಿಂದ ಬರುವ ನುರಿತ ಕಲಾವಿದರು ತರಬೇತಿ ನೀಡಲಿದ್ದು ಎಲ್ಲಾ ಸ್ಥಳೀಯರು ಇದರ ಸದುಪಯೋಗ ಪಡೆಯಬೇಕೆಂದು ಆಶಿಸುತ್ತೇನೆ. ಮಳೆಗಾಲದ ಜುಲೈನಲ್ಲಿ ದೇಶಾದ್ಯಂತ ಸಾಕಷ್ಟು ಮಳೆಯಾಗಿ ದೆಹಲಿಯ ಬಿಸಿಲು ಶಾಖದಿಂದ ಬೇಸತ್ತ ರೈತರಿಗೆ ಮಳೆ ಸಮೃದ್ಧಿ ತರಲಿ.

ಕರ್ನಾಟಕದ ಪರಂಪರೆ, ಆಚರಣೆ ಮತ್ತು ಸಮಾರಂಭಗಳನ್ನು ದೆಹಲಿ ಕರ್ನಾಟಕ ಸಂಘದಲ್ಲಿ ವಿನೂತನ ಯೋಚನೆ ಮತ್ತು ಯೋಜನೆಯೊಂದಿಗೆ ತರಲು ನಮ್ಮ ಸಮಿತಿ ಪಣತೊಟ್ಟಿದೆ. ಸ್ಥಳೀಯ ಕನ್ನಡಿಗರ ಆಶೋತ್ತರಗಳಿಗೆ ಸ್ಪಂದಿಸುವಂತಹ ಕಾರ್ಯಕ್ಕಾಗಿ ನಮ್ಮಸಮಿತಿ ಯೋಜನೆ ರೂಪಿಸುತ್ತಿದೆ. ❑

ಸಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಬಾಳ್ಗೆ
ಸಿರಿಗನ್ನಡಂ ನಮ್ಮ ದಿಲ್ಲಿಗೆ

ರಾಧಾಕೃಷ್ಣ
ಪ್ರಧಾನ ಕಾರ್ಯದರ್ಶಿ

ಭಗವಾನ್ ಶ್ರೀ ಕೃಷ್ಣನ ಆಶೀರ್ವಾದದೊಂದಿಗೆ, ಶ್ರೀ ಪುತ್ತಿಗೆ ಮಠ ಉಡುಪಿ ಇದರ ಹೊಸ ಶಾಖೆಯನ್ನು ನವದೆಹಲಿಯ ವಸಂತಕುಂಜ್‌ನಲ್ಲಿ ಆರಂಭಗೊಂಡಿದ್ದು, ದಿನಾಂಕ 27, 28, 29 ಜೂನ್ ತಿಂಗಳಲ್ಲಿ ಸಂಸ್ಥಾನ ಪೂಜೆ ಪ್ರಾರ್ಥನೆಗಳು, ಪ್ರಸಾದ ವಿತರಣೆ ಸರಾಗವಾಗಿ ನಡೆದವು.

ಸುಮಾರು 800 ವರ್ಷಗಳ ಹಳೆಯ ಶ್ರೀ ಮಧ್ವ ಗುರು ಪರಂಪರೆಯ ಭಗವಾನ್ ಶ್ರೀ ಪಾಂಡುರಂಗ ವಿಠ್ಠಲ ಮತ್ತು ಶ್ರೀ ರುಕ್ಮಿಣಿ ಸತ್ಯಭಾಮ ಸಹಿತ ಪುತ್ಥಳಿಯನ್ನು, ವಿಶ್ವ ಮಾನ್ಯ ಯತಿಕುಲಚಕ್ರವರ್ತಿ ಡಾ. ಶ್ರೀ ಶ್ರೀ ಸುಗುಣೇಂದ್ರ ತೀರ್ಥಸ್ವಾಮೀಜಿಯವರ ಪಾವನ ಹಸ್ತದಿಂದ ಅನಾವರಣಗೊಳಿಸಲಾಯಿತು.

ದಿನಾಂಕ 27.06.2026 ರಂದು ದೆಹಲಿ ಕರ್ನಾಟಕ ಸಂಘದ ಪರವಾಗಿ ಅಧ್ಯಕ್ಷ ಶ್ರೀ ರೇಣುಕುಮಾರ್ ಆರ್., ಜಂಟಿ ಕಾರ್ಯದರ್ಶಿ ಶ್ರೀಮತಿ ಅಶ್ವಿನಿ ಬಿ.ಎಸ್., ಕಾರ್ಯಕಾರಿ ಸಮಿತಿಯ ಸದಸ್ಯರುಗಳಾದ ಶ್ರೀಮತಿ ಪೂಜಾ ಪಿ. ರಾವ್., ಶ್ರೀ ಶಿವಪ್ಪ ಎಂ., ಮತ್ತು ಶ್ರೀಮತಿ ಜಯಶ್ರೀ ಬಸವರಾಜು ಅವರು ನೂತನವಾಗಿ ಆರಂಭಗೊಂಡ ಮಠಕ್ಕೆ ಭೇಟಿ ನೀಡಿ ಸ್ವಾಮೀಜಿಯವರ ಆಶೀರ್ವಾದ ಪಡೆದರು. ❑

ದಿನಾಂಕ 27.06.2026 ರಂದು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ರೇಣುಕುಮಾರ್ ಆರ್. ಅವರನ್ನು ನವದೆಹಲಿಯ ಉದ್ಯಮಿ ಶ್ರೀ ಸಾಕೇತ್ ಅವರು ಹೂಗುಚ್ಛ ನೀಡಿ ಅಭಿನಂದಿಸುತ್ತಿರುವುದು

ಸಂಘದ ಮುಂಬರುವ ಕಾರ್ಯಕ್ರಮಗಳು

19 ಜುಲೈ 2026 — ಭಾನುವಾರ
ಸಂಜೆ : 4.00 ಗಂಟೆಗೆ

ದೆಹಲಿ ಕರ್ನಾಟಕ ಸಂಘದ ವಾರ್ಷಿಕೋತ್ಸವ ಅಂಗವಾಗಿ ಕರ್ನಾಟಕದ ಪ್ರಸಿದ್ಧ ತರಬೇತುದಾರರಿಂದ ತರಬೇತಿ ಪಡೆದ ಕಲಾವಿದರಿಂದ ಜಾನಪದ ಸಮೂಹ ಗಾಯನ, ಜಾನಪದ ನೃತ್ಯ ಮತ್ತು ನೃತ್ಯರೂಪಕ ಸಾಂಸ್ಕೃತಿಕ ಕಾರ್ಯಕ್ರಮಗಳು. ಕ್ರಿಕೆಟ್ ಪಂದ್ಯಾವಳಿ, ಒಳಾಂಗಣ ಮತ್ತು ಹೊರಾಂಗಣ ಸ್ಪರ್ಧೆಗಳ ಬಹುಮಾನ ವಿತರಣಾ ಸಮಾರಂಭ.

02 ಆಗಸ್ಟ್ 2026 — ಭಾನುವಾರ
ಸಂಜೆ : 5.00 ಗಂಟೆಗೆ

ಶ್ರೀ ನಂದಿಕೇಶ್ವರ ಪ್ರಸಾದಿತ ಯಕ್ಷಗಾನ ಮಂಡಳಿ ಶ್ರೀ ಕ್ಷೇತ್ರ ಮೆಕ್ಕೆಕಟ್ಟು, ಕಲಾವಿದರಿಂದ ಯಕ್ಷಗಾನ ಪ್ರದರ್ಶನ

15 ಆಗಸ್ಟ್ 2026 — ಶನಿವಾರ
ಬೆಳಿಗ್ಗೆ : 8.30 ಗಂಟೆಗೆ

ಸಂಘದಲ್ಲಿ 79ನೇ ಸ್ವಾತಂತ್ರ್ಯ ದಿನಾಚರಣೆ, ರಾಷ್ಟ್ರ ಧ್ವಜಾರೋಹಣ.

ಆರೋಗ್ಯಕರ ಮತ್ತು ಸುಖಮಯ ಜೀವನಕ್ಕೆ "ಯೋಗ ಅತ್ಯುತ್ತಮ ನೈಸರ್ಗಿಕ ಮಾರ್ಗ"

ದೆಹಲಿ ಕರ್ನಾಟಕ ಸಂಘವು ದಿನಾಂಕ 21.06.2026 ರಂದು 12ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ಸಂಘದ ಆವರಣದಲ್ಲಿ ಆಯೋಜಿಸಿತ್ತು. ಈ ಶಿಬಿರಕ್ಕೆ ನವದೆಹಲಿಯ ಅಖಿಲ ಭಾರತ ಆಯುರ್ವೇದ ಸಂಸ್ಥೆಯ ಪ್ರಾಧ್ಯಾಪಕರು ಮತ್ತು ಸ್ವಸ್ಥವೃತ್ತ ವಿಭಾಗದ ಮುಖ್ಯಸ್ಥರಾದ (HOD) ಡಾ. ಶಿವಕುಮಾರ ಹರ್ತಿ ಅವರು ಮುಖ್ಯ ಅಥಿತಿಗಳಾಗಿ ಆಗಮಿಸಿದ್ದರು.

"ಡಾ. ಶಿವಕುಮಾರ ಹರ್ತಿಯವರು ಶಿಬಿರದಲ್ಲಿ ಪಾಲ್ಗೊಂಡಿದ್ದ ಸದಸ್ಯರನ್ನು ಉದ್ದೇಶಿಸಿ ಮಾತನಾಡುತ್ತಾ, ಯೋಗದ ಮಹತ್ವ, ಅದರ ಆರೋಗ್ಯಕರ ಪ್ರಯೋಜನಗಳು ಹಾಗೂ ದೈನಂದಿನ ಜೀವನದಲ್ಲಿ ಯೋಗಾಭ್ಯಾಸದ ಅಗತ್ಯತೆಯ ಕುರಿತು ವಿವರಿಸಿದರು. ವಯಸ್ಸಾಗುವ ಪ್ರಕ್ರಿಯೆಯನ್ನು ಸುಲಭಗೊಳಿಸಲು ಯೋಗ ಹೇಗೆ ಸಹಾಯ ಮಾಡುತ್ತದೆ, ಯಾವ ಆಸನಗಳು ಉತ್ತಮ ಹಾಗೂ ಆರೋಗ್ಯಕರ ವಯಸ್ಸಾಗುವಿಕೆಗೆ ಯೋಗದ ಪ್ರಯೋಜನಗಳೇನು? ವಯಸ್ಸಾದಂತೆ ಕೀಲುಗಳ ನಮ್ಯತೆ (Flexibility) ಕಡಿಮೆಯಾಗುತ್ತದೆ. ಯೋಗಾಸನಗಳು ಕೀಲುಗಳ ಜಡತ್ವವನ್ನು ದೂರ ಮಾಡಿ, ಮೂಳೆಗಳನ್ನು ಬಲಪಡಿಸುತ್ತವೆ. ವಯಸ್ಸಾದವರಲ್ಲಿ ಸಮತೋಲನ ತಪ್ಪಿ ಬೀಳುವ ಸಾಧ್ಯತೆಯೂ ಹೆಚ್ಚಾಗಿರುತ್ತದೆ. ಯೋಗವು ದೇಹದ ಸ್ಥಿರತೆ ಮತ್ತು ಸಮತೋಲನವನ್ನು ಸುಧಾರಿಸುತ್ತದೆ ಎಂದರು.

ಯೋಗ ಮತ್ತು ಪ್ರಾಣಾಯಾಮಗಳು ಒತ್ತಡ, ಆತಂಕವನ್ನು ಕಡಿಮೆ ಮಾಡಿ, ಮೆದುಳಿನ ಕಾರ್ಯಕ್ಷಮತೆಯನ್ನು ಹೆಚ್ಚಿಸುತ್ತವೆ ಮತ್ತು ಉತ್ತಮ ನಿದ್ರೆಗೆ ಸಹಕರಿಸುತ್ತವೆ. ರಕ್ತ ಪರಿಚಲನೆಯನ್ನು ಸುಧಾರಿಸುವ ಮೂಲಕ ರಕ್ತದೊತ್ತಡವನ್ನು (Blood Pressure) ನಿಯಂತ್ರಣದಲ್ಲಿಡಲು ಯೋಗ ನೆರವಾಗುತ್ತದೆ ಎಂದ ಅವರು ಯೋಗದ ಇತರ ಉಪಯುಕ್ತ ಮಾಹಿತಿಗಳನ್ನು ಹಂಚಿಕೊಂಡರು.

ಇವರ ಸಹಕಾರದಿಂದ ತಮ್ಮ ಸಂಸ್ಥೆಯ ತರಬೇತುದಾರ ಶ್ರೀ ರಾಜೇಶ್‌ರವರು ಭಾಗವಹಿಸಿ ದೆಹಲಿ ಕನ್ನಡಿಗರಿಗೆ ಒಂದು ಗಂಟೆಗಳ ಕಾಲ ಯೋಗ ತರಬೇತಿ ನೀಡಿದರು.

ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರು ಮತ್ತು ಆಯುಷ್ ಮಂತ್ರಾಲಯದಲ್ಲಿ ಜಂಟಿ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿರುವ ಡಾ. ಅಶೋಕ್ ಎಂ.ಈಟಿ ಅವರು ಈ ಯೋಗ ಶಿಬಿರಕ್ಕೆ ಟಿ–ಶರ್ಟ್ ಮತ್ತು ಯೋಗ ಮ್ಯಾಟ್ ನೀಡುವ ಮೂಲಕ ಸಹಕರಿಸಿದರು.

ಮುಖ್ಯ ಅತಿಥಿಗಳಿಗೆ ಮತ್ತು ತರಬೇತುದಾರರಿಗೆ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ ಅವರು ಸಂಘದ ಸ್ಮರಣಿಕೆ ಮತ್ತು ಶಾಲು ಹೊದಿಸಿ ಸನ್ಮಾನಿಸಿದರು. ಇದೇ ಸಂದರ್ಭದಲ್ಲಿ ಖಜಾಂಚಿ ಶ್ರೀಮತಿ ಆಶಾಲತಾ ಎಂ., ಜಂಟಿ ಕಾರ್ಯದರ್ಶಿ ಶ್ರೀಮತಿ ಅಶ್ವಿನಿ ಬಿ.ಎಸ್., ಕಾರ್ಯಕಾರಿ ಸಮಿತಿಯ ಸದಸ್ಯರುಗಳಾದ ಶ್ರೀ ಶಿವಪ್ಪ ಎಂ., ಶ್ರೀ ರಾಜ್‌ಕುಮಾರ್ ಅವರು ಉಪಸ್ಥಿತರಿದ್ದರು. ❑

ಶಿವಪ್ಪ ಎಂ.

ಭಾರತಕ್ಕೆ ಬೆಳ್ಳಿ ಪದಕ ತಂದುಕೊಟ್ಟ ಹುಬ್ಬಳ್ಳಿಯ ಐಶ್ವರ್ಯ ಬಿ. ಅವರಿಗೆ ದೆಹಲಿ ಕರ್ನಾಟಕ ಸಂಘದ ಅಭಿನಂದನೆ

ಜರ್ಮನಿಯ ಜೂಲ್‌ನಲ್ಲಿ ನಡೆದ ಐಎಸ್‌ಎಸ್‌ಎಫ್ ಅಂತರರಾಷ್ಟ್ರೀಯ ಕಿರಿಯರ ಶೂಟಿಂಗ್ ಚಾಂಪಿಯನ್ ಶಿಪ್‌ನ 50 ಮೀಟರ್ ಪಿಸ್ತೂಲ್ ವೈಯಕ್ತಿಕ ವಿಭಾಗದಲ್ಲಿ ಭಾರತವನ್ನು ಪ್ರತಿನಿಧಿಸಿ ಬೆಳ್ಳಿ ಪದಕ ಗೆದ್ದ ಕರ್ನಾಟಕದ ಆರೂಢರ ನಗರವಾದ ಹುಬ್ಬಳ್ಳಿಯ ಪ್ರತಿಭಾವಂತ ಶೂಟರ್ ಕು. ಐಶ್ವರ್ಯ ಬಿ. ಅವರನ್ನು ದಿನಾಂಕ 27.06.2026 ರಂದು ದೆಹಲಿ ಕರ್ನಾಟಕ ಸಂಘದ ಪರವಾಗಿ ಅಭಿನಂದಿಸಲಾಯಿತು.

ಅಧ್ಯಕ್ಷರಾದ ಶ್ರೀ ರೇಣುಕುಮಾರ್ ಆರ್., ಜಂಟಿ ಕಾರ್ಯದರ್ಶಿ ಶ್ರೀಮತಿ ಅಶ್ವಿನಿ ಬಿ.ಎಸ್. ಅವರು ಸಂಘದ ಪರವಾಗಿ ಅಭಿನಂದಿಸಿ ಶುಭ ಹಾರೈಸಿದರು. ಕಾರ್ಯಕ್ರಮದಲ್ಲಿ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರುಗಳಾದ ಶ್ರೀಮತಿ ಪೂಜಾ ಪಿ. ರಾವ್, ಶ್ರೀ ಶಿವಪ್ಪ ಎಂ., ಶ್ರೀಮತಿ ಜಯಶ್ರೀ ಬಸವರಾಜು ಬಿ.ಕೆ. ಹಾಗೂ ಸಂಘದ ಆಜೀವ ಸದಸ್ಯ ಶ್ರೀ ಮಹೇಶ್ವರ ಕೋಳಿವಾಡ ಉಪಸ್ಥಿತರಿದ್ದರು.

ಸೇನೆಯಲ್ಲಿ ಸೇವೆ ಸಲ್ಲಿಸಿರುವ ಐಶ್ವರ್ಯ ಅವರ ತಂದೆ ಶ್ರೀ ರವಿಚಂದ್ರ ಬಾಳೆ ಅವರು ಹುಬ್ಬಳ್ಳಿಯಲ್ಲಿ ಶೂಟಿಂಗ್ ಅಕಾಡೆಮಿ ನಡೆಸುತ್ತಿದ್ದಾರೆ.

2017 ರಲ್ಲಿ ತಿರುವನಂತಪುರದಲ್ಲಿ ನಡೆದ 61ನೇ ನ್ಯಾಷನಲ್ ಶೂಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಭಾಗವಹಿಸಿದ್ದರು. ದಸರಾ ಉತ್ಸವ, 2019ರಲ್ಲಿ ಐಡಬ್ಲೂಎಎಸ್ ಹೈದರಾಬಾದ್, 2018 ರಲ್ಲಿ ಐಎಸ್‌ಎಸ್‌ಎಫ್ ಅಂತರರಾಷ್ಟ್ರೀಯ ಶೂಟಿಂಗ್ ಚಾಂಪಿಯನ್ ಶಿಪ್‌ನಲ್ಲಿ ದ್ವಿತೀಯ ಸ್ಥಾನ ಪಡೆದರು. ಹೀಗೆ ಹಲವಾರು ಸ್ಪರ್ಧೆಗಳಲ್ಲಿ ಭಾಗವಹಿಸಿದ್ದಾರೆ.

ಐಶ್ವರ್ಯ ಅವರು ಮುಂದೆ ಅಂತರರಾಷ್ಟ್ರೀಯ ಸೀನಿಯರ್ ಶೂಟಿಂಗ್ ಚಾಂಪಿಯನ್‌ಶಿಪ್, ಏಷಿಯನ್ ಗೇಮ್ಸ್, ಕಾಮನ್‌ವೆಲ್ತ್ ಗೇಮ್ಸ್ ಮತ್ತು ಒಲಂಪಿಕ್ ಗೇಮ್ಸ್ ಇವುಗಳಲ್ಲಿ ಭಾಗವಹಿಸಿ ತಮ್ಮ ಛಾಪನ್ನು ಮೂಡಿಸುವ ಗುರಿಯನ್ನು ಹೊಂದಿದ್ದಾರೆ.

ಐಶ್ವರ್ಯ ಅವರು ತಮ್ಮ ತಂದೆ ಶ್ರೀ ರವಿಚಂದ್ರ ಬಾಳೆ ಹೊಸೂರ ಹಾಗೂ ದೊಡ್ಡಪ್ಪ ಶ್ರೀ ಶಿವಾನಂದ ನಡೆಸುತ್ತಿರುವ ಹುಬ್ಬಳ್ಳಿಯ ಶೂಟಿಂಗ್ ಅಕಾಡೆಮಿಯಲ್ಲೇ ತರಬೇತಿ ಪಡೆಯುತ್ತಿದ್ದಾರೆ. ಈ ಹಿಂದೆ 2023ರಲ್ಲಿ ಭೋಪಾಲ್‌ನಲ್ಲಿ ನಡೆದ ರಾಷ್ಟ್ರೀಯ ಶೂಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಚಿನ್ನದ ಪದಕ ಗೆದ್ದಿದ್ದ ಇವರು, ಇದೀಗ ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತಕ್ಕೆ ಬೆಳ್ಳಿ ಪದಕ ತಂದು ದೇಶ ಮತ್ತು ರಾಜ್ಯಕ್ಕೆ ಕೀರ್ತಿ ತಂದಿದ್ದಾರೆ.

ಕು. ಐಶ್ವರ್ಯ ಬಿ. ಅವರ ಈ ಸಾಧನೆಗೆ ದೆಹಲಿ ಕರ್ನಾಟಕ ಸಂಘವು ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿ, ಅವರ ಮುಂದಿನ ಕ್ರೀಡಾ ಜೀವನ ಇನ್ನಷ್ಟು ಯಶಸ್ವಿಯಾಗಲಿ ಎಂದು ಶುಭ ಹಾರೈಸುತ್ತದೆ. ❑

ಜಯಶ್ರೀ ಬಸವರಾಜು ಬಿ.ಕೆ.

ಮಾನ್ಯರೇ,

2025–26 ಶೈಕ್ಷಣಿಕ ವರ್ಷದಲ್ಲಿ 10ನೇ ಮತ್ತು 12ನೇ ತರಗತಿಯಲ್ಲಿ ಶೇ. 90 ಮತ್ತು ಅದಕ್ಕಿಂತ ಹೆಚ್ಚು ಅಂಕ ಪಡೆದ ಹಾಗೂ 2025–26ರ ಸಾಲಿನಲ್ಲಿ ವಿಜ್ಞಾನ, ಕಲೆ, ವಾಣಿಜ್ಯ, ಇಂಜಿನಿಯರಿಂಗ್, ವೈದ್ಯಕೀಯ, ಫೈನ್ ಆರ್ಟ್ಸ್, ಕಾನೂನು ಮುಂತಾದ ವಿಷಯಗಳಲ್ಲಿ ಪದವಿಗಳನ್ನು ಪಡೆದಿರುವ ಸಂಘದ ಆಜೀವ ಸದಸ್ಯರ ಮಕ್ಕಳ ವಿವರವನ್ನು ಅಭಿಮತದ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಆದ್ದರಿಂದ, ಈ ಶೈಕ್ಷಣಿಕ ವರ್ಷದಲ್ಲಿ ಶೇ 90ಕ್ಕಿಂತ ಹೆಚ್ಚು ಅಂಕ ಗಳಿಸಿರುವ ಹಾಗೂ ಪದವೀಧರ(ರೆ)ಯಾಗಿರುವ ಸಂಘದ ಸದಸ್ಯರ ಮಕ್ಕಳ ಅಂಕಪಟ್ಟಿ, ಭಾವಚಿತ್ರ, ಪೋಷಕರ ಹೆಸರು ಮುಂತಾದ ವಿವರಗಳನ್ನು ದಿನಾಂಕ 31.07.2026ಕ್ಕಿಂತ ಮೊದಲು ಸಂಘದ ಇಮೇಲ್ : dksangha@gmail.com ಗೆ ಕಳುಹಿಸಿಕೊಡಬೇಕಾಗಿ ವಿನಂತಿ.

ಪ್ರಧಾನ ಕಾರ್ಯದರ್ಶಿ

ಮಾಸ್ತಿಯವರ ಬದುಕಿನಲ್ಲಿ 'ಪ್ರಪತ್ತಿ' ಭಾವ

ಲೇಖಕರು: ಎಸ್.ಆರ್. ವಿಜಯಶಂಕರ

ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಸಾಹಿತ್ಯದ ಪರಿಚಯ ಉಳ್ಳವರಿಗೆ ಜೂನ್ ತಿಂಗಳಲ್ಲಿ ಅವರ ವಿಶೇಷ ನೆನಪು ಆಗದಿರದು. ಅವರ ಜನನ ಮರಣಗಳೆರಡರ ದಿನಾಂಕವೂ ಜೂನ್ ಆರು. (06.06.1891–06.06.1986) ಕನ್ನಡ ನವೋದಯ ಕಾಲದಲ್ಲಿ ನಾಡಿನ ಸಾಹಿತ್ಯ, ಸಂಸ್ಕೃತಿ, ಭಾಷೆಗಳನ್ನು ಕಟ್ಟಿದ ಮುಖ್ಯರಲ್ಲಿ ಮಾಸ್ತಿಯವರು ಮಹತ್ವದ ಕೊಡುಗೆಗಳನ್ನು ಇತ್ತವರು. ಅವರು ತಮ್ಮ ಆತ್ಮಕತೆ 'ಭಾವ'ದಲ್ಲಿ ಹೇಳಿರುವಂತೆ, ಮಹಾರಾಜರ ಮೈಸೂರು ರಾಜ್ಯ ಸರಕಾರದ ಉನ್ನತ ಅಧಿಕಾರಿಯಾಗಿದ್ದ ಅವರು ರೈತನೊಬ್ಬನ ಅಹವಾಲಿನ ಸಮಯದಲ್ಲಿ ತೆರಿಗೆ ಕಟ್ಟದಿದ್ದರೆ ಹೇಗೆ? ನಿಮಗೆ ತಿಳಿದಿರಬೇಕಲ್ಲ. ರೂಲ್ಸಿನಲ್ಲಿ ಎಲ್ಲಾ ವಿವರವಾಗಿ ಇದೆಯಲ್ಲ ಎಂದಾಗ ನಿಮ್ಮ ರೂಲ್ಸ್ ಇರುವುದೆಲ್ಲಾ ಇಂಗ್ಲಿಷಿನಲ್ಲಿ. ನಮ್ಮಂತಹವರಿಗೆ ಹೇಗೆ ತಿಳಿಯಬೇಕು ಸ್ವಾಮಿ, ಎಂದನಂತೆ. ಆ ಮಾತು, ಎಂ.ಎ. ಇಂಗ್ಲಿಷ್ ಸಾಹಿತ್ಯದಲ್ಲಿ ರ್‍ಯಾಂಕ್ ಪಡೆದ ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ಪ್ರಥಮ ರ್‍ಯಾಂಕ್ ಪಡೆದು ಅಸಿಸ್ಟೆಂಟ್ ಕಮಿಷನರ್ ಆಗಿದ್ದ ಮಾಸ್ತಿಯವರ ಮೇಲೆ ಅಚ್ಚಳಿಯದ ಪ್ರಭಾವ ಬೀರಿತು. ಮುಂದೆ ಆಡಳಿತದಲ್ಲಿ ಅವಕಾಶ ಮಾಡಿ ಅವರು ಅನುಸರಿಸಿದ ಕನ್ನಡ ಹಾಗೂ ಕನ್ನಡವನ್ನು ಸರ್ವಾಂಗೀಣವಾಗಿ ಬೆಳೆಸಲು ಮಾಡಿದ ಸಾಹಿತ್ಯ ಸಂಘಟನೆಗಳ ಕೆಲಸಗಳು ಕನ್ನಡ ಚರಿತ್ರೆಯ ಭಾಗವಾಗಿದೆ.

ವೆಂಕಟೇಶ ಅಯ್ಯಂಗಾರರು ಹುಟ್ಟಿದ ಮಾಸ್ತಿ ಗ್ರಾಮ ಇರುವುದು ಕೋಲಾರ ಜಿಲ್ಲೆ ಮಾಲೂರು ತಾಲೂಕಿನಲ್ಲಿ. ಅಲ್ಲಿ ಪಾಳು ಬಿದ್ದಿದ್ದ ಮಾಸ್ತಿಯವರ ಮನೆ ಜಾಗದಲ್ಲಿ ಹೊಸದಾಗಿ ಹಿಂದಿನ ಮನೆಯ ರೀತಿಯಲ್ಲೇ ನೂತನ ಕಟ್ಟಡವೊಂದನ್ನು ನಿರ್ಮಿಸಿ ಮಾಸ್ತಿ ಟ್ರಸ್ಟ್ ಗ್ರಂಥಾಲಯವೊಂದನ್ನು ನಡೆಸುತ್ತಿದೆ. ಜೂನ್ ಆರರಂದು ಅಲ್ಲಿ ಮಾಸ್ತಿ ಬಗ್ಗೆ ಅದ್ದೂರಿ ಕಾರ್ಯಕ್ರಮ ನಡೆಯಿತು. ಊರಿನವರ ಸಂಭ್ರಮದ ಮೆರವಣಿಗೆ ಬಳಿಕ ಮಾಲೂರು ಕ್ಷೇತ್ರದ ಶಾಸಕ ಕೆ.ವೈ. ನಂಜೇಗೌಡರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಆ ದಿನ ಅಲ್ಲಿ ಮಾಸ್ತಿ ಗ್ರಂಥಾಲಯವನ್ನು ಉಪಯೋಗಿಸಿಕೊಂಡು ಓದಿ ಪ್ರವೇಶ ಪರೀಕ್ಷೆಗಳನ್ನು ಪಾಸು ಮಾಡಿ ಉದ್ಯೋಗ ಪಡೆದ ಊರಿನ ಯುವಕರನ್ನು ನೋಡಿ ಸಂತೋಷವಾಯಿತು. ಅವರು ರಜೆ ಹಾಕಿ ಮಾಸ್ತಿ ಕಾರ್ಯಕ್ರಮಕ್ಕಾಗಿಯೇ ಬಂದಿದ್ದರು. ಮಾಸ್ತಿ ಟ್ರಸ್ಟ್‌ನ ಅಧ್ಯಕ್ಷರಾದ ಮಾವಿನಕೆರೆ ರಂಗನಾಥನ್ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾಸ್ತಿ ಸಣ್ಣ ಕತೆಗಳ ಬಗ್ಗೆ ಡಾ. ಎಚ್.ಎಸ್. ಸತ್ಯ ನಾರಾಯಣ ಮಾತನಾಡಿದರು. 'ಮಾಸ್ತಿ ಜೀವನ ಮತ್ತು ಸಾಹಿತ್ಯ' ಕುರಿತಾಗಿ ಅಲ್ಲಿ ಮಾತನಾಡುವುದಕ್ಕಾಗಿ ಮಾಡಿಕೊಂಡ ತಯಾರಿಯ ಕೆಲವು ಅಂಶಗಳನ್ನು ನಿಮ್ಮೊಡನೆ ಹಂಚಿಕೊಳ್ಳುತ್ತಿದ್ದೇನೆ.

ಮಾಸ್ತಿ ಬರೆದದ್ದು ಹೇಗೆ ಉತ್ತಮ ಸಾಹಿತ್ಯವೋ ಹಾಗೆಯೇ ಅವರಾಡುವ ಮಾತೂ ಉತ್ತಮ ಸಾಹಿತ್ಯವಾಗಬಲ್ಲದು ಎಂದು ಸಾಹಿತಿ ಕೋ. ಚೆನ್ನಬಸಪ್ಪನವರು ಮಾಸ್ತಿ ಬಗ್ಗೆ ಬರೆದ 'ಸ್ಥಿತಪ್ರಜ್ಞ' ಎಂಬ ಲೇಖನದಲ್ಲಿ ಹಲವು ಉದಾಹರಣೆಗಳನ್ನಿತ್ತು ಹೇಳುತ್ತಾರೆ. ಅದನ್ನು ನೋಡಿದಾಗ ಮಾಸ್ತಿಯವರು ಹೇಳಿದ ಒಂದು ಮಾತು ನೆನಪಾಯಿತು. ಒಳ್ಳೆಯದಕ್ಕೂ

ಕೆಟ್ಟದಕ್ಕೂ ನಿರಂತರವಾದ ಸಂಘರ್ಷ ನಡೆಯುತ್ತಿರುತ್ತದೆ. ಬಹಳ ಸಲ ಅದು ಕಣ್ಣಿಗೆ ಕಾಣುವುದಿಲ್ಲ. ಆದರೆ ಅಂತಹ ಸಂಘರ್ಷ ನಡೆಯುತ್ತಿರುವುದು ನಮ್ಮ ಅಂತಃಪ್ರಜ್ಞೆಗೆ ಗೋಚರಿಸಬೇಕು. ಅದರಲ್ಲಿ ನಾವು ಯಾರ ಪರ ಎಂಬ ನಿರ್ಣಯ ನಮಗೆ ಸ್ಪಷ್ಟವಾಗಿ ಇರಬೇಕು." ಇದನ್ನು ಕೇಳಿದಾಗ ನನ್ನ ಮನಸ್ಸಿಗೆ ಆ ಸಂಘರ್ಷದ ಸ್ವರೂಪ ಹಗಲು–ಕತ್ತಲುಗಳ ರೂಪದಲ್ಲಿ ಅರಿವಾಯಿತು. ಹಗಲಿನ ಬೆಳಕಲ್ಲಿ ಕತ್ತಲು ಅದರ ಜತೆ ಮಾಡುತ್ತಿರುವ ಸಂಗ್ರಾಮ ಕಣ್ಣಿಗೆ ಕಾಣುವುದಿಲ್ಲ. ಹಾಗೆಯೇ ನಡುರಾತ್ರಿಯಲ್ಲಿ ಕತ್ತಲು ಮೇಲುಗೈ ಸಾಧಿಸಿರುವಾಗ ಆದರೊಡನೆ ಹೋರಾಡುತ್ತಿರುವ ಬೆಳಕು ಮನಸ್ಸಿಗೆ ಮಾತ್ರ ಗೋಚರಿಸಲು ಸಾಧ್ಯ. ಆಗ ನಾವು ಯಾರ ಪರವಾಗಿ ಇರುತ್ತೇವೆ ಎಂಬುದು ನಮ್ಮ ಮನಸ್ಥಿತಿಯ ಸೂಚನೆ.

ಅವರು ಸದಾ ಒಳ್ಳೆಯದನ್ನೇ ಕಾಣುತ್ತಾರೆ. ಸಂಘರ್ಷ ಅವರ ಜಾಯಮಾನ ಅಲ್ಲ ಎಂಬ ವಿಚಾರ ಸಾಹಿತ್ಯ ವಿಮರ್ಶಾ ವಲಯದಲ್ಲಿದೆ. ಅವರು ತಮ್ಮ ಕತೆಗಳಲ್ಲಿ ಜಗತ್ತಿನ ಎಲ್ಲಾ ಒಳ್ಳೆತನಗಳನ್ನು ಹಿಡಿದಿಡಲು ಬಯಸುತ್ತಾರೆ ಎಂಬ ಒಂದು ವಿಮರ್ಶಾ ವಿಚಾರವಿದೆ. ಮಾಸ್ತಿಯವರು ತಮ್ಮ ಸಾಹಿತ್ಯದಲ್ಲಿ 'ಜಾಗತಿಕ ಒಳ್ಳೆತನ'ವನ್ನು ಸದಾ ಎತ್ತಿ ತೋರಿಸಲು ಬಯಸುತ್ತಾರೆ ಎಂದು ಡಾ. ಎಚ್.ಎಸ್. ಸತ್ಯನಾರಾಯಣ ಹೇಳಿದರು. ಮಾಸ್ತಿಯವರು ತಮ್ಮ ಹಲವು ಕತೆ, ಬರಹಗಳಲ್ಲಿ ಓದುಗರಿಗೆ ಒಳ್ಳೆಯದಕ್ಕೂ ಕೆಟ್ಟದಕ್ಕೂ ನಿರಂತರವಾಗಿ ನಡೆಯುವ ಸಂಘರ್ಷದಲ್ಲಿ 'ಒಳ್ಳೆಯದು' ಯಾವುದು ಎಂಬುದನ್ನು ಗುರುತಿಸಲು ಸಹಕರಿಸುವ ಉದ್ದೇಶ ಹೊಂದಿದ್ದಾರೆ. ಈ ದೃಷ್ಟಿಯಿಂದ ಮಾಸ್ತಿಯವರ ಹಲವು ಬರಹಗಳಲ್ಲಿ ನೀತಿ ಸೂಚನೆ ಇದೆ.

ಮೇಲೆ ಹೇಳಿದ ಮಾತುಗಳ ಸ್ಪಷ್ಟತೆಯನ್ನು ಮಾಸ್ತಿಯವರು ಬರೆದ 'ಯಶೋಧರಾ' ನಾಟಕದ ಬುದ್ಧನ ಮಾತುಗಳಲ್ಲಿ ಹೀಗೆ ಸೂಚಿಸಿದೆ: "ಒಳಗೆ ಬೆಳಗುವ ಬೆಳಕ ಸರಿಪಡಿಸಿಕೊಳಬೇಕು. ಬಡವನಿಗೆ ಮನೆಯೊಳೇ ನಿಧಿಯೊಂದ ಹುಗಿದಿಟ್ಟು ಎಲ್ಲಿರುವುದೆಂದು ಹೇಳಿದ ರೀತಿ, ಮನುಜನಿಗೆ ಅವನೊಳಗೆ ನಿಲಿಸಿರುವ ಬುದ್ಧಿ, ಅದರಿಂದವನು ಒಳಗಿರುವ ಅರಿವ ಶಕ್ತಿಯ ಅಳವನಾರೈಸಿ ಹಿರಿದಾಗುವಂತೆಸಗಬೇಕು." ದಿನನಿತ್ಯದ ಜಂಜಾಟಗಳಿಂದ ತಿಳಿವಿನ ಚಿಲುಮೆಯ ನೀರು ಬಗ್ಗಡವಾಗಿ ಕೆಡುತ್ತಿರುವಾಗ ಸಮಾಧಾನದಿಂದ ಮನವನ್ನು ನಿಲ್ಲಿಸಿ ಕದಡಿದ ನೀರಿನ ಬಗ್ಗಡ ಕೆಳಗೆ ಇಳಿದು ನೀರು ಸ್ವಚ್ಛವಾಗುವ ಹಾಗೆ ಭಾವವನ್ನು ತಿಳಿಗೊಳಿಸಿ ಶಾಂತಚಿತ್ತವನ್ನು ಸಾಧಿಸಬೇಕು. ಕೋಪ, ಮದ, ಮತ್ಸರ ಮುಂತಾದವು ಮನಸ್ಸಲ್ಲಿ ತುಂಬಿರುವಾಗ ಭಾವ ತಿಳಿಯಾಗಿರುವುದಿಲ್ಲ. ಶಾಂತವಾಗಿ ಭಾವವನ್ನು ತಿಳಿಗೊಳಿಸಿಕೊಂಡು ಸಾಧಿಸುವ ಚಿತ್ತವೇ ಧರ್ಮ, ಯಾತ್ರೆ, ಮುಕ್ತಿ, ಕಲ್ಯಾಣ ಎಂದು 'ಯಶೋಧರಾ' ನಾಟಕದ ಬುದ್ಧ ಹೇಳುತ್ತಾನೆ. ಭಾವವನ್ನು ಹೀಗೆ ಸದಾ ತಿಳುವಳಿಕೆಯ ಚಿಲುಮೆಯ ತಿಳಿನೀರಿನಲ್ಲಿ ಸ್ವಚ್ಛವಾಗಿ ಉಳಿಸಿಕೊಳ್ಳುವುದೇ ಒಳ್ಳೆಯದಕ್ಕೂ ಕೆಟ್ಟದಕ್ಕೂ ನಡೆಯುವ ಸಂಘರ್ಷದಲ್ಲಿ ಒಳ್ಳೆಯದನ್ನು ಗುರುತಿಸಿ, ಅದರ ಪರವಾಗಿರಲು ಸಹಾಯ ಮಾಡುವ ಮನಸ್ಥಿತಿ.

ಹೆಣ್ಣಿನ ತಮ್ಮ ಬಗ್ಗೆ ಬದುಕಿನಲ್ಲೂ, ಸಾಹಿತ್ಯ ಕೃತಿಗಳಲ್ಲೂ ಸ್ವಾತಂತ್ರ್ಯ, ಸಮಾನತೆಗಳನ್ನು ಮಾಸ್ತಿಯವರು ಪ್ರತಿಪಾದಿಸುತ್ತಾರೆ. ಅವರು ಅಸಿಸ್ಟೆಂಟ್ ಕಮಿಷನರ್ ಆಗಿ ಆಯ್ಕೆ ಆದ ಮೊದಲಿಗೆ ಆಗ ದಿವಾನರಾಗಿದ್ದ ಸರ್. ಎಂ. ವಿಶ್ವೇಶ್ವರಯ್ಯನವರ ಕಛೇರಿಯಲ್ಲಿ ಪ್ರೊಬೆಷನರ್ ಆಗಿ ಕೆಲಸ ಮಾಡುತ್ತಿದ್ದರು. ಆಗ ಮನೆಗೆ ಮಧ್ಯಾಹ್ನ ಊಟಕ್ಕೆ ನಿಶ್ಚಿತ ಸಮಯಕ್ಕೆ ತಲುಪುವುದು ಸಾಧ್ಯವಾಗುತ್ತಿರಲಿಲ್ಲ. ಹಿಡಿದ ಕೆಲಸವನ್ನು ಕಛೇರಿಯಲ್ಲಿ ಮುಗಿಸಿಯೇ ಊಟಕ್ಕೆ ಏಳುವ ಅಭ್ಯಾಸದವರಾದ ಸರ್. ಎಂ.ವಿ. ಜೊತೆ ಕೆಲಸ ಮಾಡುತ್ತಿದ್ದಾಗ ಸರ್ ಎಂ.ವಿ. ಊಟಕ್ಕೆ ಹೊರಟಾಗಲೇ ಮಾಸ್ತಿಯವರಿಗೂ ಊಟದ ಸಮಯ. ಹಲವು ಸಲ ಅದು ತುಂಬಾ ತಡವಾದ ಊಟಕ್ಕೆ ಕಾರಣವಾಗುತ್ತಿತ್ತು. ತಾನು ಊಟಕ್ಕೆ ಬರುವ ವರೆಗೆ ತಾಯಿ ಮತ್ತು ಮಡದಿ ಹಸಿದು ಕಾದು ಕುಳಿತಿರಬಾರದು. ಅವರ ಸಮಯಕ್ಕೆ ಸರಿಯಾಗಿ ಉಂಡು ತಾವು ಬಂದಾಗ ಊಟ ಬಡಿಸಿದರೆ ಸಾಕು ಎಂದು ಹಲವು ಸಲ ಹೇಳಿದರೂ ಮಾಸ್ತಿಯವರ ತಾಯಿ ಮತ್ತು ಪತ್ನಿ ಹಾಗೆ ಮಾಡುವುದಿಲ್ಲ.

ಅತ್ತೆ ಹಾಗೂ ಸೊಸೆ ಅಂದರೆ ಮಾಸ್ತಿಯವರ ತಾಯಿ ಮತ್ತು ಪತ್ನಿ ಇಬ್ಬರೂ ಊಟ ಮಾಡದೆ ಕಾದು ಕುಳಿತಿರುವುದನ್ನು, ಆ ಹಳೆಯ ಶಾಸ್ತ್ರವನ್ನು ಕೊನೆಗಾಣಿಸಬೇಕೆಂದು; ಕಛೇರಿಯಿಂದ ತಡವಾಗಿ ಬಂದ ಒಂದು ದಿನ; ಅವರಿಬ್ಬರಿಗೂ ತಾವು ಇರುತ್ತಲೇ ಮೊದಲು ಊಟ ಮಾಡಿ, ಆ ಬಳಿಕ ತನಗೆ ಬಡಿಸಿ ಎಂದರು. ಇಬ್ಬರೂ ಒಪ್ಪದಿದ್ದಾಗ ಮಾಸ್ತಿಯವರು ಪಟ್ಟು ಬಿಡಲಿಲ್ಲ. ಇನ್ನು ವಾದ ಮಾಡಿ ಪ್ರಯೋಜನವಿಲ್ಲ ಎಂದು ತಾಯಿ "ಆಯಿತಪ್ಪ" ಎಂದರು. ತಾನು ಮತ್ತು ಸೊಸೆ ಕುಳಿತು ಊಟ ಮಾಡಿದರು. ಆಮೇಲೆ ಮಾಸ್ತಿಯವರಿಗೆ ಬಡಿಸಿದರು. ಮಾಸ್ತಿಯವರು ತಮ್ಮ ಭಾವ–2ರಲ್ಲಿ ಬರೆಯುತ್ತಾರೆ: "ಊಟ ಮುಗಿಸಿ ನಾನು ಕಛೇರಿಗೆ ಹೊರಟೆನು. ಆಮೇಲೆ ದಿನವೂ ಇವರು ನಾನು ಬರುವ ಮುನ್ನವೇ ಊಟ ಮುಗಿಸಿ ಕುಳಿತಿರುವುದು ಕ್ರಮ ಆಯಿತು."

ಲೋಕಕರ್ಮದ ದೃಷ್ಟಿಯಿಂದ ಈ ಮಧ್ಯಾಹ್ನದ

ಊಟ ಒಂದು ನಿತ್ಯ ಕೆಲಸ. ತಮ್ಮ ಮನೆಯಲ್ಲೇ ಆದರೂ ಪಿತೃ ಪ್ರಧಾನ ವ್ಯವಸ್ಥೆಯಲ್ಲಿ ಬೆಳೆದು ಬಂದ ಆಚರಣೆ ಮಾನವ ಅಂತಃಕರಣಕ್ಕೆ ವಿರೋಧವಾಗಿ ಕಂಡಾಗ ಅಲ್ಲಿ ಅದನ್ನು ಸ್ತ್ರೀಯರ ಪರವಾಗಿ ಮುರಿಯಲು ಅವರಿಗೆ ಯಾವ ಸಂಕೋಚವೂ ಇಲ್ಲ. ಈ ಸಂದರ್ಭದಲ್ಲಿ ಅದು ತಾಯಿಯ ಮೇಲಿನ ಪ್ರೇಮವೋ, ಪತ್ನಿಯ ಮೇಲಿನ ಪ್ರೀತಿಯೋ ಅಥವಾ ಸ್ತ್ರೀ ಸಮಾನತೆಯ ತತ್ವವೋ ಎಂಬ ಚರ್ಚೆ ಮಾಡುವುದು ನನಗೆ ಮುಖ್ಯವಲ್ಲ. ಹಣ ಸಂಪಾದಿಸುವ ಮನೆಯ ಗಂಡು ಆಗಿದ್ದೂ ಅವರ ಅಂತಃಕರಣ ಹಸಿದು ಕಾದಿರುವ ಮನೆಯ ಹೆಣ್ಣು ಮಕ್ಕಳಿಗೆ ಸ್ಪಂದಿಸಿ ಸಾಂಪ್ರದಾಯಿಕ ಕ್ರಮವನ್ನು ಮುರಿಯಲು ಪ್ರೇರಣೆ ನೀಡಿದ್ದು ಮುಖ್ಯ.

ಮಾಸ್ತಿಯವರಿಗೆ ಕೇವಲ ಓದು ಬರಹದ ಜನರ ಜತೆ ಮಾತ್ರ ಸಂಪರ್ಕ ಇದ್ದುದಲ್ಲ. ಸಮಾಜದ ಎಲ್ಲಾ ರೀತಿಯ ಜನರ ಜತೆಗೂ ಸೌಜನ್ಯಶೀಲ ಮಾತುಕತೆಗಳು ಇರುತ್ತಿತ್ತು. ತಮಗೆ ಸಾಧ್ಯವಾದ ಸಹಾಯಗಳನ್ನೂ ಅವರು ಮಾಡುತ್ತಿದ್ದರು. ಹಣವೊಂದೇ ಮನಷ್ಯನಿಗೆ ಬೇಕಾದ ಸಹಾಯವಲ್ಲ. ಸಹಾನುಭೂತಿ ಕೂಡಾ ಹಲವರಿಗೆ ಸಾಂತ್ವನ ನೀಡುತ್ತದೆ. ಈ ಕೆಳಗಿನ ಮಾಸ್ತಿಯವರ ಮಾತುಗಳನ್ನು ಕನ್ನಡದ ಹಿರಿಯ ವಿಮರ್ಶಕ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ಹೇಳಿದಾಗ ಕೇಳಿದ್ದು. ಮಾಸ್ತಿಯವರ ಸಾಂತ್ವನಗೊಳಿಸುವ ಸ್ವಭಾವಕ್ಕಾಗಿ ಇಲ್ಲಿ ಹಂಚಿಕೊಳ್ಳುತ್ತಿದ್ದೇನೆ.

ವಿದ್ಯಾರ್ಥಿಯಾಗಿದ್ದ ನರಹಳ್ಳಿಯವರು ಒಮ್ಮೆ ಮಾಸ್ತಿಯವರನ್ನು ಕಾಣಲು ಅವರ ಮನೆಗೆ ಹೋಗಿದ್ದಾಗ ಮನೆ ಗೇಟಿನ ಬಳಿ ನಿಂತುಕೊಂಡು ರಾಮಸ್ವಾಮಿ ಎಂಬ ಸಾಮಾನ್ಯ ರೈತಾಪಿ ಜನರಂತೆ ಕಾಣುತ್ತಿದ್ದ ಒಬ್ಬರಲ್ಲಿ ಮಾಸ್ತಿಯವರು ಮಾತನಾಡುತ್ತಿದ್ದರು. ರಾಮಸ್ವಾಮಿ ತಮ್ಮ ಮನೆಯ ಕಷ್ಟ ಸುಖ ಹೇಳಿಕೊಳ್ಳುತ್ತಿದ್ದರು. "ಮನೆಯಲ್ಲಿ ಮಗ ಸೊಸೆ ನೋಡಿಕೊಳ್ಳುತ್ತಿದ್ದಾರೆ. ಹೊಟ್ಟೆ ಬಟ್ಟೆಗೆ ಕಷ್ಟ ಇದೆ ಎಂದು ಹೇಳಲಾರೆ. ಇನ್ನೂ ಸಂತೋಷವಾಗಿ ಇರುವಂತೆ ನೋಡಿಕೊಳ್ಳಬೇಕಾಗಿತ್ತು. ಆ ಮಾತು, ಈ ಮಾತು ಚುಚ್ಚುತ್ತವೆ. ಅದರ ಜತೆ ಇವಳು ನನ್ನನ್ನು ಬಿಟ್ಟು ದೇವರ ಪಾದ ಸೇರಿಕೊಂಡಳು. ಮೊಮ್ಮಕ್ಕಳನ್ನು ನೋಡಿಕೊಂಡು ಸಂತೋಷವಾಗಿರಬೇಕಾದ ಈ ಸಮಯದಲ್ಲಿ ಮನಸ್ಸು ನೋಯಿಸಿಕೊಂಡಿರುವ ಈ ಸಂಕಟ ಯಾಕೆ ಸ್ವಾಮಿ?"

ಮಾಸ್ತಿಯವರು ಹೇಳಿದರಂತೆ, "ನೋಡಿ ರಾಮಸ್ವಾಮಿ, ನಿಮ್ಮ ಮುಖ ನೋಡಿದರೆ ಗುಡ್ಡದ ದೇವರ ಮಂದಿರಕ್ಕೆ ಹೋಗಿ ಈಗ ತಾನೆ ಬಂದ ಹಾಗಿದೆ. ನಿಮ್ಮ ಹಣೆ ಮೇಲಿನ ಪ್ರಸಾದ ಕಾಣುತ್ತೆ." ರಾಮಸ್ವಾಮಿಗಳು, "ಹೌದು ಸ್ವಾಮಿ. ನಮ್ಮಪ್ಪ ಕಾಪಾಡು ಅಂತ ಕೈ ಮುಗಿದು ಬಂದೆ." ಆಗ ಮಾಸ್ತಿಯವರು ಹೇಳಿದರು, "ನೀವು ಕೈ ಮುಗಿದು ಬಂದ ಮೂರ್ತಿ ಯಾವುದರಿಂದ ಮಾಡಿದ್ದು? ಕಲ್ಲಿನಿಂದ ಅಲ್ಲವೆ? ನೀವೀಗ ಇಲ್ಲಿ ಗೇಟಿನ ಮುಂದೆ ರಸ್ತೆ ಬದಿಯಲ್ಲಿ ನಿಂತಿರುವುದು ಕೂಡಾ ಕಲ್ಲು ಚಪ್ಪಡಿ ಮೇಲೆಯೆ ಅಲ್ವೆ? ಈ ಚಪ್ಪಡಿಕಲ್ಲಿಗೂ, ಆ ದೇವರ ಮೂರ್ತಿಯಲ್ಲಿರುವ ಕಲ್ಲಿಗೂ ಏನು ವ್ಯತ್ಯಾಸವಪ್ಪಾ? ಮೂರ್ತಿ ಆಗಬೇಕಾದರೆ ಉಳಿಯ ಏಟು ತಿಂದು, ತಿಂದು ಬದಲಾಗಬೇಕು. ಆ ಮೇಲಿರುವವನು ಇದಾನಲ್ಲ, ನಿನ್ನಾ ಮೂರ್ತಿ ಮಾಡೋಕೆ ಹೊರಟಿದಾನೆ. ಸಹಿಸಿಕೋ ಬೇಕಪ್ಪಾ, ದೇವರ ಮೂರ್ತಿ ಆಗಬೇಕಾದರೆ ಏಟು ತಿನ್ನಬೇಕು."

ಇದು ಮಾಸ್ತಿಯವರ ಮನೋಭಾವ, ಅದರ ಬಗ್ಗೆ ಸ್ಪಷ್ಟ ಮಾತುಗಳಲ್ಲಿ ಹೇಳಿದ ಅವರಷ್ಟೇ ದೊಡ್ಡವರಾದ ಇನ್ನೊಬ್ಬರೆಂದರೆ ಡಾ. ಕೆ. ಶಿವರಾಮ ಕಾರಂತರು. ತಮ್ಮ "ಪ್ರಾಮಾಣಿಕ ಗೆಳೆತನ" ಎಂಬ ಲೇಖನದಲ್ಲಿ ಕಾರಂತರು ಮಾಸ್ತಿಯವರನ್ನು ಪ್ರಾಮಾಣಿಕ ಗೆಳೆತನಕ್ಕೆ ಸುಲಭದಲ್ಲಿ ಎಟಕುವವರು ಎಂಬುದನ್ನು ಹಲವಾರು ದೃಷ್ಟಾಂತಗಳ ಮೂಲಕ ತೋರಿಸಿಕೊಡುತ್ತಾರೆ. (ನೋಡಿ: 'ಶ್ರೀನಿವಾಸ' ಮಾಸ್ತಿ ಸಂಭಾವನಾ ಗ್ರಂಥ) ಮಾಸ್ತಿಯವರು ತಮ್ಮ ವೇತನದಲ್ಲಿ ದೊಡ್ಡ ಪಾಲನ್ನು ಬಡ ವಿದ್ಯಾರ್ಥಿಗಳಿಗಾಗಿ ವ್ಯಯಿಸಿದವರು. ತಾನು ವಾರಾನ್ನದಿಂದ ಶಿಕ್ಷಣ ಪಡೆದವನು ಎಂಬ ಋಣಭಾರದಿಂದ ಅವರು ನಿರಂತರವಾಗಿ ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡಿದರು ಎಂಬುದನ್ನು ಕಾರಂತರು ಗೌರವದಿಂದ ಗುರುತಿಸುತ್ತಾರೆ. ಆದರೆ ಅದರೊಡನೆ ಪ್ರತಿಯೊಂದರಲ್ಲೂ ಅವರೇ ಆದರ್ಶರು ಎಂಬ ಭಾವನೆ ತನಗಿಲ್ಲ ಎಂಬ ಕಾರಂತರು "ಭಾರತದ ಜನ, ಸಂಸ್ಕೃತಿ ಇತ್ಯಾದಿ ವಿವರಗಳಲ್ಲಿ ಅವರ ಮೋಹ ಅತಿ" ಎನ್ನುತ್ತಾರೆ.

ಮಾಸ್ತಿಯವರ ನಿಲುವು ಭಿನ್ನ. ಚಿಕ್ಕಂದು ಸೂಟು ಹಾಕಿಕೊಂಡಿದ್ದ ತರುಣ ಮುಪ್ಪಿನಲ್ಲಿ ಒಂದು ಪಂಚೆ, ಅಂಗವಸ್ತ್ರಕ್ಕೆ ಇಳಿದೆ; ಅಥವಾ ಏರಿದೆ ಎನ್ನುತ್ತಾರೆ ಮಾಸ್ತಿ ತಮ್ಮ ಆತ್ಮಚರಿತ್ರೆ 'ಭಾವ'ದಲ್ಲಿ. 'ಇಳಿ' ಹಾಗೂ 'ಏರು' ಈ ಎರಡು ಕ್ರಿಯಾಪದಗಳ ಬಳಕೆಯಲ್ಲಿ ಅವರ ಮನೋಭೂಮಿಕೆ ಕಾಣುತ್ತದೆ. ಲೋಕಕ್ಕೆ ಇಳಿದಂತೆ ಕಾಣುವುದು ಅವರಿಗೆ ಏರಿದಂತೆಯೂ ಭಾಸವಾಗುತ್ತದೆ. ಸೂಟು ಹಾಕಿಕೊಂಡು ಹೋಗುವಾಗ ತಮ್ಮ ಟೈಯ ಗಂಟು ಅಂಗಿಯ ಕಾಲರ್‌ಗೆ ಹೇಗೆ ಹೊಂದಿ ಕೂತಿರಬೇಕು ಎಂಬುದನ್ನು ಆಗ ದಿವಾನರಾಗಿದ್ದ ವಿಶ್ವೇಶ್ವರಯ್ಯನವರು ತೋರಿಸಿಕೊಟ್ಟುದನ್ನು ನೆನಪಿಸಿಕೊಂಡು ಬರೆದ ಮಾಸ್ತಿ ಈ ಮಾತನ್ನು ಹೇಳುತ್ತಿದ್ದಾರೆ ಎಂಬುದನ್ನು ನಾವು ನೆನಪಿಡಬೇಕು. (ನೋಡಿ: ಮಾಸ್ತಿ ಸಂಪಾದಿಸಿದ ಪುಸ್ತಕ 'ಸರ್ ಎಂ. ವಿಶ್ವೇಶ್ವರಯ್ಯ')

ಮಾಸ್ತಿಯವರಿಗೆ 'ಪ್ರಪತ್ತಿ' ಎಂಬುದು ದೊಡ್ಡದು. 'ಪ್ರಪತ್ತಿ' ಎಂಬ ಸಂಸ್ಕೃತ ಶಬ್ದದ ಅರ್ಥ 'ಮೊರೆಯಿಡುವಿಕೆ'. ಮಾಸ್ತಿಯವರ ಮೇಲೆ ಭಾರತದ ಭಕ್ತಿ ಪಂಥದ ಪ್ರಭಾವ ಇದೆ ನಿಜ. ಆದರೆ ಅವರ 'ಪ್ರಪತ್ತಿ' ಅಸಹಾಯಕ ಹೊತ್ತಿನಲ್ಲಿ ದೈವ ಎಂದು ಭಾವಿಸಿ ಬೇಡಿದ ಕ್ರಮದಿಂದ ಹುಟ್ಟಿ ಬೆಳೆದ ಪ್ರಭಾವ. ಆದರೆ ಮನುಷ್ಯ ಪ್ರಯತ್ನ ಅನಗತ್ಯ ಎನ್ನುವ ಭಾವ ಅವರದಲ್ಲ. ಮನುಷ್ಯ ಪ್ರಯತ್ನದಲ್ಲಿ ಒಳ್ಳೆಯದನ್ನು ಮಾಡುವುದೂ ಒಂದು ಕೆಲಸವೆ. "ಲೀಲೆಯಲಿ ಯಾವುದೂ ವಿಫಲವಲ್ಲ" (ಬೇಂದ್ರೆ) ಎಂಬ ಭಾವದಿಂದ ಪ್ರತ್ಯೇಕವಾದ ಶರಣು ಭಾವ. ತನ್ನಿಂದ ದೈವ ಮಾಡಿಸುತ್ತಿದೆ ಎನ್ನುವಾಗಲೂ, ಮಾಡಬೇಕಾದವನು ತಾನು ಎಂಬ ಎಚ್ಚರವಿರುವ ಮನಸ್ಥಿತಿ.

ಮಾಸ್ತಿಯವರು ಮನೆಯಲ್ಲಿ ಗಿಳಿ, ಕೋಗಿಲೆ, ಅಳಿಲು, ನಾಯಿಗಳನ್ನು ಸಾಕಿ ತಿಳಿದವರು. ಅವರ ಪತ್ನಿ ಮೊದಲ ಬಾರಿಗೆ ಮನೆಗೆ ಬರುವಾಗಲೇ ತಾವು ಸಾಕಿದ ಮುದ್ದಿನ ಗಿಳಿಯ ಪಂಜರವನ್ನು ಹಿಡಿದುಕೊಂಡೇ ಬಂದಿದ್ದರಂತೆ. ಅವರಲ್ಲಿ ಮೂರು ನಾಯಿಗಳು ಆಗಿಹೋದವು. ಮಾಂಬಿ, ಕರಿಯ ಅಥವಾ ರೂಬಿ ಹಾಗೂ ಮೂರನೆಯದರ ಹೆಸರು ದಾಸ. ಮನೆಯಲ್ಲಿ ನಾಯಿಗಳಿಗೆ 'ದಾಸು' ಅಥವಾ 'ದಾಸ' ಎಂಬ ಹೆಸರಿಡುವುದು ನನ್ನ ಬಾಲ್ಯಕಾಲದಲ್ಲಿಯೂ ಸಾಮಾನ್ಯ ಪರಿಪಾಠವಾಗಿತ್ತು. ಭಕ್ತಿ ಕವಿಗಳು ಕೂಡಾ ತಮ್ಮನ್ನು ದೇವರ ದಾಸರು ಎಂದು ಗುರುತಿಸಿಕೊಂಡವರು. ತಮ್ಮ ತಂದೆ ಪೂಜಿಸಿದ ರಾಮಚಂದ್ರ ತನ್ನ ಅಂತರ್ಯದಲ್ಲಿ ತಂದೆಯಾಗಿ ಸಾಕಿ, ತಾಯಾಗಿ ಒಳ್ಳೆಯ ಬುದ್ಧಿಯನ್ನು ಕೊಟ್ಟು ಗುರುವಾಗಿ ಒಳ್ಳೆಯ ದಾರಿಯಲ್ಲಿ ನಡೆಸುವ ನಾಯಕನಾಗಿ ನಿಂತಿದ್ದಾರೆ ಎನ್ನುವ ಮಾಸ್ತಿಯವರು ತಮ್ಮ ಬದುಕಿನ ಕತೆಯಾದ 'ಭಾವ'ದಲ್ಲಿ ದಾಸ ನಾಯಿಯ ಮೂಲಕ ಪ್ರಪತ್ತಿಯ ಸಾಧ್ಯತೆಗಳನ್ನು ಹೀಗೆ ವಿವರಿಸುತ್ತಾರೆ : "ನಾನು ನಮ್ಮ ನಾಯಿ ದಾಸನನ್ನು ಸರಪಳಿಯಲ್ಲಿ ಹಿಡಿದು ನಡೆದು ಹೋದದ್ದುಂಟು. ಅದು ತೀರ ಅವಿವೇಕಕ್ಕೆ ಹೋದರೆ ನಾನು ಅದನ್ನು ತಡೆದು ಸೆಳೆಯುತ್ತೇನೆ. ಇಲ್ಲವಾದರೆ ಸರಪಳಿ ಇರುವಷ್ಟು ದೂರ ಅದು ಸ್ವತಂತ್ರ, ಅದರ ರುಚಿಯನ್ನನುಸರಿಸಿ ನಡೆದುಕೊಳ್ಳಬಹುದು. ದೇವರಿಗೆ ನನ್ನ ಜೀವ ನನಗೆ ನಮ್ಮ ನಾಯಿಯ ಜೀವ ಹೇಗೆ, ಹಾಗೆ ಸೇರಿದೆ. ಅವನು ನನ್ನನ್ನು ನೋಡಿಕೊಳ್ಳುವುದು ಹಾಗೆಯೇ ಎಂದು ತೋರುತ್ತಿದೆ. ನಾನು ನನ್ನ ದೈವ ಹಿಡಿದಿರುವ ಸರಪಳಿಯ ಸ್ವಾತಂತ್ರ್ಯದಲ್ಲಿ ಬಾಳುತ್ತಿರುವುದು ಹಾಗೆಯೇ." ❑

ನಮ್ಮ ಭಾಷೆಯ ಈ ಮಹತ್ ಚೇತನಕ್ಕೆ ನಮಸ್ಕಾರ.

ಆ ಹಕ್ಕಿ ಬೇಕಾದರೆ

ಭಾರತೀಯ ಬಹುಭಾಷಾ ವಿದ್ವಾಂಸ, ***ಎ.ಕೆ. ರಾಮಾನುಜನ್*** ಅವರದೊಂದು ಕವಿತೆ ನಿಮ್ಮ ಓದಿಗೆ...

ಮುಂಗೋಲಿಯದಲ್ಲಿ ಒಬ್ಬ ರಾಜ
ಇದ್ದನಂತಲ್ಲ
ಅವನು ಯಾವುದೋ
ದೂರ ದೇಶಕ್ಕೆ ದಂಡೆತ್ತಿ ಹೋದಾಗ
ಅಲ್ಲೊಂದು ಹೊಸ ಹಕ್ಕಿ ಹಾಡು ಕೇಳಿಸಿ
ಆ ಹಾಡು ನನಗೆ ಬೇಕು ಎಂದು
ಹಾಡಿಗೆಂದು ಹಕ್ಕಿ ಹಿಡಿದು
ಹಕ್ಕಿಯ ಜೊತೆಗೆ ಗೂಡೆತ್ತಿ
ಗೂಡಿನಡಿ ರೆಂಬೆ
ರೆಂಬೆಗೆ ಕೊಂಬೆ
ಕೊಂಬೆಗೆ ಮರ
ಮರದಡಿಯ ಬೇರು
ಬೇರು ಸುತ್ತಿನ ಹೆಂಟೆ ಮಣ್ಣು
ಆ ಊರು
ನೀರು
ಹಿಂಗಾರು
ಆ ಪ್ರದೇಶ
ದೇಶ
ಆ ಇಡೀ ರಾಜ್ಯ
ಎಲ್ಲ ಹೊತ್ತು ಹಾಕಬೇಕು
ಎನ್ನಿಸಿ
ಇದ್ದ ಬಿದ್ದ ಆನೆ ಕುದುರೆ ರಥ
ಸೈನ್ಯ ಎಲ್ಲ ಕೂಡಿಸಿ
ಇಡೀ ರಾಜ್ಯವನ್ನೆಲ್ಲ ಗೆದ್ದು
ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡು
ಮನೆಗೇ ಹೋಗಲಿಲ್ಲ.

ನಾಡಪ್ರಭು ಕೆಂಪೇಗೌಡರ ಮಡದಿ ಚೆನ್ನಮ್ಮ

ಲೇಖಕರು:-ಪ್ರೊ. ಷಾಕಿರಾ ಖಾನಂ

ಇತಿಹಾಸದ ಪುಟಗಳನ್ನು ತಿರುವಿದಾಗ, ರಾಜರ ಯಶಸ್ಸಿನ ಹಿಂದೆ ರಾಣಿಯರ ತ್ಯಾಗ, ಧೈರ್ಯ, ದೂರದೃಷ್ಟಿ ಮತ್ತು ಅವಿಶ್ರಾಂತ ಶ್ರಮದ ಬೆನ್ನೆಲುಬು ಸ್ಪಷ್ಟವಾಗಿ ಕಾಣುತ್ತದೆ. ಯುದ್ಧಭೂಮಿಯಲ್ಲಿ ರಾಜರು ಕತ್ತಿ ಹಿಡಿದರೆ, ಅರಮನೆಯ ಒಳಗೆ ಮತ್ತು ಹೊರಗೆ ರಾಣಿಯರು ಸಾಮ್ರಾಜ್ಯದ ಬುನಾದಿಯನ್ನು ಗಟ್ಟಿಗೊಳಿಸುತ್ತಿದ್ದರು. ನಾಡಪ್ರಭು ಕೆಂಪೇಗೌಡರ ಬದುಕಿನಲ್ಲಿ ಆ ಶಕ್ತಿಯಾಗಿ, ಸ್ಫೂರ್ತಿಯಾಗಿ, ನೆರಳಾಗಿ ನಿಂತವರು ಮಹಾರಾಣಿ ಚೆನ್ನಮ್ಮ. ಇಂದು ಕೆಂಪೇಗೌಡರನ್ನು ಬೆಂಗಳೂರಿನ ನಿರ್ಮಾತೃ ಎಂದು ಹೆಮ್ಮೆಯಿಂದ ಸ್ಮರಿಸುವಾಗ, ಅವರೊಂದಿಗೆ ಹೆಜ್ಜೆ ಹಾಕಿದ ಚೆನ್ನಮ್ಮನ ಕೊಡುಗೆಯನ್ನು ಮರೆಯುವುದು ಇತಿಹಾಸಕ್ಕೆ ಮಾಡುವ ದೊಡ್ಡ ಅನ್ಯಾಯವೇ ಸರಿ.

ಚೆನ್ನಮ್ಮ ಕೇವಲ ಪತ್ನಿಯಾಗಿರಲಿಲ್ಲ, ಅವರು ಕೆಂಪೇಗೌಡರ ಆಡಳಿತದ ಜೀವಂತ ನೆರಳು, ಅವರ ಕನಸುಗಳ ಪಾಲುದಾರರು. ಯಲಹಂಕ ನಾಡು ಕಳ್ಳರ ಕಾಟ, ಪಾಳೇಗಾರರ ದಬ್ಬಾಳಿಕೆ ಮತ್ತು ಸತತ ಬರದಿಂದ ನಲುಗಿ ಹೋಗಿದ್ದ ಕಾಲವದು. ಪ್ರಜೆಗಳ ಕಣ್ಣೀರನ್ನು ಒರೆಸಲು ಕೆಂಪೇಗೌಡರು ನಾಡಿನ ಮೂಲೆ ಮೂಲೆಗೆ ಸಂಚರಿಸಿ ಜನಸೇವೆಗೆ ತೊಡಗಿದರೆ, ಅತ್ತ ಅರಮನೆಯ ಒಳಾಂಗಣವನ್ನು ಚೆನ್ನಮ್ಮ ಅಷ್ಟೇ ದಕ್ಷತೆಯಿಂದ ಭದ್ರಪಡಿಸಿದರು.

ರಾಜ್ಯಭಾರದ ಒತ್ತಡ, ವಿಜಯನಗರ ಸಾಮ್ರಾಜ್ಯದ ರಾಜಕೀಯ ತಲ್ಲಣಗಳು ಕೆಂಪೇಗೌಡರನ್ನು ಕಂಗೆಡಿಸಿದಾಗ, ಅವರಿಗೆ ನೈತಿಕ ಸ್ಥೈರ್ಯ ತುಂಬಿ, ಮತ್ತೆ ಎದುರಿಸಲು ಶಕ್ತಿ ನೀಡಿದ ಧೀಮಂತ ಮಹಿಳೆ ಚೆನ್ನಮ್ಮ. 1537ರಲ್ಲಿ ಕೆಂಪೇಗೌಡರು ಹಂಪಿಯಂತಹ "ಬೆಂಗಳೂರು" ಎಂಬ ಹೊಸ ನಗರವನ್ನು ಕಾಣುವ ಕನಸು ಕಂಡಾಗ, ಆ ಕನಸಿಗೆ ನೀರೆದು ಪೋಷಿಸಿದವರು ಚೆನ್ನಮ್ಮ. ಕೆಂಪೇಗೌಡರು ನಗರದ ಭೌತಿಕ ಗಡಿಯನ್ನು ನಾಲ್ಕು ದಿಕ್ಕಿನಲ್ಲಿ ಗೋಪುರಗಳ ಮೂಲಕ ಗುರುತಿಸಿದರೆ, ಆ ಗಡಿಯೊಳಗೆ ಸಾಮಾಜಿಕ, ಸಾಂಸ್ಕೃತಿಕ ಮತ್ತು ನೈತಿಕತೆಯ ಗೋಡೆಯನ್ನು ಕಟ್ಟಿದವರು ಮಹಾರಾಣಿ ಚೆನ್ನಮ್ಮ.

ಬೆಂಗಳೂರಿನ ಪೇಟೆಗಳು ಇಂದು ಕೂಡ ಜಗತ್ಪ್ರಸಿದ್ಧ. ಈ ವೃತ್ತಿ ಆಧಾರಿತ ಪೇಟೆಗಳ ಪರಿಕಲ್ಪನೆಯ ಹಿಂದೆ ಚೆನ್ನಮ್ಮನವರ ದೂರದೃಷ್ಟಿ ಅಡಗಿದೆ. ಬಳೇಪೇಟೆ, ಅರಳೇಪೇಟೆ, ಚಿಕ್ಕಪೇಟೆ, ದೊಡ್ಡಪೇಟೆಗಳಲ್ಲಿ ನೇಕಾರರು, ಕುಂಬಾರರು, ಕಮ್ಮಾರರು, ಬಂಗಾರದ ಕೆಲಸಗಾರರು ನೆಮ್ಮದಿಯಿಂದ ತಮ್ಮ ಕಸುಬು ಮಾಡಲು ಸುರಕ್ಷಿತ ವಾತಾವರಣ ಕಲ್ಪಿಸುವಲ್ಲಿ ಚೆನ್ನಮ್ಮನವರ ಕಾಳಜಿ ಅಪಾರ. ಕೋತ್ವಾಲ್ ಅಪ್ಪಯ್ಯ, ನರಸಯ್ಯ ಜಟ್ಟಿ,ಅಕ್ಕಸಾಲಿ ರಾಯಣ್ಣಮತ್ತು ಕೆಂಪೇಗೌಡರ ಚರ್ಚೆಗಳನ್ನು ಆಲಿಸಿ ಹೊರಗಿನಿಂದ ಬರುವ ವರ್ತಕರಿಗೆ ತಂಗಲು ಛತ್ರಗಳು, ಕುಡಿಯಲು ನೀರಿನ ವ್ಯವಸ್ಥೆ, ವ್ಯಾಪಾರಕ್ಕೆ ನ್ಯಾಯಯುತ ತೆರಿಗೆ ಪದ್ಧತಿಯನ್ನು ಜಾರಿಗೆ ತರಲು ಅವರು ಕೆಂಪೇಗೌಡರಿಗೆ ಸಲಹೆ ನೀಡುತ್ತಿದ್ದರು. ಕೇವಲ ಆರ್ಥಿಕತೆಯಲ್ಲ, ಸಾಮಾಜಿಕ ಸುಧಾರಣೆಯಲ್ಲೂ ಚೆನ್ನಮ್ಮ ಕ್ರಾಂತಿಕಾರಿ ಹೆಜ್ಜೆ ಇಟ್ಟರು. ಆ ಕಾಲದಲ್ಲಿ ಹೆಣ್ಣುಮಕ್ಕಳನ್ನು ಶೋಷಿಸುತ್ತಿದ್ದ ದೇವದಾಸಿ ಪದ್ಧತಿ, ಬಾಲ್ಯ ವಿವಾಹಗಳ ನಿಷೇಧದ ಹಿಂದೆ ಚೆನ್ನಮ್ಮನ ಒತ್ತಾಸೆ ಪ್ರಮುಖವಾಗಿತ್ತು. ವಿಧವೆಯರಿಗೆ ಮರುಮದುವೆಯ ಹಕ್ಕು ಕಲ್ಪಿಸಲು ಅರಮನೆಯಿಂದಲೇ ಮಾದರಿಯಾದರು. ಅರಮನೆಯ ಆಸ್ಥಾನದಲ್ಲಿ ವಿಧವಾ ಮಹಿಳೆಯರಿಗೆ ಗೌರವದ ಸ್ಥಾನ ನೀಡಿ ಸಮಾಜಕ್ಕೆ ಸಂದೇಶ ರವಾನಿಸಿದರು.

ಹೆಣ್ಣು ಮಕ್ಕಳ ಬೆರಳು ಕಡಿಯುವ ಅನಿಷ್ಟ ಪದ್ಧತಿಯ ವಿರುದ್ಧ ಚೆನ್ನಮ್ಮನವರು ಗಟ್ಟಿಯಾಗಿ ನಿಂತರು. "ಗಂಡು ಮಕ್ಕಳಿಗಿಲ್ಲದ ಅನಿಷ್ಟ ಪದ್ಧತಿ ಹೆಣ್ಣು ಮಕ್ಕಳಿಗೇಕೆ ಬೇಕು? ಹೆಣ್ಣು ಕೂಡ ಮನುಷ್ಯಳೇ, ಅವಳಿಗೂ ಬದುಕುವ ಹಕ್ಕಿದೆ" ಎಂದು ವಾದಿಸಿ, ಆ ಪದ್ಧತಿಯನ್ನು ಸಂಪೂರ್ಣವಾಗಿ ನಿಷೇಧಿಸುವಂತೆ ಕೆಂಪೇಗೌಡರಲ್ಲಿ ಮನವಿ ಮಾಡಿ ಯಶಸ್ವಿಯಾದರು. ಇದು ಕೇವಲ ಕಾನೂನಾಗಲಿಲ್ಲ, ಸಾಮಾಜಿಕ ಜಾಗೃತಿಯ ಚಳವಳಿಯಾಯಿತು. ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಚೆನ್ನಮ್ಮ ವಿಶೇಷ ಒತ್ತು ನೀಡಿದರು. ಅರಮನೆಯಲ್ಲಿ ರಾಜಕುಮಾರಿಯರ ಜೊತೆ ಸಾಮಾನ್ಯ ಪ್ರಜೆಗಳ ಹೆಣ್ಣುಮಕ್ಕಳಿಗೂ ವಿದ್ಯಾಭ್ಯಾಸದ ಅವಕಾಶ ಕಲ್ಪಿಸಿದರು.

ಕೆಂಪೇಗೌಡರ ಕೃಷಿ ಮತ್ತು ನೀರಾವರಿಯ ಕಾಳಜಿಯ ಧ್ಯೇಯಕ್ಕೆ ಚೆನ್ನಮ್ಮ ಜೀವ ತುಂಬಿದರು. "ಕೆರೆಗಳೇ ನಾಡಿನ ಜೀವನಾಡಿ" ಎಂದು ನಂಬಿದ್ದ ಕೆಂಪೇಗೌಡರು ಧರ್ಮಾಂಬುಧಿ, ಕೆಂಪಾಂಬುಧಿ, ಸಾಂಪಂಗಿ ಕೆರೆಗಳನ್ನು ನಿರ್ಮಿಸಿದಾಗ, ಆ ಕೆರೆಗಳ ದಡದಲ್ಲಿ ಘಟ್ಟ, ಮಂಟಪ, ದೇವಾಲಯಗಳನ್ನು ನಿರ್ಮಿಸಲು ಚೆನ್ನಮ್ಮ ಹೆಗಲಿಗೆ ಹೆಗಲಾಗಿ ನಿಂತರು. ಕೆರೆ ಕಟ್ಟುವಾಗ ಮಣ್ಣು ಹೊರುವ ಕೂಲಿಯಾಳುಗಳ ಜೊತೆ ತಾವೂ ಒಂದಾಗಿ ದುಡಿದರು ಎಂಬ ಪ್ರತೀತಿ ಇದೆ. "ಮರಗಳ ಮಾರಣ ಹೋಮ ಆಗಬಾರದು, ಒಂದು ಮರ ಕಡಿದರೆ ಹತ್ತು ಮರ ನೆಡಬೇಕು" ಎಂಬ ನಿಯಮವನ್ನು ಅರಮನೆಯ ಹಿತ್ತಲಿನಿಂದಲೇ ಜಾರಿಗೆ ತಂದರು. ಅರಮನೆಯ ತೋಟದಲ್ಲಿ ಹಣ್ಣಿನ ಗಿಡ, ಔಷಧೀಯ ಸಸ್ಯ, ತುಳಸಿ ಬೆಳೆಸಿ ಪರಿಸರ ಕಾಳಜಿಯನ್ನು ಮನೆಮನೆಗೆ ಮುಟ್ಟಿಸಿದರು. ಮಳೆ ನೀರು ಕೊಯ್ಲಿನ ಮಹತ್ವವನ್ನು ಪ್ರಜೆಗಳಿಗೆ ತಿಳಿಸಿ, ಪ್ರತಿ ಮನೆಯಲ್ಲೂ ಇಂಗು ಗುಂಡಿ ಇರಬೇಕೆಂದು ಆದೇಶ ಹೊರಡಿಸಿದರು.

ರಾಜಕೀಯ ಬಿಕ್ಕಟ್ಟಿನ ಸಮಯದಲ್ಲಿ ಚೆನ್ನಮ್ಮ ಧೈರ್ಯ ಮೆರೆದಿದ್ದಾರೆ. ವಿಜಯನಗರದ ಅಳಿಯ ರಾಮರಾಯನು ಕೆಂಪೇಗೌಡರ ಮಗ ಚಿಕ್ಕ ಭೈರೇಗೌಡನನ್ನು ಒತ್ತೆಯಾಳಾಗಿ ಇಡಬೇಕೆಂದು ಬೇಡಿಕೆ ಇಟ್ಟಾಗ, ತಾಯಿಯಾಗಿ ಚೆನ್ನಮ್ಮನ ಹೃದಯ ಛಿದ್ರವಾಯಿತು. ಆದರೂ ಆತ್ಮಸ್ಥೈರ್ಯವನ್ನು ಕಳೆದುಕೊಳ್ಳದೆ, "ಯಾವ ಸೀಮೆಯ ವಿಜಯನಗರದ ಅರಸು ಇವರು, ನಮ್ಮ ಪ್ರಾಮಾಣಿಕತೆಗೆ ನಮಗೆ ಸಿಗುತ್ತಿರುವ ಗೌರವವೇ" ಎಂದು ಪ್ರಶ್ನಿಸಿ ಅನ್ಯಾಯದ ವಿರುದ್ಧ ದನಿ ಎತ್ತಿದರು. ಕೆಂಪೇಗೌಡರಿಗೆ ಆಸರೆಯಾಗಿ ನಿಂತು, ರಾಜತಾಂತ್ರಿಕವಾಗಿ ಸಮಸ್ಯೆಯನ್ನು ಬಗೆಹರಿಸಿ ಪಟ್ಟಣವನ್ನು ಉಳಿಸಿಕೊಳ್ಳಲು ಎಲ್ಲ ರೀತಿಯ ತ್ಯಾಗಕ್ಕೂ ಸಿದ್ಧರಾದರು.

1560ರಲ್ಲಿ ಅಳಿಯ ರಾಮರಾಯ ಕೆಂಪೇಗೌಡರನ್ನು ಐದು ವರ್ಷಗಳ ಕಾಲ ಪೆನುಗೊಂಡೆ ಸೆರೆಮನೆಯಲ್ಲಿಟ್ಟಾಗ, ನಾಡಿನ ಒಳಿತಿಗಾಗಿ ಚೆನ್ನಮ್ಮ ತೆಗೆದುಕೊಂಡ ನಿರ್ಧಾರ ಇತಿಹಾಸದಲ್ಲೇ ಅಪರೂಪ. ಯುದ್ಧ ಮಾಡಿ ಸಾವಿರಾರು ಜನರ ರಕ್ತ ಹರಿಸುವ ಬದಲು, ತಾವೇ ಸ್ವಯಂಪ್ರೇರಣೆಯಿಂದ ಐದು ವರ್ಷಗಳ ಕಾಲ ಪತಿಯ ಜೊತೆ ಸೆರೆಮನೆಯಲ್ಲಿದ್ದು ರಕ್ತಪಾತವನ್ನು ತಪ್ಪಿಸಿದರು. ಸೆರೆಮನೆಯ ಕತ್ತಲೆಯಲ್ಲೂ ಕೆಂಪೇಗೌಡರಲ್ಲಿ ಮಾನಸಿಕ ಸ್ಥೈರ್ಯ ತುಂಬಿ, "ಇದು ಪರೀಕ್ಷೆಯ ಕಾಲ, ನಮ್ಮ ಪ್ರಜೆಗಳಿಗಾಗಿ ನಾವು ಸಹಿಸಿಕೊಳ್ಳಬೇಕು" ಎಂದು ಧೈರ್ಯ ಹೇಳಿದರು. ಹೊರಗೆ ಆಡಳಿತ ನಡೆಸುತ್ತಿದ್ದ ಮಗನಿಗೆ ಮಾರ್ಗದರ್ಶನ ನೀಡಿದ್ದರು. ಕೋಟೆಯನ್ನು ಭದ್ರಪಡಿಸಲು, ತೆರಿಗೆ ಸಂಗ್ರಹದಲ್ಲಿ ನ್ಯಾಯ ಕಾಪಾಡಲು, ರಾಮರಾಯನ ರಾಜಕಾರಣವನ್ನು ಅರ್ಥ ಮಾಡಿಕೊಂಡು ಅದಕ್ಕೆ ತಕ್ಕ ತಂತ್ರ ರೂಪಿಸು ಪರಿಸ್ಥಿತಿಗಳಿಗೆ ಸವಾಲ್ ಆದರು.

"ಗೆಲುವಿಗಿಂತ ಮಾನವೀಯತೆಗೆ ಒತ್ತು ನೀಡಿ. ಗೆದ್ದ ನಂತರವೂ ಮನುಷ್ಯರಾಗಿ ಉಳಿಯುವುದು ಮುಖ್ಯ" ಎಂಬ ಪತಿಯ ತತ್ವವನ್ನು ಚೆನ್ನಮ್ಮ ಅಕ್ಷರಶಃ ಪಾಲಿಸಿದರು. ರಾಜನ ಅನುಪಸ್ಥಿತಿಯಲ್ಲಿಯೂ

ರಾಜ್ಯ ನ್ಯಾಯದಿಂದ, ಧರ್ಮದಿಂದ ನಡೆಯಬೇಕು ಎಂದು ತೋರಿಸಿಕೊಟ್ಟರು. ರಾಮರಾಯನಿಗೆ ದೊಡ್ಡ ಮೊತ್ತದ ಕಾಣಿಕೆ ಕೊಡುವ ಸಂದರ್ಭ ಬಂದಾಗ, ಸೆರೆಮನೆಯಿಂದಲೇ ಸಂದೇಶ ಕಳುಹಿಸಿದರು: "ನನ್ನ ವಜ್ರಾಭರಣಗಳನ್ನೆಲ್ಲ ಕಾಣಿಕೆಯಾಗಿ ಕೊಡುವ ಹಣದಲ್ಲಿ ಸೇರಿಸಿಕೊಳ್ಳಿ. ನನ್ನ ಪತಿ ನನ್ನ ಸಂಪತ್ತು, ನನಗ್ಯಾಕೆ ಬೇರೆ ಸಂಪತ್ತು? ಆದರೆ ಪ್ರಜೆಗಳ ಮೇಲೆ ಒಂದೇ ಒಂದು ಕಾಸಿನ ತೆರಿಗೆ ಹೊರೆ ಹಾಕಬೇಡಿ." ಈ ಮೂಲಕ ಕೆಂಪೇಗೌಡರ ಧ್ವನಿಗೆ ಧ್ವನಿಯಾಗಿ, ಪ್ರಜಾವತ್ಸಲತೆಯನ್ನು ಮೆರೆದರು.

ಧರ್ಮ ಮತ್ತು ಸಂಸ್ಕೃತಿಯ ವಿಷಯದಲ್ಲೂ ಚೆನ್ನಮ್ಮನ ಕೊಡುಗೆ ಅನನ್ಯ. ಗವಿ ಗಂಗಾಧರೇಶ್ವರ ದೇವಾಲಯದ ಜಾತ್ರೆ, ಬೆಂಗಳೂರು ಕರಗದಂತಹ ಉತ್ಸವಗಳಲ್ಲಿ ಎಲ್ಲ ಜಾತಿ, ಎಲ್ಲ ವರ್ಗದ ಜನರಿಗೆ ಸಮಾನ ಅವಕಾಶ ಕಲ್ಪಿಸಿದರು. "ದೇವರ ಮುಂದೆ ಎಲ್ಲರೂ ಒಂದೇ" ಎಂಬ ಸಂದೇಶ ಸಾರಿದರು. ವೀರಶೈವ, ವೈಷ್ಣವ, ಜೈನ ಮಠಗಳಿಗೆ ಸಮಾನ ದಾನ ನೀಡಿ ಸೌಹಾರ್ದತೆಯನ್ನು ಬೆಳೆಸಿದರು. ಪ್ರಜೆಗಳ ಶಿಕ್ಷಣಕ್ಕೆ ಆದ್ಯತೆ ನೀಡಿ, ಯಲಹಂಕ, ಬೆಂಗಳೂರಿನಲ್ಲಿ ಹಲವು ಪಾಠಶಾಲೆ, ಅಗ್ರಹಾರಗಳಿಗೆ ದಾನ ನೀಡಿದರು. ಆಯುರ್ವೇದ ವೈದ್ಯರಿಗೆ ಪ್ರೋತ್ಸಾಹ ನೀಡಿ, ಉಚಿತ ಔಷಧ ವಿತರಣಾ ಕೇಂದ್ರಗಳನ್ನು ತೆರೆಸಿದರು.

ಈ ಹೊತ್ತಿನಲ್ಲಿ ನಿಂತು ನೋಡಿದಾಗ, ಮಹಾರಾಣಿ ಚೆನ್ನಮ್ಮನ ವ್ಯಕ್ತಿತ್ವ ಇಂದಿಗೂ ದಾರಿದೀಪ. ಆಡಳಿತದಲ್ಲಿ ಪಾರದರ್ಶಕತೆ, ಕುಟುಂಬದಲ್ಲಿ ಮೌಲ್ಯ, ಸಮಾಜದಲ್ಲಿ ಸಮಾನತೆ, ಪರಿಸರದಲ್ಲಿ ಕಾಳಜಿ ತಂದರೆ ಅದೇ ಅವರಿಗೆ ನಾವು ಸಲ್ಲಿಸುವ ನಿಜವಾದ ನಮನ. ಇಂದಿನ ರಾಜಕಾರಣಿಗಳಿಗೆ, ಆಡಳಿತಗಾರರಿಗೆ ಚೆನ್ನಮ್ಮನವರ ನಿಸ್ವಾರ್ಥ ಸೇವೆ, ತ್ಯಾಗಮಯ ಬದುಕು ಮಾದರಿಯಾಗಬೇಕು.

ಚೆನ್ನಮ್ಮ ಇತಿಹಾಸದ ಅಡಿಟಿಪ್ಪಣಿಯಲ್ಲ, ಅವರು ನಾಡಪ್ರಭುಗಳ ಯಶೋಗಾಥೆಯ ಅರ್ಧ ಭಾಗ, ಆತ್ಮಭಾಗ. ದೊಡ್ಡ ಕನಸು ಕಟ್ಟುವ ಗಂಡಸಿನ ಹಿಂದೆ ಆ ಕನಸನ್ನು ಕಾಪಾಡುವ, ಪೋಷಿಸುವ ಹೆಣ್ಣಿನ ಅಗಾಧ ಶಕ್ತಿ ಇರುತ್ತದೆ ಎಂದು ಅವರ ಬದುಕು ಜಗತ್ತಿಗೆ ಸಾರುತ್ತದೆ. ಕೆಂಪೇಗೌಡರು ಕಟ್ಟಿದ ಮಣ್ಣಿನ ಕೋಟೆ, ಕಲ್ಲಿನ ಗೋಪುರಗಳು ಕಾಲದ ಹೊಡೆತಕ್ಕೆ ಮರೆಯಾಗಬಹುದು. ಆದರೆ ಚೆನ್ನಮ್ಮ ತುಂಬಿದ ಕರುಣೆ, ಧೈರ್ಯ, ಸಾಮಾಜಿಕ ನ್ಯಾಯ, ಸ್ತ್ರೀ ಸಬಲೀಕರಣದ ಮೌಲ್ಯಗಳು ಅಮರ, ಶಾಶ್ವತ.

ಇಂದು ಬೆಂಗಳೂರು ಬೆಳೆಯುತ್ತಿದೆ, ಆದರೆ ಅದರ ಆತ್ಮಬಲ ಕುಗ್ಗುತ್ತಿದೆ. ಬೆಂಗಳೂರನ್ನು ಮತ್ತೆ "ಕಲ್ಯಾಣ ನಗರ", "ಉದ್ಯಾನ ನಗರ"ವನ್ನಾಗಿ ಮಾಡಲು ಕೆಂಪೇಗೌಡರ ದೂರದೃಷ್ಟಿಯ ಜೊತೆಗೆ ಚೆನ್ನಮ್ಮನ ಮಾತೃ ಹೃದಯವೂ ಬೇಕಾಗಿದೆ. ಕೆರೆಗಳನ್ನು ಉಳಿಸಿ, ಮರಗಳನ್ನು ಬೆಳೆಸಿ, ಹೆಣ್ಣುಮಕ್ಕಳಿಗೆ ಸುರಕ್ಷತೆ ನೀಡಿ, ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸಿದಾಗ ಮಾತ್ರ ನಾವು ಆ ಮಹಾನ್ ದಂಪತಿಗಳಿಗೆ ನಿಜವಾದ ಗೌರವ ಸಲ್ಲಿಸಿದಂತೆ. ಅವರ ಆದರ್ಶಗಳನ್ನು ಕೇವಲ ಭಾಷಣದಲ್ಲಿ, ಪಠ್ಯದಲ್ಲಿ ಇಡದೆ, ನಮ್ಮ ನಿತ್ಯ ಬದುಕಿನಲ್ಲಿ ಅಳವಡಿಸಿಕೊಂಡಾಗಲೇ ಇತಿಹಾಸಕ್ಕೆ ನಾವು ಸಲ್ಲಿಸುವ ನಿಜವಾದ ಗೌರವ, ನಮ್ಮ ಮುಂದಿನ ಪೀಳಿಗೆಗೆ ನಾವು ನೀಡುವ ದೊಡ್ಡ ಕೊಡುಗೆ. ❑

ಕೃಪೆ : ಕನ್ನಡ ಪ್ಲಾನೆಟ್

ಅಭಿನಂದನೆ

ರಾಜ್ಯಸಭೆ ಕಾರ್ಯದರ್ಶಿಯಾಗಿ ಕನ್ನಡಿಗ ಡಾ. ಕೆ.ಎಸ್. ಸೋಮಶೇಖರ್ ಆಯ್ಕೆ



ರಾಜ್ಯ ಸಭೆಯ ಕಾರ್ಯದರ್ಶಿಯಾಗಿ ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾದ ಡಾ. ಕೆ.ಎಸ್. ಸೋಮಶೇಖರ್ ಆಯ್ಕೆಯಾಗಿದ್ದಾರೆ. ಕೋಲಾರ ಜಿಲ್ಲೆಯ ಶ್ರೀನಿವಾಸಪುರ ಮೂಲದ ಸೋಮಶೇಖರ್ ರಾಜ್ಯಸಭೆಯ ಇಂಟರ್‌ಪ್ರಿಟರ್ ಆಗಿ 1993ರಲ್ಲಿ ಸೇವೆ ಆರಂಭಿಸಿದ್ದರು. ಅದಾದ ಬಳಿಕ ಹೆಚ್ಚುವರಿ ಕಾರ್ಯದರ್ಶಿಯಾಗಿದ್ದರು. ಈ ಹುದ್ದೆಗೆ ಏರಿದ ಮೊದಲ ಕನ್ನಡಿಗ ಅಧಿಕಾರಿ ಎನ್ನುವ ಹೆಗ್ಗಳಿಕೆಗೂ ಪಾತ್ರರಾಗಿದ್ದಾರೆ. ಅಲ್ಲದೆ ಈ ಮೊದಲು ರಾಜ್ಯಸಭೆಯ ನಿರ್ದೇಶಕರಾಗಿದ್ದರು. ಇದೀಗ ಸೋಮಶೇಖರ್ ಅವರನ್ನು ರಾಜ್ಯಸಭೆಯ ಕಾರ್ಯದರ್ಶಿಯನ್ನಾಗಿ ನೇಮಿಸಿ ರಾಜ್ಯಸಭಾ ಅಧ್ಯಕ್ಷ ಶ್ರೀ ಸಿ.ಪಿ. ರಾಧಾಕೃಷ್ಣನ್ ಆದೇಶ ಹೊರಡಿಸಿದ್ದಾರೆ.

ಸೋಮಶೇಖರ್ ಕರ್ನಾಟಕ ಸರ್ಕಾರದಲ್ಲಿ ಹಲವು ಆಡಳಿತಾತ್ಮಕ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ ಮತ್ತು ಅಂತರರಾಷ್ಟ್ರೀಯ ಸಂಸದೀಯ ವೇದಿಕೆಗಳಲ್ಲಿ ಭಾರತವನ್ನು ಪ್ರತಿನಿಧಿಸಿದ್ದಾರೆ. ಇಂಗ್ಲೆಂಡ್ ಮತ್ತು ಯುರೋಪಿಯನ್ ಒಕ್ಕೂಟದ ಸಂಸದೀಯ ವಿಶೇಷ ತರಬೇತಿಯನ್ನೂ ಪಡೆದಿದ್ದಾರೆ. ಅಲ್ಲದೆ ಜಿನೀವಾದಲ್ಲಿ ನಡೆದ ಅಂತರ್-ಸಂಸದೀಯ ಒಕ್ಕೂಟ (IPU) ಸಭೆಗಳಲ್ಲಿ ಭಾಗವಹಿಸಿದ್ದಾರೆ.

ವಿವಿಧ ಭಾಷೆಗಳಲ್ಲಿ ಪ್ರಾವಿಣ್ಯತೆ ಹೊಂದಿರುವ ಡಾ. ಸೋಮಶೇಖರ್ ಸಾಹಿತ್ಯದಲ್ಲಿ ಡಾಕ್ಟರೇಟ್ ಪಡೆದಿದ್ದು, ಕನ್ನಡ ಜತೆಗೆ ಹಿಂದಿ, ಇಂಗ್ಲಿಷ್ ತೆಲುಗು ಮತ್ತು ತಮಿಳಿನಲ್ಲಿ ಪ್ರಾವಿಣ್ಯ ಹೊಂದಿದ್ದಾರೆ. ಸದ್ಯ ಅವರು ಕಾರ್ಯದರ್ಶಿ ಹುದ್ದೆಗೆ ಆಯ್ಕೆಯಾಗಿದ್ದು, ತಮ್ಮ ಅಪಾರ ಆಡಳಿತಾತ್ಮಕ ಮತ್ತು ಶೈಕ್ಷಣಿಕ ಅನುಭವ ಧಾರೆ ಎರೆಯಲಿದ್ದಾರೆ.

ಡಾ. ಸೋಮಶೇಖರ್ ಸಂಸದೀಯ ಕಾರ್ಯವಿಧಾನಗಳು, ಆಡಳಿತ ನಿರ್ವಹಣೆ ಮತ್ತು ವಿವಿಧ ಸಂಸದೀಯ ಸಮಿತಿಗಳ ಕಾರ್ಯನಿರ್ವಹಣೆಯಲ್ಲಿ ಅಪಾರ ಅನುಭವ ಹೊಂದಿದ್ದಾರೆ. ಹೆಚ್ಚುವರಿಯಾಗಿ, ಅವರು ಕರ್ನಾಟಕ ರಾಜ್ಯ ಸರ್ಕಾರದಲ್ಲಿ ಹಿರಿಯ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ ಮತ್ತು ಗಮನಾರ್ಹ ಅಂತರರಾಷ್ಟ್ರೀಯ ಅನುಭವವನ್ನು ಹೊಂದಿರುವ ಇವರಿಗೆ ದೆಹಲಿ ಕರ್ನಾಟಕ ಸಂಘದ ವಿಶಿಷ್ಟ ಕನ್ನಡಿಗ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. ಡಾ. ಕೆ.ಎಸ್. ಸೋಮಶೇಖರ್ ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು. ❑

ಡಾ. ಎಂ.ಎಸ್. ಶಶಿ ಕುಮಾರ್ ಅವರಿಗೆ ಪದೋನ್ನತಿ



ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾದ ಡಾ. ಎಂ.ಎಸ್. ಶಶಿ ಕುಮಾರ್ ಅವರು ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಲ್ಲಿ ವಿಜ್ಞಾನಿಯಾಗಿ ಹಾಗೂ ಜಂಟಿ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದರು. ಇದೀಗ ಪದೋನ್ನತಿ ಹೊಂದಿ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಲ್ಲಿ ಸೈಂಟಿಸ್ಟ್–'F' (Scientist–F) / ನಿರ್ದೇಶಕ (Director) ಹುದ್ದೆಗೆ ಬಡ್ತಿ ಹೊಂದಿರುವುದು ಅತ್ಯಂತ ಸಂತಸದ ಸಂಗತಿ. ಈ ಮಹತ್ವದ ಸಾಧನೆಗಾಗಿ ಅವರಿಗೆ ದೆಹಲಿ ಕನ್ನಡಿಗರ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು.

ಕಳೆದ 25 ವರ್ಷಗಳಿಂದ ದೆಹಲಿಯಲ್ಲಿರುವ ಇವರು ಬೆಂಗಳೂರು ವಿಶ್ವವಿದ್ಯಾಲಯದಿಂದ ಸಸ್ಯಶಾಸ್ತ್ರ ವಿಭಾಗದಲ್ಲಿ ಎಂ.ಎಸ್ಸಿ. ಮತ್ತು ಸಸ್ಯಗಳ ಪಳೆಯುಳಿಕೆ ವಿಷಯದಲ್ಲಿ ಪಿ.ಎಚ್.ಡಿ. ಪದವಿ ಪಡೆದಿದ್ದಾರೆ. ಇವರು ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ 28 ವರ್ಷಗಳ ಸಂಶೋಧನಾ ಅನುಭವ ಹೊಂದಿದ್ದಾರೆ ಮತ್ತು ಸಣ್ಣ ಮತ್ತು ಮಧ್ಯಮ ಗಾತ್ರದ ಹೊಸ ಬಯೋಟೆಕ್ ಸಂಸ್ಥೆಗಳನ್ನು ಆರಂಭಿಸಲು ಬೇಕಾದ ಮಾರ್ಗದರ್ಶನ ಮತ್ತು ಸರ್ಕಾರದ ಅನುದಾನವನ್ನು ನೀಡುವಲ್ಲಿ ವಿಶೇಷ ಪಾತ್ರ ವಹಿಸಿದ್ದಾರೆ.

ಅವರ ವೃತ್ತಿ ಜೀವನದಲ್ಲಿ ಇನ್ನಷ್ಟು ಉನ್ನತ ಯಶಸ್ಸು, ಕೀರ್ತಿ ಹಾಗೂ ಗೌರವಗಳು ಲಭಿಸಲಿ, ಉತ್ತಮ ಆರೋಗ್ಯ, ಸುಖ–ಸಮೃದ್ಧಿ ಮತ್ತು ಇನ್ನಷ್ಟು ಮಹತ್ತರ ಸಾಧನೆಗಳನ್ನು ಅವರು ಮುಡಿಗೇರಿಸಿಕೊಳ್ಳಲಿ ಎಂಬುದು ನಮ್ಮೆಲ್ಲರ ಹಾರ್ದಿಕ ಶುಭ ಹಾರೈಕೆಗಳು. ❑

ಆತ್ಮವನ್ನು ಸ್ಪರ್ಶಿಸಿದ ತೀರ್ಥಯಾತ್ರೆ: ದೆಹಲಿಯಿಂದ ಉಜ್ಜಯಿನಿ ಮತ್ತು ಓಂಕಾರೇಶ್ವರದವರೆಗೆ

❝ತೀರ್ಥಯಾತ್ರೆಯನ್ನು ಅಳೆಯುವುದು ನಾವು ಕ್ರಮಿಸಿದ ಮೈಲಿಗಳಿಂದಲ್ಲ; ಅದು ನಮ್ಮ ಹೃದಯದಲ್ಲಿ ಬಿಟ್ಟುಹೋಗುವ ಶಾಂತಿಯಿಂದ."

ಕೆಲವು ಪ್ರಯಾಣಗಳು ಕೇವಲ ನೆನಪುಗಳಾಗಿ ಉಳಿಯುತ್ತವೆ; ಇನ್ನೂ ಕೆಲವು ಜೀವನಪರ್ಯಂತ ಆಶೀರ್ವಾದವಾಗಿ ನಮ್ಮೊಂದಿಗೆ ಸಾಗುತ್ತವೆ. ದೆಹಲಿಯಿಂದ ಪವಿತ್ರ ನಗರ ಉಜ್ಜಯಿನಿಗೆ ನಾವು ಕೈಗೊಂಡ ಈ ತೀರ್ಥಯಾತ್ರೆ ಅಂತಹ ಅಪರೂಪದ ಅನುಭವವಾಗಿತ್ತು. ಭಕ್ತಿ, ಇತಿಹಾಸ, ಪುರಾಣ ಮತ್ತು ಭಾರತದ ಶಾಶ್ವತ ಆಧ್ಯಾತ್ಮಿಕ ಪರಂಪರೆಯ ಮೂಲಕ ಸಾಗಿದ ಈ ಯಾತ್ರೆಯಲ್ಲಿ ಪ್ರತಿಯೊಂದು ತಾಣವೂ ನಂಬಿಕೆಯ ಹೊಸ ಅಧ್ಯಾಯವನ್ನು ತೆರೆದಿಟ್ಟಿತು. ಪ್ರತಿಯೊಂದು ದರ್ಶನವೂ ದೈವಿಕ ಅನುಗ್ರಹ ಮತ್ತು ಮನಃಶಾಂತಿಯಿಂದ ನಮ್ಮನ್ನು ಸಮೃದ್ಧಗೊಳಿಸಿತು.

ನಮ್ಮ ಯಾತ್ರೆ ದೆಹಲಿಯಿಂದ ಉಜ್ಜಯಿನಿಗೆ ರಾತ್ರಿ ರೈಲು ಪ್ರಯಾಣದೊಂದಿಗೆ ಆರಂಭವಾಯಿತು. ಇದು ಆರಾಮದಾಯಕ ಹಾಗೂ ಅನುಕೂಲಕರ ಪ್ರಯಾಣವಾಗಿತ್ತು. ನಾವು ಬೆಳಗಿನ ಜಾವ ಉಜ್ಜಯಿನಿಯನ್ನು ತಲುಪುತ್ತಿದ್ದಂತೆಯೇ ನಮ್ಮನ್ನು ಎದುರು ನೋಡುತ್ತಿದ್ದ ಆಧ್ಯಾತ್ಮಿಕ ಅನುಭವಗಳ ನಿರೀಕ್ಷೆಯಿಂದ ಮನಸ್ಸು ತುಂಬಿತು.

ಉಜ್ಜಯಿನಿಯ ಪ್ರಾಚೀನ ಹೆಸರು ಅವಂತಿಕಾ. ಸ್ಕಂದ ಪುರಾಣ ಸೇರಿದಂತೆ ಅನೇಕ ಪುರಾಣಗಳಲ್ಲಿ ಈ ಕ್ಷೇತ್ರದ ಮಹಿಮೆ ವರ್ಣಿಸಲಾಗಿದೆ. ಕ್ಷಿಪ್ರಾ ನದಿಯ ದಡದಲ್ಲಿರುವ ಈ ನಗರವನ್ನು ಮೋಕ್ಷಪ್ರದಾಯಕ ಸಪ್ತಪುರಿಗಳಲ್ಲಿ ಒಂದೆಂದು ಪರಿಗಣಿಸಲಾಗುತ್ತದೆ. ಹನ್ನೆರಡು ವರ್ಷಗಳಿಗೊಮ್ಮೆ ನಡೆಯುವ ಸಿಂಹಸ್ಥ ಕುಂಭಮೇಳ ಲಕ್ಷಾಂತರ ಭಕ್ತರನ್ನು ಇಲ್ಲಿ ಸೆಳೆಯುತ್ತದೆ. ವಿಕ್ರಮಾದಿತ್ಯನ ರಾಜಧಾನಿಯಾಗಿದ್ದ ಈ ನಗರವು ಖಗೋಳಶಾಸ್ತ್ರ, ಸಾಹಿತ್ಯ ಮತ್ತು ಭಾರತೀಯ ಸಂಸ್ಕೃತಿಯ ಪ್ರಮುಖ ಕೇಂದ್ರವೂ ಆಗಿತ್ತು.

ಮೊದಲ ಮತ್ತು ಅತ್ಯಂತ ಮರೆಯಲಾಗದ ಅನುಭವವೆಂದರೆ ಪ್ರಸಿದ್ಧ ಮಹಾಕಾಳೇಶ್ವರ ದೇವಸ್ಥಾನದಲ್ಲಿ ಮುಂಜಾನೆ ನಡೆಯುವ ಭಸ್ಮ ಆರತಿಯನ್ನು ಕಣ್ತುಂಬಿಕೊಳ್ಳುವುದು. ಶತಮಾನಗಳ ಇತಿಹಾಸ ಹೊಂದಿರುವ ಈ ಅಪರೂಪದ ಆರತಿಯಲ್ಲಿ ಶಿವನನ್ನು ಪವಿತ್ರ ಭಸ್ಮದಿಂದ ಅಲಂಕರಿಸಲಾಗುತ್ತದೆ. ಜೀವನ ಕ್ಷಣಿಕವಾದರೂ ಆತ್ಮ ಶಾಶ್ವತ ಎಂಬ ಸತ್ಯವನ್ನು ಈ ಆಚರಣೆ ಸಾರುತ್ತದೆ. ವೇದಮಂತ್ರಗಳ ಘೋಷ, ಗಂಟೆಗಳ ನಾದ ಮತ್ತು ದೇವಾಲಯದ ಆಧ್ಯಾತ್ಮಿಕ ವಾತಾವರಣವು ಮಾತಿನಲ್ಲಿ ವರ್ಣಿಸಲಾಗದ ಅನುಭವವನ್ನು ನೀಡಿತು. ಭಸ್ಮ ಆರತಿ ಕೇವಲ ಒಂದು ಧಾರ್ಮಿಕ ವಿಧಿಯಲ್ಲ; ಅದು ಆತ್ಮವನ್ನು ಜಾಗೃತಗೊಳಿಸಿದ ಅಪೂರ್ವ ಅನುಭವವಾಗಿತ್ತು.



ನಂತರ ನಾವು ಹನ್ನೆರಡು ಜ್ಯೋತಿರ್ಲಿಂಗಗಳಲ್ಲಿ ಒಂದಾದ ಮಹಾಕಾಳೇಶ್ವರ ಜ್ಯೋತಿರ್ಲಿಂಗದ ದರ್ಶನ ಪಡೆದೆವು. ಸ್ವಯಂಭೂ ಜ್ಯೋತಿರ್ಲಿಂಗವೆಂದು ನಂಬಲಾಗುವ ಮಹಾಕಾಳೇಶ್ವರನು ದಕ್ಷಿಣಾಭಿಮುಖವಾಗಿರುವ ಏಕೈಕ ಜ್ಯೋತಿರ್ಲಿಂಗ. ಪುರಾಣದ ಪ್ರಕಾರ, ದುಷಣ ಎಂಬ ಅಸುರನಿಂದ ಭಕ್ತರನ್ನು ರಕ್ಷಿಸಲು ಶಿವನು ಸ್ವಯಂ ಮಹಾಕಾಳ ರೂಪದಲ್ಲಿ ಇಲ್ಲಿ ಪ್ರತ್ಯಕ್ಷನಾಗಿ ದುಷ್ಟನ ಸಂಹಾರ ಮಾಡಿದನು. ಭಕ್ತರ ಪ್ರಾರ್ಥನೆಯ ಮೇರೆಗೆ ಆತನು ಇಲ್ಲಿಯೇ ಜ್ಯೋತಿರ್ಲಿಂಗವಾಗಿ ನೆಲೆಸಿದನೆಂದು ನಂಬಲಾಗಿದೆ.

ಇದು ಕಾಲ ಮತ್ತು ಮರಣದ ಮೇಲಿನ ಶಿವನ ಅಧಿಪತ್ಯದ ಸಂಕೇತವಾಗಿದೆ. ಪುರಾಣಗಳು ಹಾಗೂ ಪ್ರಾಚೀನ ಗ್ರಂಥಗಳಲ್ಲಿ ಉಲ್ಲೇಖವಾಗಿರುವ ಈ ದೇವಾಲಯವು ಶತಮಾನಗಳಿಂದ ಭಕ್ತರ ನಂಬಿಕೆಯ ಕೇಂದ್ರವಾಗಿದೆ. ಅಪಾರ ಜನಸಂದಣಿಯ ನಡುವೆಯೂ ಶೀಘ್ರ ದರ್ಶನ ವ್ಯವಸ್ಥೆಯಿಂದ ಶಾಂತವಾಗಿ ದರ್ಶನ ಪಡೆಯಲು ಸಾಧ್ಯವಾಯಿತು.

ಮುಂದೆ ನಮ್ಮ ಯಾತ್ರೆ ನರ್ಮದಾ ನದಿಯ ಮಧ್ಯದಲ್ಲಿರುವ ಮಾಂಧಾತಾ ದ್ವೀಪದಲ್ಲಿನ ಓಂಕಾರೇಶ್ವರ ಜ್ಯೋತಿರ್ಲಿಂಗದತ್ತ ಸಾಗಿತು. ಮತ್ತೊಂದು ಕಥೆಯ ಪ್ರಕಾರ ರಾಜ ಮಾಂಧಾತನು ಇಲ್ಲಿಯೇ ಕಠಿಣ ತಪಸ್ಸು ಮಾಡಿ ಶಿವನ ಅನುಗ್ರಹ ಪಡೆದನೆಂಬ ಪ್ರತೀತಿ ಇದೆ. ಈ ದ್ವೀಪವು ಸಹಜವಾಗಿಯೇ "ಓಂ" ಆಕಾರವನ್ನು ಹೊಂದಿದೆ ಎಂಬ ನಂಬಿಕೆಯಿಂದಲೇ ಈ ಕ್ಷೇತ್ರಕ್ಕೆ ಓಂಕಾರೇಶ್ವರ ಎಂಬ ಹೆಸರು ಬಂದಿದೆ. ದೇವಾಲಯವನ್ನು ತಲುಪಲು ತೂಗು ಸೇತುವೆಯ ಮೂಲಕ ನಡೆದು ಹೋಗಬಹುದು ಅಥವಾ ದೋಣಿಯಲ್ಲಿ ನರ್ಮದೆಯನ್ನು ದಾಟಬಹುದು. ಎರಡೂ ಮಾರ್ಗಗಳು ಪ್ರಕೃತಿಯ ಸೊಬಗನ್ನು ಆಸ್ವಾದಿಸುವ ಅಪೂರ್ವ ಅವಕಾಶವನ್ನು ಒದಗಿಸುತ್ತವೆ. ಇಲ್ಲಿಯೂ ಶೀಘ್ರ ದರ್ಶನ ವ್ಯವಸ್ಥೆಯಿಂದ ಸುಗಮವಾಗಿ ದರ್ಶನ ಪಡೆಯಲು ಸಾಧ್ಯವಾಯಿತು.

ಓಂಕಾರೇಶ್ವರದ ಪಕ್ಕದಲ್ಲಿರುವ ಮಾಮಲೇಶ್ವರ ದೇವಸ್ಥಾನವೂ ಅಪಾರ ಐತಿಹಾಸಿಕ ಹಾಗೂ ಧಾರ್ಮಿಕ ಮಹತ್ವವನ್ನು ಹೊಂದಿದೆ. ಸಂಪ್ರದಾಯದ ಪ್ರಕಾರ, ಮಾಮಲೇಶ್ವರನ ದರ್ಶನವಿಲ್ಲದೆ ಓಂಕಾರೇಶ್ವರ ಯಾತ್ರೆ ಪೂರ್ಣವಾಗುವುದಿಲ್ಲ ಎಂದು ನಂಬಲಾಗುತ್ತದೆ. ಕಲ್ಲಿನ ಸುಂದರ ಕೆತ್ತನೆಗಳು, ಶಾಂತ ವಾತಾವರಣ ಮತ್ತು ಪುರಾತನ ವೈಭವ ಈ ದೇವಾಲಯವನ್ನು ಇನ್ನಷ್ಟು ವಿಶೇಷವಾಗಿಸುತ್ತವೆ.

ಉಜ್ಜಯಿನಿಯಲ್ಲಿರುವ ದೇವಿ ಆರಾಧನೆಯ ಎರಡು ಪ್ರಮುಖ ಕ್ಷೇತ್ರಗಳಾದ ಹರ್ಸಿದ್ಧಿ ಮತ್ತು ಗಡ್ಕಾಲಿಕಾ ದೇವಸ್ಥಾನಗಳ ದರ್ಶನವೂ ನಮ್ಮ ಯಾತ್ರೆಯನ್ನು ಮತ್ತಷ್ಟು ಅರ್ಥಪೂರ್ಣಗೊಳಿಸಿತು.

ಹರ್ಸಿದ್ಧಿ ದೇವಸ್ಥಾನವು ಶಕ್ತಿಯ ಅತ್ಯಂತ ಪವಿತ್ರ ಕ್ಷೇತ್ರಗಳಲ್ಲಿ ಒಂದಾಗಿದೆ. ಪುರಾಣಗಳ ಪ್ರಕಾರ ದೇವಿ ಸತಿಯ ಮೊಣಕೈ ಇಲ್ಲಿ ಬಿದ್ದಿತೆಂದು ನಂಬಲಾಗಿದ್ದು, 51 ಶಕ್ತಿಪೀಠಗಳಲ್ಲಿ ಒಂದೆಂದು ಪರಿಗಣಿಸಲಾಗಿದೆ. ವಿಶೇಷವಾಗಿ ಇಲ್ಲಿನ ಜೋಡಿ ದೀಪಸ್ತಂಭಗಳು ನವರಾತ್ರಿಯ ಸಂದರ್ಭದಲ್ಲಿ ಸಾವಿರಾರು ದೀಪಗಳಿಂದ ಕಂಗೊಳಿಸುವ ದೃಶ್ಯ ಮನಮೋಹಕವಾಗಿರುತ್ತದೆ. ಮಹಾನ್ ರಾಜ ವಿಕ್ರಮಾದಿತ್ಯ ಈ ದೇವಿಯ ಪರಮಭಕ್ತರಾಗಿದ್ದನು ಎಂಬ ನಂಬಿಕೆಯೂ ಈ ಕ್ಷೇತ್ರದ ಮಹತ್ವವನ್ನು ಹೆಚ್ಚಿಸಿದೆ.

ನಂತರ ನಾವು ಗಡ್ಕಾಲಿಕಾ ದೇವಸ್ಥಾನಕ್ಕೆ ಭೇಟಿ ನೀಡಿದೆವು. ದೇವಿ ಕಾಳಿಕೆಗೆ ಸಮರ್ಪಿತವಾಗಿರುವ ಈ ಪುರಾತನ ದೇವಾಲಯವು ಉಜ್ಜಯಿನಿಯ ಸಾಂಸ್ಕೃತಿಕ ಪರಂಪರೆಯ ಅವಿಭಾಜ್ಯ ಅಂಗವಾಗಿದೆ. ಪ್ರಸಿದ್ಧ ಸಂಸ್ಕೃತ ಕವಿ ಕಾಳಿದಾಸ ದೇವಿ ಕಾಳಿಕೆಯ ಕೃಪೆಯಿಂದಲೇ ಮಹಾನ್ ಕವಿಯಾಗಿ ರೂಪುಗೊಂಡರು ಎಂಬ ನಂಬಿಕೆ ಇದೆ. ಇಂದಿಗೂ ಜ್ಞಾನ, ವಿದ್ಯೆ ಹಾಗೂ ಯಶಸ್ಸಿಗಾಗಿ ವಿದ್ಯಾರ್ಥಿಗಳು, ಪಂಡಿತರು ಮತ್ತು ಭಕ್ತರು ಇಲ್ಲಿಗೆ ಆಗಮಿಸುತ್ತಾರೆ.

ನಮ್ಮ ಯಾತ್ರೆಯ ಮತ್ತೊಂದು ಮಹತ್ವದ ತಾಣವೆಂದರೆ ಕಾಲಭೈರವ ದೇವಸ್ಥಾನ. ಶಿವನ ಉಗ್ರ ಸ್ವರೂಪವಾದ ಕಾಲಭೈರವನು ಉಜ್ಜಯಿನಿಯ

ರಕ್ಷಕ ದೇವರೆಂದು ಭಕ್ತರು ನಂಬುತ್ತಾರೆ. ಈ ದೇವಾಲಯದ ವಿಶೇಷತೆ ಎಂದರೆ ದೇವರಿಗೆ ಮದ್ಯವನ್ನು ನೈವೇದ್ಯವಾಗಿ ಅರ್ಪಿಸುವ ವಿಶಿಷ್ಟ ಸಂಪ್ರದಾಯ. ಶತಮಾನಗಳಿಂದ ನಡೆದುಬರುತ್ತಿರುವ ಈ ತಾಂತ್ರಿಕ ಸಂಪ್ರದಾಯವನ್ನು ನೋಡಲು ದೇಶದ ಮೂಲೆಮೂಲೆಗಳಿಂದ ಭಕ್ತರು ಹಾಗೂ ಪ್ರವಾಸಿಗರು ಆಗಮಿಸುತ್ತಾರೆ. ದೇವರ ಸನ್ನಿಧಿಯಲ್ಲಿ ನಿಂತಾಗ ರಕ್ಷಣೆ, ಧೈರ್ಯ ಮತ್ತು ಭಕ್ತಿಯ ಅದ್ಭುತ ಅನುಭವ ಮನಸ್ಸನ್ನು ಆವರಿಸುತ್ತದೆ.

ಈ ಸಂಪೂರ್ಣ ಯಾತ್ರೆಯಲ್ಲಿ ನಾವು ಕೇವಲ ಪುರಾತನ ದೇವಾಲಯಗಳ ವೈಭವವನ್ನಷ್ಟೇ ಅಲ್ಲ, ಪವಿತ್ರ ನರ್ಮದೆಯ ಶಾಂತ ಹರಿವು, ಉಜ್ಜಯಿನಿಯ ಭಕ್ತಿಮಯ ವಾತಾವರಣ ಮತ್ತು ಸಹಯಾತ್ರಿಕರ ಆತ್ಮೀಯತೆಯನ್ನೂ ಅನುಭವಿಸಿದೆವು. ಪ್ರತಿಯೊಂದು ದೇವಾಲಯವೂ ತನ್ನದೇ ಆದ ಕಥೆಯನ್ನು ಹೇಳಿತು; ಪ್ರತಿಯೊಂದು ಪ್ರಾರ್ಥನೆಯೂ ಹೊಸ ಅರ್ಥವನ್ನು ನೀಡಿತು; ಪ್ರತಿಯೊಂದು ಕ್ಷಣವೂ ಭಾರತದ ಆಧ್ಯಾತ್ಮಿಕ ಪರಂಪರೆಯೊಂದಿಗೆ ನಮ್ಮ ಬಾಂಧವ್ಯವನ್ನು ಇನ್ನಷ್ಟು ಗಟ್ಟಿಗೊಳಿಸಿತು.

ಈ ತೀರ್ಥಯಾತ್ರೆ ಕೇವಲ ದೇವಾಲಯಗಳ ಸಂದರ್ಶನವಾಗಿರಲಿಲ್ಲ. ಅದು ಇತಿಹಾಸ, ಪುರಾಣ, ವಾಸ್ತುಶಿಲ್ಪ ಮತ್ತು ಅಚಲ ಭಕ್ತಿಯ ಮೂಲಕ ನಡೆದ ಆಧ್ಯಾತ್ಮಿಕ ಪಯಣವಾಗಿತ್ತು. ಮಹಾಕಾಳೇಶ್ವರನ ಭಸ್ಮ ಆರತಿಯಿಂದ ಆರಂಭಿಸಿ ಮಹಾಕಾಳೇಶ್ವರ ಮತ್ತು ಓಂಕಾರೇಶ್ವರ ಜ್ಯೋತಿರ್ಲಿಂಗಗಳ ದರ್ಶನ, ಮಾಮಲೇಶ್ವರನ ಪುರಾತನ ವೈಭವ, ಹರ್ಸಿದ್ಧಿ, ಗಡ್ಕಾಲಿಕಾ ಮತ್ತು ಕಾಲಭೈರವರ ದಿವ್ಯ ಆಶೀರ್ವಾದ ಪ್ರತಿಯೊಂದು ಹೆಜ್ಜೆಯೂ ನಮ್ಮ ನಾಗರಿಕತೆಯ ಮಹಾನ್ ಆಧ್ಯಾತ್ಮಿಕ ಪರಂಪರೆಯನ್ನು ಇನ್ನಷ್ಟು ಆಳವಾಗಿ ಅರಿಯುವಂತೆ ಮಾಡಿತು.

ಯಾತ್ರೆಯ ಅಂತ್ಯದಲ್ಲಿ ನಾವು ಕೇವಲ ಛಾಯಾಚಿತ್ರಗಳು ಮತ್ತು ನೆನಪುಗಳನ್ನು ಮಾತ್ರವಲ್ಲ, ಕೃತಜ್ಞತೆ, ಮನಃಶಾಂತಿ ಮತ್ತು ಪುನರುಜ್ಜೀವಿತವಾದ ಭಕ್ತಿಯಿಂದ ತುಂಬಿದ ಹೃದಯವನ್ನೂ ಹೊತ್ತು ಮರಳಿದೆವು. ಭಾರತದ ಪವಿತ್ರ ಪರಂಪರೆ ಕೇವಲ ಕಲ್ಲಿನ ದೇವಾಲಯಗಳಲ್ಲಿ ಮಾತ್ರ ಉಳಿದಿಲ್ಲ; ಅದು ಲಕ್ಷಾಂತರ ಜನರ ಪ್ರಾರ್ಥನೆಗಳಲ್ಲಿ, ಪವಿತ್ರ ನದಿಗಳ ಹರಿವಿನಲ್ಲಿ, ಶಾಶ್ವತ ಆಚರಣೆಗಳಲ್ಲಿ ಮತ್ತು ತಲೆಮಾರುಗಳನ್ನು ಪ್ರೇರೇಪಿಸುತ್ತಿರುವ ಅಚಲ ಭಕ್ತಿಯಲ್ಲಿ ಜೀವಂತವಾಗಿದೆ ಎಂಬುದನ್ನು ಈ ಯಾತ್ರೆ ನಮಗೆ ಮನದಟ್ಟು ಮಾಡಿಸಿತು.

ನಿಜಕ್ಕೂ, ಇದು ನಮ್ಮ ಜೀವನದ ಅತ್ಯಂತ ಅಮೂಲ್ಯ ಮತ್ತು ಎಂದೆಂದಿಗೂ ಮರೆಯಲಾಗದ ತೀರ್ಥಯಾತ್ರೆಗಳಲ್ಲಿ ಒಂದಾಗಿದೆ.❑

(ಯಾತ್ರಾ ಮಾಹಿತಿ : ಉಜ್ಜಯಿನಿಗೆ ಹೋಗಲು ನವದೆಹಲಿ ರೈಲು ನಿಲ್ದಾಣದಿಂದ ನೇರ ರೈಲು ಸೌಕರ್ಯವಿದೆ. ಉಜ್ಜಯಿನಿ ತಲುಪಿದ ನಂತರ ದೇವಸ್ಥಾನಗಳಿಗೆ ಹೋಗಲು, ಸ್ಥಳೀಯವಾಗಿ ಸುತ್ತಾಡಲು ಶೇರಿಂಗ್ ಟೆಂಪೋ ಆಟೋಗಳಿವೆ, ಖಾಸಗಿ ಆಟೋ/ಕ್ಯಾಬ್ ಯಾವುದನ್ನಾದರೂ ಬಳಸಿಕೊಳ್ಳಬಹುದು. ವಿಶೇಷ ದರ್ಶನಕ್ಕಾಗಿ ಮೊದಲೇ ಆನ್‌ಲೈನ್ ಬುಕ್ಕಿಂಗ್ ಮಾಡಿಕೊಂಡು ಹೋಗುವುದು ಒಳಿತು. ಇದರಿಂದ ಗಂಟೆಗಳ ಕಾಲ ಸರತಿಯಲ್ಲಿ ನಿಲ್ಲುವುದು ತಪ್ಪುತ್ತದೆ)

ರಮ್ಯಾ ಆರ್.ಎಸ್.

ಮನೋವಿಜ್ಞಾನ ಮನಸ್ಸಿನ ರೋಗಕ್ಕೆ ಮಂತ್ರ

ಪ್ರತಾಪ ಒಬ್ಬ ಅರ್ಹ ಮತ್ತು ಮದುವೆಗೆ ಯೋಗ್ಯವಾದ ಯುವಕ. ಕಟ್ಟಡ ನಿರ್ಮಾಣದ ಸ್ವಂತ ಉದ್ಯಮ ನಡೆಸುತ್ತಿರುವ ಯಶಸ್ವಿ ಇಂಜಿನಿಯರ್. ಪ್ರತಾಪನಿಗೆ ಮದುವೆ ನಿಶ್ಚಯವಾಗಿ ಅವನು ಎಲ್ಲಾ ರೀತಿಯ ಯೌವ್ವನದ ಕನಸಿನ ಗುಂಗಿನಲ್ಲಿ ತೇಲಾಡುತ್ತಿದ್ದಾನೆ.

ಆದರೆ ಪ್ರತಾಪ ಈ ಮೊದಲು ತನ್ನ ಸಹಪಾಠಿ ವಿನುತಾಳನ್ನು ಅಗಾಧವಾಗಿ ಪ್ರೀತಿಸುತ್ತ ತನ್ನ ಮದುವೆಯ ಜೀವನದ ಕನಸನ್ನು ಅವಳೊಂದಿಗೆ ಕಂಡಿರುತ್ತಾನೆ. ಅದು ಆರು ವರ್ಷದ ಆಳವಾದ ಪ್ರಣಯ ಕಥೆ. ಹದಿಹರೆಯದ ಹಾದಿಯಲ್ಲಿ ಜೋಡಿ ಹಕ್ಕಿಯಂತೆ ಜೋಕಾಲೆಯಲ್ಲಿ ಜೋತಾಡಿದ ಆ ಕ್ಷಣಗಳು ಪ್ರತಾಪನಿಗೆ ದಿನದಲ್ಲಿ ಮರೆತಿದ್ದರೂ ಕನಸಲ್ಲಿ ಕಾಡುತಿತ್ತೇನೊ ಅನಿಸುತಿತ್ತು. ವಿನುತ ಧೈರ್ಯವಂತೆ ಮತ್ತು ಸುಂದರವಾದ ಯುವತಿ. ಪ್ರತಾಪನಿಗೆ ಹೋಲಿಸಿದರೆ ವಿನುತ ಓದಿನಲ್ಲೂ ಮುಂದು ಮತ್ತು ಅವನಿಗೂ ಅವಳು ಗುರುವಾಗಿದ್ದಳು. ಹೀಗೆ ಪ್ರಣಯದ ಆ ದಿನಗಳಲ್ಲಿ ಮಾತಾಡುತ್ತಿದ್ದ ವಿನುತಾ ಪ್ರತಾಪನಿಗೆ ಹೀಗೆ ಹೇಳಿದ್ದಳು.

ವಿನುತ : ನಾನೇನಾದರು ಅಕಸ್ಮಾತ್ ಬೇಗ ಸತ್ತುಹೋದರೆ ನೀನು ಇನ್ನೊಂದು ಮದುವೆಯಾಗ್ತೀಯಾ?

ಪ್ರತಾಪ : ಕನಸಿನಲ್ಲೂ ಆ ಯೋಚನೆ ಮಾಡಬೇಡ ವಿನು. ನೀನಿಲ್ಲದ ಈ ಜಗತ್ತಿನಲ್ಲಿ ನಾನು ಬದುಕಲು ಸಾಧ್ಯವೇ?

ವಿನುತ : ಈ ಢವ್ ಎಲ್ಲಾ ಬೇಡ. ಕೇಳಿದ ಪ್ರಶ್ನೆಗೆ ನೇರಾ ಉತ್ತರ ಕೊಡು ಪ್ರತಾಪ್.

ಪ್ರತಾಪ : ಸಾವಿನ ವಿಷಯವನ್ನು ನಾನು ನೆನೆಸಿಕೊಳ್ಳುವುದೇ ಅಸಾಧ್ಯ. ಈ ಪ್ರಶ್ನೆಯೇ ನನಗೆ out of syllabus. ನನ್ನನ್ನು ಒತ್ತಾಯ ಮಾಡಬೇಡ ಪ್ಲೀಸ್.

ವಿನುತ : don' t divert.... ಈ ಪ್ರಶ್ನೆಗೆ ನನಗೆ ಉತ್ತರ ಬೇಕೇ ಬೇಕು. ನಿನಗೆ ಬೇರೆ ಆಯ್ಕೆನೇ ಇಲ್ಲಾ. ನಿನ್ನ ಆ ಪ್ರೀತಿಯ ಉತ್ತರ ಏನಿರಬಹುದು ಎಂಬ ಕುತೂಹಲ ನನ್ನೊಳಗೆ ಕಾತರದಿಂದ ಕೇಳುವಂತೆ ಮಾಡಿದೆ.

ಪ್ರತಾಪ : ನಿನ್ನನ್ನು ನೋಡಿದ ಈ ಕಂಗಳು ಮತ್ತು ನೀನೇ ತುಂಬಿರುವ ಈ ಮನಸ್ಸು, ಇನ್ನೊಂದು ಹುಡುಗಿಯನ್ನಲ್ಲ ಅವಳ ಬಿಂಬವನ್ನೂ ನೋಡ ಬಯಸುವುದಿಲ್ಲ. ಇನ್ನೂ ಮದುವೆ ಸಾಧ್ಯದ ಮಾತಾ? ಯಾವುದೇ ಜನ್ಮದಲ್ಲಿ ಆದರೂ ನೀನೆ ನನ್ನ ಹೆಂಡ್ತಿ ಮತ್ತು ನಾನೇ ನಿನ್ನ ಗಂಡ.

ವಿನುತ : ಈಗ ನನಗೆ ಸಮಾಧಾನವಾಯಿತು. ನನ್ನ ಕೈ ಮೇಲೆ ಕೈ ಇಟ್ಟು ಭಾಷೆ ಕೊಡು ಪ್ರತಾಪ, ನೀನಿಲ್ಲದಿದ್ದರೆ ನೀನು ಬೇರೆಯವರನ್ನು ಮದುವೆ ಆಗಲ್ಲವೆಂದು.

ಪ್ರತಾಪ : ನಿನ್ನನ್ನು ನೋಡಿದ ಈ ಕಣ್ಣು ಬೇರೆ ಯಾವ ಹೆಣ್ಣನ್ನೂ ನೋಡದಿನ್ನು ಎಂದು ವಿನುತಾಳ ಕೈ ಮೇಲೆ ಕೈ ಇಟ್ಟು ಭಾಷೆ ಕೊಟ್ಟನು......

ಅಷ್ಟರಲ್ಲಿ ಕನಸಿನಿಂದ ಎಚ್ಚರವಾದ ಪ್ರತಾಪ ಸತ್ತು ಇಷ್ಟು ವರ್ಷಗಳಾದರೂ ಬದುಕಲು ಬಿಡುತ್ತಿಲ್ಲ ವಿನುತ. ಇನ್ನೂ ಕಾಡುತ್ತಿರುವೆಯಾ ವಿನುತಾ. ನನ್ನನ್ನು ಬದುಕಲು ಬಿಡಲಾರೆಯಾ?

ಗೊಣಗುತ್ತ ಎದ್ದು ಆಫೀಸಿಗೆ ತಯಾರಾಗಿ ಹೊರಟ ಪ್ರತಾಪ. ಆಫೀಸಿನಲ್ಲಿ ಸಿಕ್ಕ ಸ್ನೇಹಿತ **ಹುಲಿಕುಮಾರ್ :** ಏನೋ, ಕೌಂಟ್ ಡೌನ್ ಶುರುವಾಗಿದೆ. ಮದುಮಗನ ಕಳೆನೇ ಇಲ್ಲವಲ್ಲೋ. ಏನೋ ಸಂಕಟ ನಿಂದು.

ಪ್ರತಾಪ : ವಿನುತಾ ದಿನ ರಾತ್ರಿ ಬಂದು ಕಾಡ್ತಾನೆ ಇದಾಳೆ. ಕನ್ನಿಕಾ ಜೊತೆ ಎಂಗೇಜ್ ಆದಾಗಿಂದ ನಿದ್ದೆಯಲ್ಲಿ ಬಂದು ಕಾಡುತ್ತಿದ್ದಾಳೆ. ಹೀಗೇ ಮಲಗುತ್ತಿದ್ದಂತೆ ಬಂದು ನೀನು ನನಗೆ ಮಾತು ಕೊಟ್ಟಿರುವೆ. ನಾನಲ್ಲದೆ ನಿನ್ನ ಜೀವನದಲ್ಲಿ ಬೇರೆ ಹೆಣ್ಣು ಬರಬಾರದು ಎಂದು ಕಣ್ಣು ಮುಚ್ಚಿದರೆ ಸಾಕು ಕಾಡುತ್ತಿದ್ದಾಳೆ ನನ್ನ.

ಹುಲಿ ಕುಮಾರ್ : ಏನೋ ನಿನ್ನ ಗೋಳು., ಪ್ರೀತಿಯಲ್ಲಿ ಬಿದ್ದವರ ಬಾಳು ಬರೀ ಹಾಳು. ಸರಿ, ಇದಕ್ಕೆಲ್ಲಾ ಉಪಾಯ ನಮ್ಮ ಡಾಕ್ಟರ್ ಜಾಲಿ ಕೃಷ್ಣ. ನಾಳೆ ನಡಿ ಹೋಗೋಣ.

ಪ್ರತಾಪ : ಈ ಒಂದು ಸಮಸ್ಯೆಯಿಂದ ಪಾರು ಮಾಡಿದರೆ ನೀನು ಇರುವವರೆಗೂ ತಿಂಗಳಿಗೊಂದು ಪಾರ್ಟಿ.

ಹುಲಿ ಕುಮಾರ್ : ಓಕೆ ಸಿಸ್ಯ, ನಾಳೆ ಸಿಗು ನಿನಗೆ ಪರಿಹಾರ ಪಕ್ಕ.

ಮಾರನೆ ದಿನ ಜಾಲಿ ಕೃಷ್ಣ ಅವರ ಮನೆ ಕಮ್ ಕಛೇರಿಯಲ್ಲಿ ಡಾಕ್ಟರ್ ಓದುತ್ತ ಕುಳಿತಿರುವಾಗಲೇ ಪ್ರತಾಪ ಮತ್ತು ಹುಲಿ ಕುಮಾರ್ ಬರುತ್ತಾರೆ.

ಹುಲಿ ಕುಮಾರ್ : ನಮಸ್ತೆ ಡಾ. ಜಾಲಿ, ಹೇಗಿದ್ದೀರಿ ?

ಡಾಕ್ಟರ್ ಜಾಲಿ : ಓಹೋ ಏನೋ ಹೊಸ ಸಮಸ್ಯೆ ಸಮೇತ ಆಗಮನವಾದಂತಿದೆ. ಬನ್ನಿ ಬನ್ನಿ..... Welcome.

ಹುಲಿ ಕುಮಾರ್ : ಸರ್ ಇವರು ನನ್ನ ಪ್ರಾಣ ಸ್ನೇಹಿತ ಪ್ರತಾಪ, ಸಹೋದ್ಯೋಗಿ ಮತ್ತು ಇನ್ನೂ ಅನೇಕ.

ಡಾ. ಜಾಲಿ : ಓಹೋ, ನಿಮ್ಮ ಈ ಸ್ನೇಹಿತನ ಮುಖಭಾವ ಯಾವುದೋ ವಶೀಕರಣಕ್ಕೆ ಶರಣಾಗಿ ಜಾಲಿ ಎಲ್ಲಾ ಖಾಲಿ ಆದಂತೆ ಕಾಣುತ್ತಿದ್ದಾನೆ. ಇರಲಿ ನಾನಿದ್ದೀನಿ ಡಾ. ಜಾಲಿ.

ಹುಲಿ ಕುಮಾರ್ : ಕರೆಕ್ಟಾಗಿ ಹೇಳಿದ್ರಿ ಜಾಲಿ ಸರ್. ಪ್ರೇಯಸಿ ಸತ್ತು ಕಾಡುತ್ತಿದ್ದಾಳೆ. ಮದುಮಗನಾದ ಪ್ರಿಯಕರನಿಗೆ ಕಣ್ಣು ಮುಚ್ಚಿದರೆ ಕೆಣಕುತ್ತಿದ್ದಾಳೆ. ಮರೆತರೂ ಮರೆಯಲು ಬಿಡದೆ ನಾ ನಿನ್ನ ಬಿಡಲಾರೆ ಎನ್ನುತ್ತಿದ್ದಾಳೆ.

ಡಾ. ಜಾಲಿ : ಓಹೋ ಇದಾ ಸಮಸ್ಯೆ. ಹೆಣ್ಣಿನ ವಶೀಕರಣ ಅಂದರೆ ಆ ಅಂತರ್ಪಿಶಾಚಿಯನ್ನು ನಾವು ವಶೀಕರಣ ಮಾಡಬೇಕು. ಪ್ರತಾಪ್ ಮನೆಯ ಲೊಕೇಶನ್ ಶೇರ್ ಮಾಡಿ ನೀವು ಮುಂದೆ ನಡೆಯಿರಿ ನಾ ಬರುವೆ.

ಹುಲಿ ಕುಮಾರ್ : ಸರ್. ಪರಿಹಾರ ನೀವು ಕೊಡಲೇ ಬೇಕು. ನಿಮಗೆ ನಾನು ಕೊಟ್ಟಿರುವ ಬಿಲ್ಡ್ ಅಪ್ ಉಳಿಸಿಕೊಳ್ಳುತ್ತೀರಾ?

ಡಾ. ಜಾಲಿ : ಪ್ರತಾಪ್ ಅವರೇ, ಇದೇನು ದೊಡ್ಡ ಸಮಸ್ಯೆ ಅಲ್ಲ. ನಾಳೆ ಹೊತ್ತಿಗೆ ನೀವು ನಿಮ್ಮ ಹೊಸ ಲವ್ ಸ್ಟೋರಿಯಲ್ಲಿ ಮುಳುಗುತ್ತೀರಿ.

ಪ್ರತಾಪ : ಅಷ್ಟು ಮಾಡಿ ನನ್ನ ಜೀವ ಉಳಿಸಿ ಡಾಕ್ಟರ್. ನಾವು ಕಾಯುತ್ತಿರುತ್ತೇವೆ.

ಡಾಕ್ಟರ್ ಜಾಲಿ ಪ್ರತಾಪ್ ಮನೆಗೆ ಕೈಯ್ಯಲ್ಲಿ ಒಂದು ಶೀಷೆ ಹಿಡಿದು ಬರುವರು. ಪ್ರತಾಪ್ ನೀನು ಮಲಗುವ ರೂಮ್ ತೋರಿಸಿ ಎಂದು ರೂಮಿನೊಳಗೆ ಹೋಗಿ

ಬಾಗಿಲು ಹಾಕಿಕೊಂಡು 20 ನಿಮಿಷದ ನಂತರ ಹೊರಗೆ ಬಂದು ಪ್ರತಾಪನ ಕೈಗೆ ಶೀಷೆ ಕೊಡುತ್ತಾ.

ಡಾ. ಜಾಲಿ : ಪ್ರತಾಪ್, ಈ ಶೀಷೆ ಭದ್ರವಾಗಿ ಒಂದು ಸೇಫ್ ಜಾಗದಲ್ಲಿ ಇಟ್ಟು ಮರೆತುಬಿಡಿ. ನಿಮ್ಮ ಸಮಸ್ಯೆ ಈ ಶೀಷೆಯಲ್ಲಿ ಬಂದಿಯಾಗಿದೆ. ಯಾವುದೆ ಕಾರಣಕ್ಕೂ ಈ ಶೀಷೆ ತೆಗೆಯಬೇಡಿ. ನನ್ನನ್ನು 5 ದಿನಗಳ ನಂತರ ಧನ್ಯವಾದ ಹೇಳಲು ಸಂಪರ್ಕಿಸಿ.

ಪ್ರತಾಪ್ ಆ ಶೀಷೆಯನ್ನು ಸ್ಟೋರ್ ರೂಮ್ ಬೀರುವಿನಲ್ಲಿಟ್ಟು ಬೀಗ ಹಾಕುತ್ತಾನೆ. ಆ ದಿನ ರಾತ್ರಿ ಬಹಳ ದಿನಗಳ ಬಳಿಕ ಸುಖ ನಿದ್ದೆ ಮಾಡುತ್ತಾನೆ. ಮಾರನೆಯ ದಿನ.

ಹುಲಿ ಕುಮಾರ್ : ನಮ್ಮ ಜಾಲಿಯ ಪವಾಡ ಎನಾದರು success ಆಯ್ತ?

ಪ್ರತಾಪ : ಹೌದು ಹುಲಿ ಹಾಗೆ ಅನಿಸ್ತಾ ಇದೆ. ಇನ್ನೊಂದೆರಡು ದಿನ ಹೀಗೆ ಆದ್ರೆ ನಾನು ಒಂದು ಯುದ್ಧ ಗೆದ್ದಂತೆ. ನಿನ್ನ ಋಣ ನನ್ನ ಮೇಲೆ.

ಹುಲಿ ಕುಮಾರ್ : ಹಾಗಾದರೆ ಸಾಕು. ಒಂದು ವಾರದ ನಂತರ ಡಾ. ಜಾಲಿ ಮನೆಗೆ ಪ್ರತಾಪ ಮತ್ತು ಹುಲಿ ಕುಮಾರ್ ಬರುತ್ತಾರೆ. ಪ್ರತಾಪನ ಮುಖದಲ್ಲಿನ ಸಂತೋಷ ನೋಡುತ್ತಲೇ ಡಾ. ಜಾಲಿ ಈಗ ಮದುಮಗನಿಗೆ ಕಳೆ ಬಂದಿದೆ ಎನ್ನುತ್ತ Congratulations ಪ್ರತಾಪ್ ನಿಮ್ಮ ವಿವಾಹ ಜೀವನ ಸುಖಕರವಾಗಲಿ.

ಹುಲಿ ಕುಮಾರ್ : thank you ಡಾಕ್ಟರ್. ನನ್ನ ನಂಬಿಕೆ ಮತ್ತು ಸ್ನೇಹಿತನ ಜೀವನ ಎರಡಕ್ಕೂ ಹೊಸ ದಿಕ್ಕು ತೋರಿದ್ದೀರಿ. ನಿಮ್ಮ ಈ ಋಣ ಮರೆಯಲಾಗದು.

ಪ್ರತಾಪ : ಹೌದು ಡಾಕ್ಟರ್, ನೀವು ನನಗೆ ಹೊಸ ಜೀವನದ ಬಾಗಿಲು ತೆರೆದಿದ್ದೀರಿ. ಕಂಗಾಲಾಗಿ, ಭಯದಿಂದ ಕಳೆಯುತ್ತಿದ್ದ ರಾತ್ರಿಗಳಿಗೆ ಕೊನೆಗಾಣಿಸಿ ನನ್ನ ಸುಖ ನಿದ್ದೆಗೆ ಜೀವ ತಂದ ದೇವರು ನೀವು. ನಿಮ್ಮ ಈ ಋಣ ಸಾಯುವ ತನಕ ಮರೆಯುವುದಿಲ್ಲ ಎಂದು ಕೈಮುಗಿದು ಒಂದು ಕವರ್ ನೀಡುವನು.

ಡಾ. ಜಾಲಿ : ಹೋಗಿ ಬನ್ನಿ ಪ್ರತಾಪ್ ನಿಮ್ಮ ಜೀವನ ಸುಖಕರವಾಗುವುದು. ಮದುವೆಗೆ ಕರೆಯುವುದನ್ನು ಮರೆಯದಿರಿ.

ಹುಲಿ ಕುಮಾರ್ : Thank you ಡಾಕ್ಟರ್. ನೀವೇ ಗ್ರೇಟ್ ಎಂದು ಮತ್ತೊಮ್ಮೆ ನನಗೆ prove ಮಾಡಿದ್ರಿ. See you Sir.

ಡಾ. ಜಾಲಿ ಮನುಷ್ಯನ ಮನಸ್ಸು ಎಷ್ಟು ಸೂಕ್ಷ್ಮ. ಒಂದು 150 ರೂಪಾಯಿ ಶೀಷೆ ಮತ್ತು ಕಥೆ ಒಬ್ಬನ ಮನೋರೋಗ ಗುಣಪಡಿಸುವಲ್ಲಿ ಮಹತ್ವದ ಪಾತ್ರವಹಿಸಿದೆ ಎಂದರೆ......

ಮನೋರೋಗಕ್ಕೆ ಮನೋಬಲವೇ ಮದ್ದು ಅಲ್ಲವೇ ! ❑

ಹರಿಪ್ರಿಯ ಎಸ್.

ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯಲ್ಲಿ ಪರಿಸರ ದಿನಾಚರಣೆ

ಲೋಧಿ ಕಾಲೋನಿಯ ಹೃದಯ ಭಾಗದಲ್ಲಿ ನಮ್ಮ ಕನ್ನಡ ಶಾಲೆ ಇದೆ. ಶಾಲೆಯ ಮೈದಾನ ಮತ್ತು ಶಾಲೆಯ ಅಂಚಿನಲ್ಲಿ ವರ್ಷವಿಡೀ ಕಂಗೊಳಿಸುವ ಹಚ್ಚ ಹಸುರಿನ ವಾತಾವರಣ ಕನ್ನಡ ಶಾಲೆಯನ್ನು ಪರಿಸರ ಸ್ನೇಹಿ ಶಾಲೆಯಾಗಿಸಿದೆ. ಶಾಲೆಯ ಇಕೊ ಕ್ಲಬ್ ಹಣ್ಣಿನ ಗಿಡ, ಹೂವಿನ ಗಿಡ ಮತ್ತು ಔಷಧಿಯ ಗಿಡಗಳನ್ನು ನೆಟ್ಟು ಉಪಚರಿಸಿ ಅವುಗಳ ಬೆಳವಣಿಗೆಯ ಮುತುವರ್ಜಿ ವಹಿಸುತ್ತಾ ಬಂದಿದೆ.

ಜೂನ್ 5ರಂದು ವಿಶ್ವದಾದ್ಯಂತ ವಿಶ್ವ ಪರಿಸರ ದಿನವನ್ನು ಆಚರಿಸಲಾಗುತ್ತದೆ. ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆ ಮತ್ತು ದೆಹಲಿ ಶಿಕ್ಷಣ ಸಂಸ್ಥೆ ಪ್ರತಿ ವರ್ಷದಂತೆ ಈ ಬಾರಿಯೂ ಕೂಡ ಅರಣ್ಯ ಇಲಾಖೆಯಿಂದ ಗಿಡಗಳನ್ನು ಪಡೆದುಕೊಂಡು ವಿಶ್ವ ಪರಿಸರ ದಿನಾಚರಣೆಯ ಸಂದರ್ಭದಲ್ಲಿ, ಶಾಲೆಯ ಉದ್ಯಾನವನದಲ್ಲಿ ಗಿಡಗಳನ್ನು ನೆಡುವುದರ ಮೂಲಕ ಪರಿಸರ ಪ್ರಜ್ಞೆಯನ್ನು ಮೆರೆಯಿತು ಅದಲ್ಲದೆ ಕರ್ನಾಟಕ ಪೋಲೀಸ್ ಇಲಾಖೆಯಿಂದ ದೆಹಲಿಯಲ್ಲಿ ಡೆಪ್ಯುಟೇಷನ್ ಕಾರ್ಯ ನಿರ್ವಹಿಸುತ್ತಿರುವ ಬೆಂಗಳೂರಿನ ಗಿರೀಶ್ ಎಸ್. ರವರು ನೀಡಿದ ತೆಂಗಿನ ಗಿಡವನ್ನು ಕೂಡ ಭೂಮಿಯಲ್ಲಿ ಗುಂಡಿ ಮಾಡಿ ನೆಡಲಾಯಿತು. ಶಾಲೆಯ ಬೇಸಿಗೆ ರಜೆ ಇದ್ದರೂ ಕೂಡ ಶಾಲೆಯ ಸುಮಾರು ಮಕ್ಕಳು, ಶಿಕ್ಷಕರು, ಸಿಬ್ಬಂದಿಗಳು ಮತ್ತು ಪೋಷಕರು ಈ ಸಂದರ್ಭದಲ್ಲಿ ಹಾಜರಾಗಿದ್ದು, ಶಾಲೆಯ ಪ್ರಾಂಶುಪಾಲರಾದ ಶ್ರೀ ಪ್ರಶಾಂತ್ ಕುಮಾರ್, ಉಪ ಪ್ರಾಂಶುಪಾಲರಾದ ಶ್ರೀಮತಿ ಪ್ರೇಮಲತಾ. ಬಿ, ಶಾಲೆಯ ಮಕ್ಕಳು ಹಾಗೂ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಪ್ರಭಾರಿ ಅಧ್ಯಕ್ಷರಾದ ಡಾ. ಅವನೀಂದ್ರನಾಥ ರಾವ್, ಪ್ರಭಾರಿ ಕಾರ್ಯದರ್ಶಿಗಳಾದ ಶ್ರೀ ಕಾಶೀನಾಥ ಬಿರಾದಾರ, ಸದಸ್ಯರಾದ ಶ್ರೀ ಹರಿಪ್ರಿಯಾ ಎಸ್. ಮತ್ತು ಡಾ. ಅಶೋಕ್ ಗೋನಾಲ್ ಸಸಿ ನೆಡುವ ಅಭಿಯಾನದಲ್ಲಿ ಪಾಲ್ಗೊಂಡು ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಈ ಸಂದರ್ಭದಲ್ಲಿ **ಏಕ್ ಪೇಡ್ ಮಾ ಕೇ ನಾಮ್** ಎಂಬ ದೆಹಲಿ ಸರ್ಕಾರದ ಯೋಜನೆಯಡಿಯಲ್ಲಿ ಪೋಷಕರು ಉಪಸ್ಥಿತರಿದ್ದರು.

ಪರಿಸರದ ಪ್ರಾಮುಖ್ಯತೆ ಮತ್ತು ಉತ್ತಮ ಪರಿಸರ ನಮ್ಮ ಆರೋಗ್ಯದ ಮೇಲೆ ಮತ್ತು ನಮ್ಮ ಸಮಗ್ರ ಅಭಿವೃದ್ಧಿಗೆ ಎಷ್ಟು ಮಹತ್ವವೆಂದು ಪ್ರತಿ ದಿನವೂ ಮಕ್ಕಳಲ್ಲಿ ಅರಿವು ಮೂಡಿಸಿದರೆ ಮುಂದಿನ ಪೀಳಿಗೆ ನೆಲ, ಜಲ ಮತ್ತು ಗಾಳಿಯ ಕಾಳಜಿ ಒಳ್ಳೆಯ ರೀತಿಯಲ್ಲಿ ವಹಿಸುವರು ಎಂದು ನೆರೆದಿದ್ದ ಹಿರಿಯರು ಅಭಿಪ್ರಾಯ ವ್ಯಕ್ತಪಡಿಸಿದರು. ❑

ಅಂತರರಾಷ್ಟ್ರೀಯ ಯೋಗ ಆಚರಣೆ

ನಿರಂತರ ಯೋಗಭ್ಯಾಸ ಮನಸ್ಸು ಮತ್ತು ದೇಹವನ್ನು ಸಧೃಢಗೊಳಿಸಿ ಮನುಷ್ಯನ ದೇಹವನ್ನು ರೋಗಮುಕ್ತಗೊಳಿಸುತ್ತದೆ. ಜೂನ್ 21 ಭಾನುವಾರ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆ ಮತ್ತು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯು ಶಾಲೆಯ ಮೈದಾನದಲ್ಲಿ ಅಂತರರಾಷ್ಟ್ರೀಯ ಯೋಗ ದಿನವನ್ನು ಹಮ್ಮಿಕೊಂಡಿತ್ತು.

ಆಯುಷ್ ಮಂತ್ರಾಲಯ ಮತ್ತು ಕೇಂದ್ರ ಸರ್ಕಾರದ ಆರೋಗ್ಯ ಇಲಾಖೆ ನಿರ್ದೇಶಕರಾದ ಡಾ. ಅಶೋಕ್ ಎಂ. ಈಟಿ ಅವರ ಸಹಕಾರದಿಂದ ಸರ್ಕಾರ ಯೋಗ ದಿನದ ಆಚರಣೆಗಾಗಿ ವಿತರಿಸಲಾಗುತ್ತಿದ್ದ ಯೋಗ ಮ್ಯಾಟ್ ಹಾಗೂ ಟೀ-ಶರ್ಟ್‌ಗಳನ್ನು ಯೋಗದಲ್ಲಿ ಪಾಲ್ಗೊಂಡ ಎಲ್ಲರಿಗೂ ವಿತರಿಸಲಾಯಿತು.

ನಿಗದಿತ ಸಮಯ ಬೆಳ್ಳಿಗ್ಗೆ 9 ಗಂಟೆಗೆ ನೆರೆದ ಎಲ್ಲರೂ ಮೈದಾನದಲ್ಲಿ ಶ್ರೀ ಆಕಾಶ್ ಯೋಗ ತರಬೇತುದಾರರ ನಿರ್ದೇಶನದಂತೆ ಸುಮಾರು ಒಂದು ಗಂಟೆಯ ಕಾಲ ಯೋಗ ವ್ಯಾಯಾಮ ಮಾಡಿದರು. ಈ ಒಂದು ಅಭಿಯಾನದಲ್ಲಿ ಸಣ್ಣ ವಯಸ್ಸಿನ ಮಕ್ಕಳಿಂದ ಎಲ್ಲಾ ವಯೋಮಿತಿಯವರು ಪಾಲ್ಗೊಂಡು ಕಾರ್ಯಕ್ರಮವನ್ನು ಶಿಸ್ತಿನಿಂದ ಯಶಸ್ವಿಗೊಳಿಸಿದರು.

ಈ ಯೋಗ ದಿನದ ಅಭಿಯಾನದಲ್ಲಿ ದೆಹಲಿ ಶಿಕ್ಷಣ ಸಂಸ್ಥೆಯ ಪ್ರಭಾರಿ ಅಧ್ಯಕ್ಷರಾದ ಡಾ. ಅವನೀಂದ್ರನಾಥ ರಾವ್, ಪ್ರಭಾರಿ ಕಾರ್ಯದರ್ಶಿಗಳಾದ ಶ್ರೀ ಕಾಶೀನಾಥ್ ಬಿರಾದಾರ, ಸದಸ್ಯರಾದ ಡಾ. ಅಶೋಕ್ ಗೋನಾಳ್, ಶ್ರೀ ಹರಿಪ್ರಿಯ ಎಸ್., ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಪ್ರಾಂಶುಪಾಲರಾದ ಶ್ರೀ ಪ್ರಶಾಂತ ಕುಮಾರ್, ಶಾಲೆಯ ಸಿಬ್ಬಂದಿ ವರ್ಗ, ಶ್ರೀಮತಿ ಸೀಮಾ ಕಾಶೀನಾಥ ಬಿರಾದಾರ, ಪೋಷಕರು, ವಿದ್ಯಾರ್ಥಿಗಳು ಮತ್ತು ದೆಹಲಿ ಶಿಕ್ಷಣ ಸಂಸ್ಥೆಯ ಆಜೀವ ಸದಸ್ಯರು ತರಬೇತುದಾರ ಶ್ರೀ ಆಕಾಶ್ ಚೌಹಾಣ್ ಅವರ ಸರಳ ತರಬೇತಿಯನ್ನು ಅನುಸರಿಸಿ ಯೋಗ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ❑

ಸಮಗ್ರ ವರದಿ : ಹರಿಪ್ರಿಯ ಎಸ್.

ದೆಹಲಿ ಕನ್ನಡಿಗ ದಿನೇಶ್ ಶೆಣೈ ನಿರ್ಮಿಸಿದ ಕಿರುಚಿತ್ರ "ರಾಕ್ಷಸ" ಕ್ಕೆ Z5 ರನ್ನರ್ ಅಪ್ ಗರಿ

ಇದೇ 2026 ಜೂನ್ 5 ರಂದು ಮಾಜಿ ತನಿಖಾ ಪತ್ರಕರ್ತ ಜಿ. ವಿಷ್ಣು ನಿರ್ದೇಶನದ ಮತ್ತು ಡಾಲಿ ಪಿಕ್ಚರ್ಸ್ ಅರ್ಪಿಸಿರುವ 'ರಕ್ಕಸ' ಕಿರುಚಿತ್ರವು, ಮುಂಬೈನ ಗ್ರ್ಯಾಂಡ್ ಹಯಾತ್‌ನಲ್ಲಿ ನಡೆದ ಝೀ ಶಾರ್ಟ್ ಫಿಲ್ಮ್ ಕಾಂಟೆಸ್ಟ್ 2026ರ (Zee Short Film Contest 2026) ಭವ್ಯ ಸಮಾರೋಪ ಸಮಾರಂಭದಲ್ಲಿ ಚಿತ್ರದ ನಿರ್ದೇಶಕರಾದ ಜಿ. ವಿಷ್ಣು ಮತ್ತು ತಂಡಕ್ಕೆ ಈ ಪ್ರಶಸ್ತಿಯನ್ನು ಅಧಿಕೃತವಾಗಿ ಪ್ರದಾನ ಮಾಡಲಾಯಿತು. ಚಿತ್ರರಂಗದ ಪ್ರಸಿದ್ಧ ನಿರ್ದೇಶಕ ಹೇಮಂತ್ ರಾವ್ ಅವರಿಂದ ಚಿತ್ರತಂಡ ಈ ಗೌರವವನ್ನು ಸ್ವೀಕರಿಸಿತು.

ಹೇಮಂತ್ ಎಂ. ರಾವ್ ಮತ್ತು ಅನುರಾಗ್ ಕಶ್ಯಪ್ ಅವರನ್ನೊಳಗೊಂಡ ತೀರ್ಪುಗಾರರ ಮಂಡಳಿಯು 12,000ಕ್ಕೂ ಹೆಚ್ಚು ಜಾಗತಿಕ ಎಂಟ್ರಿಗಳಿಂದ ಈ ಕಾಮಿಕ್ ಥ್ರಿಲರ್ ಅನ್ನು ಆಯ್ಕೆ ಮಾಡಿದೆ.

ಉಡುಪಿಯ ಕೃಷ್ಣ ಜನ್ಮಾಷ್ಟಮಿಯ ಹಿನ್ನೆಲೆಯಲ್ಲಿ ಗೆರಿಲ್ಲಾ ಫಿಲ್ಮ್ ಮೇಕಿಂಗ್ ತಂತ್ರದಡಿ ಕೇವಲ ನಾಲ್ಕು ದಿನಗಳಲ್ಲಿ ಚಿತ್ರೀಕರಣಗೊಂಡ ಈ ಕಥೆಯು, ಆರ್ಥಿಕ ಮುಗ್ಗಟ್ಟಿನಲ್ಲಿದ್ದ ಮೂವರು ಸ್ನೇಹಿತರು ರಕ್ಕಸ ವೇಷ ಧರಿಸಿ ಹಣದ ಹಿಂದೆ ಬಿದ್ದಾಗ ಎದುರಾಗುವ ಸವಾಲುಗಳನ್ನು ಚಿತ್ರಿಸುತ್ತದೆ.

ಈ ಚಿತ್ರದ ಕಥೆಯು ಕರಾವಳಿಯ ಸಾಂಸ್ಕೃತಿಕ ನಗರಿ ಉಡುಪಿಯಲ್ಲಿ ನಡೆಯುತ್ತದೆ. ಆರ್ಥಿಕವಾಗಿ ಹಿಂದುಳಿದಿರುವ, ಆದರೆ ಪರಸ್ಪರ ಗಾಢವಾದ ಸ್ನೇಹ ಹೊಂದಿರುವ ಮೂವರು ಸಾಮಾನ್ಯ ಕಾರ್ಮಿಕ ಯುವಕರೇ ಈ ಕಥೆಯ ಮುಖ್ಯ ನಾಯಕರು:

* ಪಕ್ಕು (ಪೇಂಟರ್)
* ರೀಪು (ಮುಸ್ಲಿಂ ಸಮುದಾಯದ ಮೆಕ್ಯಾನಿಕ್)
* ಸಂತು (ಆಟೋ ರಿಕ್ಷಾ ಚಾಲಕ)

ಟ್ವಿಸ್ಟ್ ಏನು?: ಬಡತನ ಮತ್ತು ಆರ್ಥಿಕ ಸಂಕಷ್ಟದಿಂದ ಬೇಸತ್ತಿರುವ ಈ ಮೂವರಿಗೂ ಉಡುಪಿ ಶ್ರೀಕೃಷ್ಣ ಜನ್ಮಾಷ್ಟಮಿ ಹಾಗೂ ವಿಟ್ಲ ಪಿಂಡಿ ಉತ್ಸವದ ಸಮಯದಲ್ಲಿ ನಡೆಯುವ ಒಂದು ರಕ್ಕಸ ವೇಷ ಸ್ಪರ್ಧೆಯ ಬಗ್ಗೆ ತಿಳಿಯುತ್ತದೆ. ಆ ಸ್ಪರ್ಧೆಯಲ್ಲಿ ಅತ್ಯಂತ ಭಯಾನಕವಾದ 'ರಕ್ಕಸ' ವೇಷ ಧರಿಸುವವರಿಗೆ 1 ಲಕ್ಷ ರೂಪಾಯಿ ನಗದು ಬಹುಮಾನ ಘೋಷಿಸಲಾಗಿರುತ್ತದೆ.



ಹಣದ ತೀವ್ರ ಅಗತ್ಯವಿರುವ ಈ ಮೂವರು ಗೆಳೆಯರು ಭಯಾನಕ ರಾಕ್ಷಸರ ಮುಖವಾಡ ಮತ್ತು ವೇಷ ಧರಿಸಿ ಹಬ್ಬದ ಬೃಹತ್ ಜನಸ್ತೋಮದ ನಡುವೆ ನುಗ್ಗುತ್ತಾರೆ. ಆದರೆ, ಕೇವಲ ನಗದು ಬಹುಮಾನಕ್ಕಾಗಿ ಅವರು ಆರಂಭಿಸಿದ ಈ ಪ್ರಯತ್ನವು ಹಬ್ಬದ ಗದ್ದಲದಲ್ಲಿ ಅನಿರೀಕ್ಷಿತ ತಿರುವು ಪಡೆಯುತ್ತದೆ. ಕರಾವಳಿ ತೀರದ ಸಾಮಾಜಿಕ, ರಾಜಕೀಯ ಮತ್ತು ಕೋಮು ಸೌಹಾರ್ದತೆಯ ಸೂಕ್ಷ್ಮ ಎಳೆಗಳು ಇವರ ಕಥೆಯೊಂದಿಗೆ ಘರ್ಷಣೆ ನಡೆಸುತ್ತವೆ. ಅಂತಿಮವಾಗಿ, ಸಮಾಜದಲ್ಲಿ ನಿಜವಾದ 'ರಾಕ್ಷಸರು' ಯಾರು ಎಂಬುದನ್ನು ಈ ಕಥೆಯು ಅತ್ಯಂತ ಮಾರ್ಮಿಕವಾಗಿ ಕನ್ನಡಿ ಹಿಡಿಯುತ್ತದೆ.

ಮೂಲ ಕಥೆ : ನಿರ್ದೇಶಕ ಜಿ. ವಿಷ್ಣು ಅವರ ಸಹೋದರ ಜಿ. ರಘುನಂದನ್ ಅವರು 2015ರಲ್ಲಿ ಬರೆದ ಸಣ್ಣ ಕಥೆಯನ್ನು ಆಧರಿಸಿ ಈ ಚಿತ್ರದ ಚಿತ್ರಕಥೆ ಸಿದ್ಧಪಡಿಸಲಾಗಿದೆ.

ನಿರ್ದೇಶನ : ಮಾಜಿ ತನಿಖಾ ಪತ್ರಕರ್ತ ಮತ್ತು ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಕಮ್ಯುನಿಕೇಷನ್‌ನ ಹಿರಿಯ ವಿದ್ಯಾರ್ಥಿ ಜಿ. ವಿಷ್ಣು.

ಛಾಯಾಗ್ರಹಣ : (Cinematography) ಪ್ರದೀಪ್ ಬಿ. ರೆಡ್ಡಿ ಅವರು ಸೋನಿ FX6 ಕ್ಯಾಮೆರಾ ಬಳಸಿ ಉಡುಪಿಯ ನೈಜ ಹಬ್ಬದ ವಾತಾವರಣವನ್ನು ಅತ್ಯಂತ ರೋಮಾಂಚಕವಾಗಿ ಸೆರೆಹಿಡಿದಿದ್ದಾರೆ.

ಧ್ವನಿ ವಿನ್ಯಾಸ (Sound Design): ಅರುಣ್ ಕುಮಾರ್ ಅವರು ಈ ಚಿತ್ರಕ್ಕೆ ಅದ್ಭುತ ಸೌಂಡ್ ಡಿಸೈನ್ ಮಾಡಿದ್ದಾರೆ.

ನಿರ್ಮಾಣ ಸಹಾಯ : ದಿನೇಶ್ ಶೆಣೈ ಕಾರ್ಯಕಾರಿ ನಿರ್ಮಾಪಕ ರಾಗಿದ್ದು, ಸ್ಯಾಂಡಲ್‌ವುಡ್‌ನ ಖ್ಯಾತ ನಟ ಡಾಲಿ ಧನಂಜಯ್ ಅವರ 'ಡಾಲಿ ಪಿಕ್ಚರ್ಸ್' ಬ್ಯಾನರ್ ಅಡಿಯಲ್ಲಿ ಈ ಕಿರುಚಿತ್ರವನ್ನು ಪ್ರಸ್ತುತಪಡಿಸಲಾಗಿದೆ

ಸ್ಥಳೀಯ ನಟರು ಹಾಗೂ ಪ್ರಬಲ ತಾಂತ್ರಿಕತೆ : ಚಿತ್ರದ ಮುಖ್ಯನಟರಾಗಿ ಕರಾವಳಿಯ ಸ್ಥಳೀಯ ರಂಗಭೂಮಿ ಪ್ರತಿಭೆಗಳಾದ ಅವಿನಾಶ್ ರೈ (ಪಕ್ಕು), ರೋಹಿತ್ ಬೈಕಾಡಿ (ರೀಪು) ಮತ್ತು ಭುವನ್ ಮಣಿಪಾಲ್ (ಸಂತು) ಅದ್ಭುತವಾಗಿ ನಟಿಸಿದ್ದಾರೆ.

ತಾಂತ್ರಿಕವಾಗಿ 'ರಕ್ಕಸ' ಅತ್ಯಂತ ಬಲಿಷ್ಠವಾಗಿದೆ. ಪ್ರದೀಪ್ ಬಿ. ರೆಡ್ಡಿ ಅವರು ಉಡುಪಿಯ ಹಬ್ಬದ ವರ್ಣರಂಜಿತ ದೃಶ್ಯಗಳನ್ನು ನೈಜವಾಗಿ ಸೆರೆಹಿಡಿದರೆ, ಅರುಣ್ ಕುಮಾರ್ ಅವರು ಚಿತ್ರಕ್ಕೆ ಅದ್ಭುತ ಧ್ವನಿ ವಿನ್ಯಾಸ (Sound Design) ಮಾಡಿದ್ದಾರೆ.

ಸಿದ್ಧಾಂತ ಮಾಥುರ್ ಅವರು ಸಂಯೋಜಿಸಿದ ಸಂಗೀತವು ಕೂಡ ಅತ್ಯಂತ ಪರಿಣಾಮಕಾರಿಯಾಗಿ ಮೂಡಿ ಬಂದಿದೆ. ಈಗಾಗಲೇ ಜಾಗತಿಕವಾಗಿ ZEE5 ಪ್ಲಾಟ್‌ಫಾರ್ಮ್‌ನಲ್ಲಿ 'ರಕ್ಕಸ' ಕಿರುಚಿತ್ರದ ಬಿಡುಗಡೆಯಾಗಿದೆ ಹೆಮ್ಮೆಯ ದಿನೇಶ್ ಶೆಣೈ ಹಾಗೂ ಇಡೀ ಚಿತ್ರ ತಂಡಕ್ಕೆ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು.❑

ಮಾನಸಿಕ ಒತ್ತಡ(ಸ್ಟ್ರೆಸ್): 21ನೇ ಶತಮಾನದ ಮೌನ ಸಾಂಕ್ರಾಮಿಕ: ಅದನ್ನು ಅರ್ಥಮಾಡಿಕೊಳ್ಳಿ, ನಿರ್ವಹಿಸಿ ಹಾಗೂ ತಡೆಯಿರಿ

ಪರಿಚಯ : ಮಾನಸಿಕ ಒತ್ತಡವು ನಾವೆಲ್ಲರೂ ಎದುರಿಸುವ ಒಂದು ವಿಷಯ-ಕೆಲಸದಲ್ಲಿ, ಮನೆಯಲ್ಲಿ, ಶಾಲೆಯಲ್ಲಿ ಮತ್ತು ದೈನಂದಿನ ಜೀವನದಲ್ಲಿ. ಈ ಬೇಡಿಕೆಗಳಿಗೆ ಹಾಗೂ ಸವಾಲುಗಳಿಗೆ ಮಾನಸಿಕ ಒತ್ತಡವು ನಮ್ಮ ದೇಹದ ಸಹಜ ಪ್ರತಿಕ್ರಿಯೆಯಾಗಿದೆ.

ಸ್ವಲ್ಪ ಪ್ರಮಾಣದಲ್ಲಿ ಮಾನಸಿಕ ಒತ್ತಡವು ಸಹಾಯಕವಾಗಬಹುದು. ಇದು ನಮ್ಮನ್ನು ಜಾಗರೂಕರನ್ನಾಗಿ, ಪ್ರೇರಿತರನ್ನಾಗಿ ಮತ್ತು ಕೇಂದ್ರೀಕೃತವಾಗಿರಿಸುತ್ತದೆ. ಆದರೆ ಅದೇ ಒತ್ತಡವು ನಿರಂತರವಾದಾಗ, ಅದು ಪ್ರೇರಕವಾಗಿ ನಿಲ್ಲುತ್ತದೆ ಮತ್ತು ನಮ್ಮ ಮನಸ್ಸು ಹಾಗೂ ದೇಹಕ್ಕೆ ಹಾನಿ ಮಾಡಲು ಪ್ರಾರಂಭಿಸುತ್ತದೆ.

ವಿಶ್ವ ಆರೋಗ್ಯ ಸಂಸ್ಥೆಯು ಮಾನಸಿಕ ಒತ್ತಡವನ್ನು "21ನೇ ಶತಮಾನದ ಆರೋಗ್ಯದ ಮೌನ ಸಾಂಕ್ರಾಮಿಕ (Silent Epidemic)" ಎಂದು ಕರೆಯುತ್ತದೆ.

ಒಳ್ಳೆಯ ಸುದ್ದಿ: ಮಾನಸಿಕ ಒತ್ತಡವನ್ನು ಅರ್ಥಮಾಡಿಕೊಳ್ಳಬಹುದು, ನಿರ್ವಹಿಸಬಹುದು ಮತ್ತು ತಡೆಯಬಹುದು.

ಮಾನಸಿಕ ಒತ್ತಡಕ್ಕೆ ಕಾರಣಗಳೇನು?

ಮಾನಸಿಕ ಒತ್ತಡವು ಒಂದು ಕಡೆಯಿಂದ ಬರುವುದಿಲ್ಲ. ಇದು ಜೀವನದ ಅನೇಕ ಕ್ಷೇತ್ರಗಳಿಂದ ನಿರ್ಮಾಣವಾಗುತ್ತದೆ. ಸಾಮಾನ್ಯ ಕಾರಣಗಳು:

1. ವೈಯಕ್ತಿಕ ಮತ್ತು ಕುಟುಂಬದ ಕಾರಣಗಳು

- ಹಣಕಾಸಿನ ಸಮಸ್ಯೆಗಳು, ಸಾಲ, ನಿರುದ್ಯೋಗ
- ಸಂಬಂಧಗಳ ಕಲಹ, ವಿಚ್ಛೇದನ, ಆರೈಕೆಯ ಜವಾಬ್ದಾರಿಗಳು
- ಪ್ರಮುಖ ಜೀವನ ಘಟನೆಗಳು: ಮದುವೆ, ಮಗುವಿನ ಜನನ, ಪ್ರೀತಿಪಾತ್ರರ ನಷ್ಟ

2. ಕೆಲಸ ಮತ್ತು ಶೈಕ್ಷಣಿಕ ಕಾರಣಗಳು

- ಹೆಚ್ಚಿನ ಕೆಲಸದ ಹೊರೆ, ದೀರ್ಘ ಗಂಟೆಗಳು, ಉದ್ಯೋಗದ ಅಭದ್ರತೆ
- ಪರೀಕ್ಷೆಗಳು, ಗಡುವುಗಳು, ಕಾರ್ಯಕ್ಷಮತೆಯ ಒತ್ತಡ
- ಕೆಲಸ-ಜೀವನದ ಸಮತೋಲನದ ಕೊರತೆ

3. ಸಾಮಾಜಿಕ ಮತ್ತು ಪರಿಸರ ಕಾರಣಗಳು

- ಸಂಚಾರ ದಟ್ಟಣೆ, ಶಬ್ದ, ಮಾಲಿನ್ಯ, ಜನದಟ್ಟಣೆ
- ಸಾಮಾಜಿಕ ಮಾಧ್ಯಮದ ಹೋಲಿಕೆ, ಸೈಬರ್ ಬುಲ್ಲಿಂಗ್
- ಆರೋಗ್ಯ ಸಮಸ್ಯೆಗಳು, ದೀರ್ಘಕಾಲದ ಕಾಯಿಲೆ

4. ಆಂತರಿಕ ಕಾರಣಗಳು

- ಪರಿಪೂರ್ಣತಾವಾದ, ವೈಫಲ್ಯದ ಭಯ
- ನಕಾರಾತ್ಮಕ ಚಿಂತನೆ, ಕಡಿಮೆ ಆತ್ಮಗೌರವ, ಕೀಳರಿಮೆ
- ನಿದ್ರೆಯ ಕೊರತೆ, ಕಳಪೆ ಆಹಾರ, ವ್ಯಾಯಾಮದ ಕೊರತೆ. ಈ ರೀತಿಯ ಒತ್ತಡಗಳು ವಾರಗಳವರೆಗೆ ಅಥವಾ ತಿಂಗಳುಗಳವರೆಗೆ ಮುಂದುವರಿದಾಗ, ದೇಹವು "ಹೋರಾಡು ಅಥವಾ ಓಡು (FIGHT OR FLIGHT)" ಮೋಡ್‌ನಲ್ಲಿ ಉಳಿಯುತ್ತದೆ-ಆಗಲೇ ಸಮಸ್ಯೆಗಳು ಪ್ರಾರಂಭವಾಗುತ್ತವೆ.



ಲೇಖಕರು : ಡಾ. ಬಿ. ನಿರಂಜನ್ ನಾಯ್ಕ್
ಎಂಬಿಬಿಎಸ್, ಎಂಎಸ್ (AIIMS)
ONCO-ಸರ್ಜರಿ (IRCH, AIIMS) FALS
ಉಪಾಧ್ಯಕ್ಷರು ಮತ್ತು ವಿಭಾಗದ ಮುಖ್ಯಸ್ಥರು
ಕ್ಯಾನ್ಸರ್ ಶಸ್ತ್ರಚಿಕಿತ್ಸೆ ಹಾಗೂ
ರೊಬೋಟಿಕ್ ಶಸ್ತ್ರಕ್ರಿಯಾ ವಿಭಾಗ, ಪಾರಸ್ ಆಸ್ಪತ್ರೆ
ಗುರುಗ್ರಾಮ, ಹರಿಯಾಣ
(ಮೊ.) 9810203273
ಇಮೇಲ್ : bniranjan29@gmail.com

ಮಾನವ ಆರೋಗ್ಯದ ಮೇಲೆ ಮಾನಸಿಕ ಒತ್ತಡದ ಪರಿಣಾಮಗಳು

ಒತ್ತಡವು ನಮ್ಮ ಮೇಲೆ 3 ರೀತಿಯಲ್ಲಿ ಪರಿಣಾಮ ಬೀರುತ್ತದೆ: ಮನಸ್ಸು, ದೇಹ ಮತ್ತು ವರ್ತನೆ.

1. ಮಾನಸಿಕ ಆರೋಗ್ಯದ ಮೇಲೆ

- ಆತಂಕ, ಕಿರಿಕಿರಿ, ಮನಸ್ಥಿತಿಯ ಬದಲಾವಣೆಗಳು
- ಖಿನ್ನತೆ, ಆಸಕ್ತಿ ಕಳೆದುಕೊಳ್ಳುವುದು, ಏಕಾಗ್ರತೆಯ ಕೊರತೆ
- ನೆನಪಿನ ಸಮಸ್ಯೆಗಳು, ನಿರ್ಧಾರ ತೆಗೆದುಕೊಳ್ಳುವಲ್ಲಿ ತೊಂದರೆ, ಅತಿಯಾಗಿ ಅನುಭವಿಸುವುದು

2. ದೈಹಿಕ ಆರೋಗ್ಯದ ಮೇಲೆ

- ಹೃದಯ : ಅಧಿಕ ರಕ್ತದೊತ್ತಡ, ವೇಗದ ಹೃದಯ ಬಡಿತ, ಹೃದಯಾಘಾತದ ಅಪಾಯ ಹೆಚ್ಚಳ
- ರೋಗನಿರೋಧಕ ಶಕ್ತಿ : ಆಗಾಗ್ಗೆ ಶೀತ, ಗಾಯವು ನಿಧಾನವಾಗಿ ವಾಸಿಯಾಗುವುದು
- ಜೀರ್ಣಕ್ರಿಯೆ : ಆಸಿಡಿಟಿ, IBS, ಹಸಿವು ಕಡಿಮೆ ಅಥವಾ ಅತಿಯಾಗಿ ತಿನ್ನುವುದು
- ನಿದ್ರೆ : ನಿದ್ರಾಹೀನತೆ, ಆಯಾಸ, ತಲೆನೋವು
- ಹಾರ್ಮೋನುಗಳು: ಸಕ್ಕರೆ ಕಾಯಿಲೆ ಅಪಾಯ, ತೂಕ ಹೆಚ್ಚಳ, ಮುಟ್ಟಿನ ಅನಿಯಮಿತತೆ
- ನೋವು : ಕುತ್ತಿಗೆ ನೋವು, ಬೆನ್ನು ನೋವು, ಹಲ್ಲು ಕಡಿಯುವುದು

3. ವರ್ತನೆಯ ಮೇಲೆ

- ಧೂಮಪಾನ, ಮದ್ಯ, ಮಾದಕ ದ್ರವ್ಯಗಳ ಬಳಕೆ
- ಸಾಮಾಜಿಕವಾಗಿ ದೂರವಾಗುವುದು, ಕೋಪದ ಸ್ಫೋಟಗಳು
- ಕಡಿಮೆ ಉತ್ಪಾದಕತೆ, ಗೈರುಹಾಜರಿ

ದೀರ್ಘಕಾಲದ ಒತ್ತಡವು ಹೃದಯ ಕಾಯಿಲೆ, ಸಕ್ಕರೆ ಕಾಯಿಲೆ, ಖಿನ್ನತೆ, ಹೆಚ್ಚಾದ ರಕ್ತದೊತ್ತಡ, ಕ್ಯಾನ್ಸರ್ ಹಾಗೂ ದುರ್ಬಲಗೊಂಡ ರೋಗ ನಿರೋಧಕ ಶಕ್ತಿಗೆ ಸಂಬಂಧಿಸಿದೆ. ಮಾನಸಿಕ ಒತ್ತಡವನ್ನು ನಿರ್ಲಕ್ಷಿಸುವುದು ಶಕ್ತಿಯ ಸಂಕೇತವಲ್ಲ-ಇದು ಅನಾರೋಗ್ಯಕ್ಕೆ ಆಹ್ವಾನ.

ಪರಿಹಾರೋಪಾಯಗಳು: ನೀವು ಮಾನಸಿಕ ಒತ್ತಡದಲ್ಲಿರುವಾಗ ಏನು ಮಾಡಬೇಕು?

ನೀವು ಈಗಾಗಲೇ ಮಾನಸಿಕ ಒತ್ತಡವನ್ನು ಅನುಭವಿಸುತ್ತಿದ್ದರೆ, ಈ ಹಂತಗಳು ತ್ವರಿತವಾಗಿ ಚೇತರಿಸಿಕೊಳ್ಳಲು ಸಹಾಯ ಮಾಡುತ್ತವೆ:

1. 3A ವಿಧಾನ

- **ಅರ್ಥಮಾಡಿಕೊಳ್ಳಿ (Acknowledge):** ಯಾವುದು ನಿಮ್ಮನ್ನು ಒತ್ತಡಕ್ಕೊಳಿಸುತ್ತಿದೆ ಎಂದು ಹೆಸರಿಸಿ. "ನಾನು ನನ್ನ ಪರೀಕ್ಷೆಯ ಬಗ್ಗೆ ಒತ್ತಡದಲ್ಲಿದ್ದೇನೆ."
- **ಒಪ್ಪಿಕೊಳ್ಳಿ (Accept):** ಇಂದು ಬದಲಾಯಿಸಲಾಗದ ಕೆಲವು ವಿಷಯಗಳಿವೆ. ನಿಮ್ಮ ನಿಯಂತ್ರಣದಲ್ಲಿಲ್ಲದನ್ನು ಬಿಟ್ಟುಬಿಡಿ.
- **ಕ್ರಿಯೆ (Act) :** ಒಂದು ಸಣ್ಣ ಹೆಜ್ಜೆ ತೆಗೆದುಕೊಳ್ಳಿ. ಮಾಡಬೇಕಾದ ಕೆಲಸಗಳ ಪಟ್ಟಿ ಮಾಡಿ, ಯಾರೊಂದಿಗಾದರೂ ಮಾತನಾಡಿ ಅಥವಾ 10 ನಿಮಿಷ ನಡೆಯಿರಿ.

2. ತ್ವರಿತ ಪರಿಹಾರ ತಂತ್ರಗಳು-5 ನಿಮಿಷಗಳು

- **ಬಾಕ್ಸ್ ಉಸಿರಾಟ :** 4 ಸೆಕೆಂಡ್ ಉಸಿರಾಡಿ→4 ಸೆಕೆಂಡ್ ಹಿಡಿದುಕೊಳ್ಳಿ→4 ಸೆಕೆಂಡ್ ಬಿಡಿ→4 ಸೆಕೆಂಡ್ ಹಿಡಿದುಕೊಳ್ಳಿ. 4 ಬಾರಿ ಪುನರಾವರ್ತಿಸಿ.
- **5-4-3-2-1 ಗ್ರೌಂಡಿಂಗ್ :** ನೀವು ನೋಡುವ 5 ವಿಷಯಗಳು, ಅನುಭವಿಸುವ 4 ವಿಷಯಗಳು, ಕೇಳುವ 3 ವಿಷಯಗಳು, ವಾಸನೆ ಮಾಡುವ 2 ವಿಷಯಗಳು, ರುಚಿ ನೋಡುವ 1 ವಿಷಯವನ್ನು ಹೆಸರಿಸಿ.
- **ಪ್ರಗತಿಶೀಲ ಸ್ನಾಯು ಸಡಿಲಿಕೆ:** ಪ್ರತಿ ಸ್ನಾಯು ಗುಂಪನ್ನು ಬಿಗಿಗೊಳಿಸಿ ಮತ್ತು ಸಡಿಲಗೊಳಿಸಿ. ಶವಾಸನ ಮಾಡುವುದು ತುಂಬಾ ಉಪಯೋಗಕಾರಿ.

3. ಮಾತನಾಡಿ : ನಂಬಲರ್ಹ ಸ್ನೇಹಿತ, ಕುಟುಂಬದ ಸದಸ್ಯ ಅಥವಾ ಸಲಹೆಗಾರರೊಂದಿಗೆ ಹಂಚಿಕೊಳ್ಳಿ. ನೀವು ಈ ಒತ್ತಡವನ್ನು ಒಬ್ಬರೇ ಹೊರಬೇಕಾಗಿಲ್ಲ.

4. ವೃತ್ತಿಪರ ಸಹಾಯ ಪಡೆಯಿರಿ : ಒತ್ತಡವು ಪ್ಯಾನಿಕ್ ಅಟ್ಯಾಕ್, ನಿರಂತರ ದುಃಖ, ಆತ್ಮಹತ್ಯೆ ಅಥವಾ ಸ್ವಯಂ ಹಾನಿಯ ಆಲೋಚನೆಗಳನ್ನು ಉಂಟುಮಾಡುತ್ತಿದ್ದರೆ, ದಯವಿಟ್ಟು ವೈದ್ಯರು, ಮನಶಾಸ್ತ್ರಜ್ಞರು ಅಥವಾ ಮನೋವೈದ್ಯರನ್ನು ಸಂಪರ್ಕಿಸಿ. ಮುಂಚಿತ ಸಹಾಯವು ಉತ್ತಮವಾಗಿ ಕೆಲಸ ಮಾಡುತ್ತದೆ.

ತಡೆಗಟ್ಟುವಿಕೆ : ಒತ್ತಡ-ನಿರೋಧಕ ಜೀವನವನ್ನು ನಿರ್ಮಿಸುವುದು

ತಡೆಗಟ್ಟುವಿಕೆಯು ಚಿಕಿತ್ಸೆಗಿಂತ ಉತ್ತಮ. ಸಣ್ಣ ದೈನಂದಿನ ಅಭ್ಯಾಸಗಳು ದೀರ್ಘಕಾಲದ ಸ್ಥಿತಿಸ್ಥಾಪಕತ್ವವನ್ನು ನಿರ್ಮಿಸುತ್ತವೆ.

1. ಜೀವನಶೈಲಿಯ ಅಭ್ಯಾಸಗಳು

- **ನಿದ್ರೆ :** 7-8 ಗಂಟೆಗಳು. ನಿಗದಿತ ನಿದ್ರೆ-ಎಚ್ಚರದ ಸಮಯ.

–**ಚಲನೆ :** ವಾರಕ್ಕೆ 5 ದಿನ 30 ನಿಮಿಷ ನಡಿಗೆ, ಯೋಗ ಅಥವಾ ಯಾವುದೇ ಚಟುವಟಿಕೆ. ವ್ಯಾಯಾಮವು "ಉತ್ತಮ–ಅನುಭವ" ಹಾರ್ಮೋನುಗಳನ್ನು ಬಿಡುಗಡೆ ಮಾಡುತ್ತದೆ.

–**ಪೌಷ್ಟಿಕಾಂಶ :** ಕಡಿಮೆ ಕೆಫೀನ್, ಸಕ್ಕರೆ ಮತ್ತು ಜಂಕ್ ಫುಡ್. ಹೆಚ್ಚು ಹಣ್ಣುಗಳು, ತರಕಾರಿಗಳು ಮತ್ತು ನೀರು.

2. ಮನಸ್ಸಿನ ಅಭ್ಯಾಸಗಳು

–**ಸಮಯ ನಿರ್ವಹಣೆ :** ಆದ್ಯತೆ ನೀಡಿ. ದೊಡ್ಡ ಕಾರ್ಯಗಳನ್ನು ಸಣ್ಣ ಹಂತಗಳಾಗಿ ವಿಭಜಿಸಿ. ಅಗತ್ಯವಿದ್ದಾಗ "ಇಲ್ಲ" ಎಂದು ಹೇಳಿ.

–**ಡಿಜಿಟಲ್ ಡಿಟಾಕ್ಸ್ :** ಮಲಗುವ ಮೊದಲು 1 ಗಂಟೆ ಫೋನ್ ಇಲ್ಲ. ಸಾಮಾಜಿಕ ಮಾಧ್ಯಮದ ಹೋಲಿಕೆಯನ್ನು ಮಿತಿಗೊಳಿಸಿ.

–**ಕೃತಜ್ಞತೆ ಮತ್ತು ಮೈಂಡ್‌ಫುಲ್‌ನೆಸ್ :** ಪ್ರತಿದಿನ 3 ಒಳ್ಳೆಯ ವಿಷಯಗಳನ್ನು ಬರೆಯಿರಿ. 10 ನಿಮಿಷ ಧ್ಯಾನವನ್ನು ಅಭ್ಯಾಸ ಮಾಡಿ.

3. ಸಾಮಾಜಿಕ ಅಭ್ಯಾಸಗಳು

–**ಸಂಪರ್ಕ :** ಕುಟುಂಬ ಮತ್ತು ಸ್ನೇಹಿತರೊಂದಿಗೆ ಸಮಯ ಕಳೆಯಿರಿ. ನಗು ಒತ್ತಡದ ಹಾರ್ಮೋನುಗಳನ್ನು ಕಡಿಮೆ ಮಾಡುತ್ತದೆ.

–**ಹವ್ಯಾಸಗಳು :** ಸಂಗೀತ, ಕಲೆ, ತೋಟಗಾರಿಕೆ, ಕ್ರೀಡೆಗಳು–ನಿಮಗೆ ಸಂತೋಷವನ್ನು ನೀಡುವ ಯಾವುದಾದರೂ.

–**ಇತರರಿಗೆ ಸಹಾಯ ಮಾಡಿ :** ಸ್ವಯಂಸೇವೆ ಉದ್ದೇಶ ಮತ್ತು ದೃಷ್ಟಿಕೋನವನ್ನು ನೀಡುತ್ತದೆ.

4. ಕೆಲಸದ ಸ್ಥಳ/ಶಾಲಾ ಅಭ್ಯಾಸಗಳು

–ಪ್ರತಿ 90 ನಿಮಿಷಗಳಿಗೊಮ್ಮೆ ಸಣ್ಣ ವಿರಾಮಗಳನ್ನು ತೆಗೆದುಕೊಳ್ಳಿ

–ವಾಸ್ತವಿಕ ಗುರಿಗಳನ್ನು ಹೊಂದಿಸಿ

–ಕೆಲಸ ಮತ್ತು ವೈಯಕ್ತಿಕ ಜೀವನವನ್ನು ಪ್ರತ್ಯೇಕವಾಗಿಡಿ

ಮುಖ್ಯ ಸಂದೇಶ : ಮಾನಸಿಕ ಒತ್ತಡವನ್ನು ನಿರ್ವಹಿಸಬಹುದಾಗಿದೆ

ಒತ್ತಡವು ಜೀವನದ ಒಂದು ಭಾಗವಾಗಿದೆ, ಆದರೆ ನೋವು ಐಚ್ಛಿಕವಾಗಿದೆ. ಒತ್ತಡವನ್ನು ಬೆಂಕಿಯಂತೆ ಯೋಚಿಸಿ: ಸಣ್ಣ ನಿಯಂತ್ರಿತ ಬೆಂಕಿಯು ಆಹಾರವನ್ನು ಬೇಯಿಸುತ್ತದೆ. ಅನಿಯಂತ್ರಿತ ಬೆಂಕಿಯು ಮನೆಯನ್ನು ಸುಡುತ್ತದೆ.

3 ಪಿ ಗಳನ್ನು ನೆನಪಿಡಿ:

1. ತಡೆಯಿರಿ–ಆರೋಗ್ಯಕರ ಅಭ್ಯಾಸಗಳೊಂದಿಗೆ
2. ನಿಲ್ಲಿಸಿ–ಅದು ಬಂದಾಗ ಸಾಧನಗಳನ್ನು ಬಳಸಿ.
3. ಸಹಾಯಕ್ಕಾಗಿ ತಲುಪಿ–ಅದು ತುಂಬಾ ದೊಡ್ಡದಾಗಿ ಅನಿಸಿದಾಗ.

ನಿಮ್ಮ ಮಾನಸಿಕ ಆರೋಗ್ಯವು ನಿಮ್ಮ ದೈಹಿಕ ಆರೋಗ್ಯದಷ್ಟೇ ಮುಖ್ಯ. ಅದನ್ನು ಪ್ರತಿದಿನ ನೋಡಿಕೊಳ್ಳಿ.

ನೀವು ಅಥವಾ ನಿಮಗೆ ತಿಳಿದಿರುವ ಯಾರಾದರೂ ಸಂಕಟದಲ್ಲಿದ್ದರೆ, ದಯವಿಟ್ಟು ತಲುಪಿ:

–ನಂಬಲರ್ಹ ವ್ಯಕ್ತಿಯೊಂದಿಗೆ ಮಾತನಾಡಿ

–ವೈದ್ಯರು ಅಥವಾ ಮಾನಸಿಕ ಆರೋಗ್ಯ ವೃತ್ತಿಪರರನ್ನು ಸಂಪರ್ಕಿಸಿ

– ಭಾರತದ ರಾಷ್ಟ್ರೀಯ **ಸಹಾಯವಾಣಿ** :– ಟೆಲಿ–ಮಾನಸ **1800–89–14416/ 14416** ❑

ಚಿಣ್ಣರ ಲೋಕ

ಸಂಘರ್ಷವೇ ಬದುಕಿನ ಸತ್ವ

ಒಂದಾನೊಂದು ಕಾಲದಲ್ಲಿ ಒಬ್ಬ ರೈತನಿದ್ದ. ಆತನಿಗೆ ಭಗವಂತನ ಮೇಲೆ ಭಾರಿ ಸಿಟ್ಟಿತ್ತು! ಅದಕ್ಕೆ ಕಾರಣವೂ ಇತ್ತು; ಒಮ್ಮೆ ಭೀಕರ ಪ್ರವಾಹ ಬಂದರೆ, ಮತ್ತೊಮ್ಮೆ ಭೀಕರ ಬರಗಾಲ ಆವರಿಸುತ್ತಿತ್ತು. ಒಮ್ಮೆ ಬಿಸಿಲಿನ ಬೇಗೆ ಹೆಚ್ಚಾದರೆ, ಇನ್ನೊಮ್ಮೆ ಆಲಿಕಲ್ಲು ಮಳೆ ಸುರಿಯುತ್ತಿತ್ತು. ಪ್ರತಿ ಬಾರಿಯೂ ಯಾವುದಾದರೊಂದು ಕಾರಣದಿಂದ ಆತನ ಬೆಳೆ ಹಾಳಾಗುತ್ತಲೇ ಇತ್ತು.

ಒಂದು ದಿನ ಪರಿಸ್ಥಿತಿಯಿಂದ ಬೇಸತ್ತ ಆ ರೈತ ಬೇಸರದಿಂದ ಭಗವಂತನಿಗೆ ಹೀಗೆಂದ–"ನೋಡು ಪ್ರಭು, ನೀನು ಇಡೀ ಜಗತ್ತನ್ನೇ ಆಳುವ ಪರಮಾತ್ಮ ಇರಬಹುದು, ಆದರೆ ನಿನಗೆ ಈ ಬೇಸಾಯದ ಬಗ್ಗೆ ಅಷ್ಟಾಗಿ ಮಾಹಿತಿ ಇದ್ದಂತೆ ಕಾಣುತ್ತಿಲ್ಲ. ನನ್ನದೊಂದು ಸಣ್ಣ ಪ್ರಾರ್ಥನೆ ಇದೆ; ದಯವಿಟ್ಟು ಈ ಒಂದು ವರ್ಷ ಮಾತ್ರ ಹವಾಮಾನವನ್ನು ನನ್ನ ನಿಯಂತ್ರಣಕ್ಕೆ ಕೊಡು. ನಾನು ಬಯಸಿದಾಗಲೇ ಮಳೆ, ಬಿಸಿಲು ಬರಲಿ. ಆಮೇಲೆ ನೋಡು, ನಾನು ಈ ದೇಶದ ಅನ್ನದ ಕಣಜವನ್ನೇ ಹೇಗೆ ಧಾನ್ಯಗಳಿಂದ ತುಂಬಿಸುತ್ತೇನೆ!" ರೈತನ ಮಾತನ್ನು ಕೇಳಿ ಪರಮಾತ್ಮ ಮುಗುಳ್ನಕ್ಕು, "ಸರಿ ಮಗನೇ, ನೀನು ಹೇಳಿದಂತೆಯೇ ಈ ವರ್ಷ ಹವಾಮಾನ ಇರಲಿದೆ, ನಾನು ಯಾವುದೇ ಹಸ್ತಕ್ಷೇಪ ಮಾಡುವುದಿಲ್ಲ" ಎಂದನು.

ಖುಷಿಯಾದ ರೈತ ಗದ್ದೆಯಲ್ಲಿ ಗೋಧಿ ಬೆಳೆಯನ್ನು ಬಿತ್ತಿದ. ಆತ ಯಾವಾಗ ಬಿಸಿಲು ಬೇಕೆಂದನೋ ಆಗ ಬಿಸಿಲು ಬಂದಿತು, ಯಾವಾಗ ನೀರು ಬೇಕೆಂದನೋ ಆಗ ಮಳೆ ಸುರಿಯಿತು. ಬಿರುಗಾಳಿ, ಆಲಿಕಲ್ಲು ಮಳೆ, ಪ್ರವಾಹ ಅಥವಾ ಅತಿಯಾದ ಬಿಸಿಲು–ಯಾವುದೂ ಆತನ ಬೆಳೆಯ ಹತ್ತಿರವೂ ಸುಳಿಯದಂತೆ ಆತ ನೋಡಿಕೊಂಡನು. ಸಮಯ ಕಳೆದಂತೆ ಬೆಳೆ ಕೈಗೆ ಬಂದಿತು. ಇಂತಹ ಹಚ್ಚಹಸಿರಿನ ಸಮೃದ್ಧ ಬೆಳೆಯನ್ನು ಆತ ತನ್ನ ಜೀವಿತಾವಧಿಯಲ್ಲೇ ಎಂದೂ ಕಂಡಿರಲಿಲ್ಲ! ಆತನ ಸಂತೋಷಕ್ಕೆ ಪಾರವೇ ಇರಲಿಲ್ಲ. ರೈತ ಮನದಲ್ಲೇ ಅಂದುಕೊಂಡ "ಈಗ ಗೊತ್ತಾಗುತ್ತದೆ ಪರಮಾತ್ಮನಿಗೆ ಬೆಳೆ ಹೇಗೆ ತೆಗೆಯಬೇಕು ಎಂದು! ಸುಮ್ಮನೆ ಇಷ್ಟು ವರ್ಷಗಳ ಕಾಲ ನಮ್ಮಂತಹ ರೈತರನ್ನು ಕಾಡಿ ಪೀಡಿಸುತ್ತಿದ್ದನಲ್ಲ."

ಕೊನೆಗೆ ಬೆಳೆ ಕಟಾವು ಮಾಡುವ ಸಮಯವೂ ಬಂದಿತು. ಅತ್ಯಂತ ಹೆಮ್ಮೆಯಿಂದ ರೈತ ಗದ್ದೆಗೆ ಹೋಗಿ ತೆನೆಗಳನ್ನು ಕೊಯ್ಯಲು ಮುಂದಾದ. ಆದರೆ, ಮೊದಲ ತೆನೆಯನ್ನು ಕೈಗೆತ್ತಿಕೊಂಡ ತಕ್ಷಣವೇ ಆತ ದಿಕ್ಕೆಟ್ಟು ಎದೆಗೆ ಕೈಯಿಟ್ಟುಕೊಂಡು ನೆಲದ ಮೇಲೆ ಕುಳಿತುಬಿಟ್ಟನು! ಏಕೆಂದರೆ, ಗೋಧಿಯ ಆ ಯಾವುದೇ ಒಂದು ತೆನೆಯ ಒಳಗೂ ಒಂದೇ ಒಂದು ಕಾಳು ಇರಲಿಲ್ಲ! ಎಲ್ಲ ತೆನೆಗಳೂ ಒಳಗಿನಿಂದ ಸಂಪೂರ್ಣವಾಗಿ ಬರಿದಾಗಿದ್ದವು, ಟೊಳ್ಳಾಗಿದ್ದವು.

ಭಾರಿ ದುಃಖದಿಂದ ಆತ ದೇವರೆಡೆಗೆ ಮುಖ ಮಾಡಿ ಕಣ್ಣೀರು ಹಾಕುತ್ತಾ ಕೇಳಿದ–"ಪ್ರಭು, ಇದೇನಿದು ಇಂತಹ ಅನಾಹುತ? ಹೀಗೇಕೆ ಆಯಿತು?"

ಆಗ ಪರಮಾತ್ಮ ಪ್ರತ್ಯಕ್ಷನಾಗಿ ಶಾಂತವಾಗಿ ನುಡಿದನು **"ಮಗನೇ, ಇದು ಹೀಗೇ ಆಗಬೇಕಿತ್ತು. ನೀನು ಆ ಸಸ್ಯಗಳಿಗೆ ಬದುಕಿನ ಸಂಘರ್ಷವನ್ನು ಎದುರಿಸುವ ಒಂದು ಸಣ್ಣ ಅವಕಾಶವನ್ನೂ ಕೊಡಲಿಲ್ಲ. ಕಠಿಣವಾದ ಬಿಸಿಲಿನಲ್ಲಿ ಅವು ಬೇಯಲು ನೀನು ಬಿಡಲಿಲ್ಲ, ಬಿರುಗಾಳಿ ಮತ್ತು ಆಲಿಕಲ್ಲು ಮಳೆಗಳೊಂದಿಗೆ ಸೆಣಸಾಡುವ ಸವಾಲನ್ನು ಅವುಗಳಿಗೆ ನೀಡಲೇ ಇಲ್ಲ. ಅವುಗಳ ಇಡೀ ಬೆಳವಣಿಗೆಯಲ್ಲಿ ಯಾವುದೇ ಕಷ್ಟದ ಅರಿವೇ ಆಗದಂತೆ ನೀನು ಅತಿಯಾದ ಮುದ್ದು ಮಾಡಿದೆ. ಆ ಕಾರಣಕ್ಕಾಗಿಯೇ ಎಲ್ಲ ಗಿಡಗಳೂ ಒಳಗಿನಿಂದ ಟೊಳ್ಳಾಗಿ ಉಳಿದುಹೋದವು."**

ಪರಮಾತ್ಮ ಮುಂದುವರಿಸುತ್ತಾ ಹೇಳಿದ–"ಯಾವಾಗ ಭೀಕರ ಬಿರುಗಾಳಿ ಬೀಸುತ್ತದೆಯೋ, ಜಡಿಮಳೆ ಸುರಿಯುತ್ತದೆಯೋ, ಆಲಿಕಲ್ಲುಗಳು ಬೀಳುತ್ತವೆಯೋ, ಆ ಕಷ್ಟದ ಸಮಯದಲ್ಲಿ ಸಸ್ಯವು ತನ್ನ ಇಡೀ ಶಕ್ತಿಯನ್ನು ಧಾರೆ ಎರೆದು ನೆಟ್ಟಗೆ ನಿಲ್ಲಲು ಪ್ರಯತ್ನಿಸುತ್ತದೆ. ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೋರಾಡುತ್ತದೆ. ಆ ಸಂಘರ್ಷದಿಂದ ಅದರೊಳಗೆ ಒಂದು ವಿಶಿಷ್ಟವಾದ ಆಂತರಿಕ ಶಕ್ತಿ ಮತ್ತು ಜೀವಂತಿಕೆ ಜನ್ಮತಾಳುತ್ತದೆ. ಚಿನ್ನವು ಕೂಡ ಅಪರಂಜಿ (ಕುಂದನ್) ಆಗಬೇಕಾದರೆ ಮೊದಲು ಧಗಧಗಿಸುವ ಕೆಂಡದ ಆ ಬೆಂಕಿಯಲ್ಲಿ ಬೇಯಬೇಕು, ಸುತ್ತಿಗೆಯ ಏಟುಗಳನ್ನು ತಿನ್ನಬೇಕು ಮತ್ತು ಕರಗುವಂತಹ ಕಠಿಣ ಸವಾಲುಗಳನ್ನು ದಾಟಬೇಕಾಗುತ್ತದೆ. ಆಗಲೇ ಅದರ ನೈಜ ಹೊಳಪು ಹೊರಹೊಮ್ಮಿ, ಅದು ಅಮೂಲ್ಯವಾಗುತ್ತದೆ!"

ಕಥೆಯ ದಿವ್ಯ ಸಂದೇಶ : ಇದೇ ರೀತಿ ಮನುಷ್ಯನ ಬದುಕಿನಲ್ಲೂ ಅಷ್ಟೇ; ಜೀವನದಲ್ಲಿ ಯಾವುದೇ ಸಂಘರ್ಷ ಮತ್ತು ಸವಾಲುಗಳು ಇಲ್ಲದಿದ್ದರೆ, ಮನುಷ್ಯ ಒಳಗಿನಿಂದ ಕೇವಲ ಟೊಳ್ಳಾಗಿ ಉಳಿದುಬಿಡುತ್ತಾನೆ. ಆತನಲ್ಲಿ ಯಾವುದೇ ಸದ್ಗುಣಗಳು ಮೂಡುವುದೇ ಇಲ್ಲ. ಈ ಸವಾಲುಗಳೇ ಮನುಷ್ಯನೆಂಬ ಕತ್ತಿಗೆ ಮಸೆವ ಕಲ್ಲಾಗಿ, ಆತನನ್ನು ಪ್ರಖರ ಹಾಗೂ ಶಕ್ತಿಶಾಲಿಯನ್ನಾಗಿ ರೂಪಿಸುತ್ತವೆ. ನಾವು ಜೀವನದಲ್ಲಿ ನಿಜವಾದ ಪ್ರತಿಭಾವಂತರಾಗಿ, ಯಶಸ್ವಿಯಾಗಬೇಕಾದರೆ ಸಂಘರ್ಷದ ಸವಾಲುಗಳನ್ನು ಮುಖಾಮುಖಿ ಎದುರಿಸಲೇಬೇಕು. ಇಲ್ಲದಿದ್ದರೆ ಆ ಗೋಧಿಯ ತೆನೆಯಂತೆ ಕೇವಲ ಹೊರಗಿನ ರೂಪವಷ್ಟೇ ಸುಂದರವಾಗಿರುತ್ತದೆ, ಒಳಗಿನ ವ್ಯಕ್ತಿತ್ವ ಸಂಪೂರ್ಣ ಶೂನ್ಯವಾಗಿರುತ್ತದೆ. ಬದುಕಿನಲ್ಲಿ ಪ್ರಖರತೆ ಸಾಧಿಸಲು ಸಂಘರ್ಷವೇ ನಿಜವಾದ ಇಂಧನ. ❑

ಓದುಗರಿಗೆ ಆಹ್ವಾನ

"ಸ್ವಾತಂತ್ರ್ಯ ಎಂದರೆ ನಿಮಗೆ ಏನು?"

ಸ್ವಾತಂತ್ರ್ಯವು ಕೇವಲ ಇತಿಹಾಸದ ನೆನಪು ಅಲ್ಲ; ಅದು ಪ್ರತಿದಿನವೂ ನಮ್ಮ ಬದುಕಿನಲ್ಲಿ ಅರ್ಥ ಪಡೆದುಕೊಳ್ಳುವ ಮೌಲ್ಯ. ಸ್ವಾತಂತ್ರ್ಯದ ಸಾರ್ಥಕತೆ, ಸಂವಿಧಾನದ ಆಶಯಗಳು, ಪ್ರಜಾಪ್ರಭುತ್ವದ ಬಲ, ಸಮಾನತೆ, ನ್ಯಾಯ, ವೈಯಕ್ತಿಕ ಅನುಭವಗಳು ಅಥವಾ ನಿಮ್ಮ ಕನಸಿನ ಭಾರತದ ಕುರಿತು ನಿಮ್ಮ ಚಿಂತನೆಗಳನ್ನು ನಮ್ಮೊಂದಿಗೆ ಹಂಚಿಕೊಳ್ಳಿ.

ಸ್ವಾತಂತ್ರ್ಯ ದಿನಾಚರಣೆಯ ವಿಶೇಷ ಸಂಚಿಕೆಯ ಅಂಗವಾಗಿ ಓದುಗರಿಂದ 150–300 ಪದಗಳ ಅನಿಸಿಕೆ, ಅಭಿಪ್ರಾಯ ಅಥವಾ ಸಣ್ಣ ಲೇಖನಗಳನ್ನು ಆಹ್ವಾನಿಸುತ್ತಿದ್ದೇವೆ.

ಆಯ್ಕೆಯಾದ ಬರಹಗಳನ್ನು ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ನಿಮ್ಮ ಹೆಸರು, ಊರು ಹಾಗೂ ಸಂಪರ್ಕ ಸಂಖ್ಯೆಯೊಂದಿಗೆ ನಿಗದಿತ ದಿನಾಂಕದೊಳಗೆ ನಿಮ್ಮ ಬರಹವನ್ನು ಕಳುಹಿಸಿ.

ನಿಮ್ಮ ಚಿಂತನೆಗಳು ಓದುಗರಲ್ಲಿ ಹೊಸ ಸಂವಾದಕ್ಕೆ ನಾಂದಿ ಹಾಡಲಿ. ನಿಮ್ಮ ಲೇಖನಗಳನ್ನು ಆತ್ಮೀಯವಾಗಿ ನಿರೀಕ್ಷಿಸುತ್ತಿದ್ದೇವೆ.

“ಹಕ್ಕಿಗಳ ಕೈಕುಲುಕಿದವನು”

“ಅಲ್ಲೊಂದು ಹಕ್ಕಿ ನೋಡಿದಿರಾ?”, ಎಂದರವರು.

ನಾನು ತಿರುಗಿ ನೋಡಿದೆ. ನನಗಿಂತ ಒಂದಡಿ ದೂರದಲ್ಲಿ ಪುಟ್ಟ ಹಕ್ಕಿಯೊಂದು ತನ್ನ ಪಾಡಿಗೆ ಅತ್ತಿತ್ತ ನೋಡುತ್ತಿತ್ತು. ಹೆಚ್ಚೆಂದರೆ ಅರ್ಧ ಬೊಗಸೆ ಗಾತ್ರದ ಪುಟ್ಟ ದೇಹ, ಕಡುಗಪ್ಪು ಬಣ್ಣ, ನಡುವಿನಲ್ಲೊಂದಿಷ್ಟು ಗೋಡೆಗೆ ಮೆತ್ತಿದ ಪಾಚಿಯಂತೆ ಮಿಂದ ಹಸಿರು. ಥಟ್ಟನೆ ನೋಡಿದರೆ ಹಮ್ಮಿಂಗ್ ಬರ್ಡ್ ನೆನಪಾಗಬೇಕು. ಅಷ್ಟರಮಟ್ಟಿನ ಹೊಳಪು ಮತ್ತು ಸೌಂದರ್ಯ. ಹಕ್ಕಿ ಈಗ ನನ್ನನ್ನು ನೋಡುತ್ತಿತ್ತು. ನಾನು ಅದರತ್ತ ನೋಡಿದೆ. ಒಂದೇ ಒಂದು ಹೆಜ್ಜೆ ಮುಂದಿಟ್ಟರೆ ಇಬ್ಬರೂ ತಮ್ಮ ದಾರಿ ಹಿಡಿಯುವುದು ಖಚಿತವಾದ್ದರಿಂದ ನಾವಿಬ್ಬರೂ ಒಂದಿಂಚೂ ಕದಲಲಿಲ್ಲ. ಹೀಗೆ ಇಬ್ಬರೂ ಪರಸ್ಪರರನ್ನು ಒಂದಿಷ್ಟು ನೋಡಿ ಕಣ್ತುಂಬಿಕೊಂಡೆವು.

ಇದ್ಯಾವ ಹಕ್ಕಿಯಪ್ಪಾ ಎಂದು ಅವರಲ್ಲಿ ಕೇಳಿದರೆ ಇಲ್ಲಿ ಹೀಗೆ ತರಹೇವಾರಿ ಹಕ್ಕಿಗಳು ಬಂದುಹೋಗುತ್ತಿರುತ್ತವೆ ಎಂದ ಆತ. ಅಂದಹಾಗೆ ಆತನ ಹೆಸರು ಗುರುಪಾಲ್. ಆದರೆ ಎಲ್ಲರೂ ಅವನನ್ನು ತಮ್ಮದೇ ಶೈಲಿಯಲ್ಲಿ ಕರೆಯುತ್ತಾ ಅದು ಗುರ್ಪಾಲ್ ಆಗಿಬಿಟ್ಟಿದೆ. ನಮ್ಮ ಆಫೀಸಿನ ಬುಡದಲ್ಲಿ ಒಂಚೂರು ಜಾಗವನ್ನು ಆವರಿಸಿಕೊಂಡು ಗುರ್ಪಾಲ್ ಅಲ್ಲಿ ಟೀ ಅಂಗಡಿ ಇಟ್ಟಿದ್ದಾನೆ. ಬೆಂಕಿಪೊಟ್ಟಣದಂತೆ ಕಾಣುವ ಆ ಪುಟ್ಟ ಟಿನ್ ಹೌಸಿನಲ್ಲಿ ಕೆಲ ಬಗೆಯ ಬಿಸ್ಕತ್ತುಗಳು, ಮಠ್ಠೀ, ಚಿಕ್ಕಪುಟ್ಟ ಪ್ಯಾಕೇಜ್ ತಿನಿಸುಗಳು, ಸಿಗರೇಟುಗಳು... ಹೀಗೆ ಏನೇನೋ ಇವೆ. ಸಾಮಾನ್ಯವಾಗಿ ಉತ್ತರಭಾರತದಲ್ಲಿ ಚಹಾ ಸಿಗುವ ಈ ಬಗೆಯ ಗೂಡಂಗಡಿಗಳನ್ನು ಠಪ್ರೀ ಎನ್ನುತ್ತಾರೆ. ನಮ್ಮ ಗುರ್ಪಾಲ್ ಇಂಥದ್ದೊಂದು ಠಪ್ರೀಯ ಮಾಲೀಕ.

ನೀವು ಈ ಏರಿಯಾದಲ್ಲಿ ಚಂದದ ಹಕ್ಕಿಯೊಂದನ್ನು ಕೊನೆಯ ಬಾರಿ ನೋಡಿದ್ದು ಯಾವಾಗ ಎಂದು ಕೇಳಿದ ಗುರ್ಪಾಲ್. ಉತ್ತರವು ತಕ್ಷಣಕ್ಕೆ ಹೊಳೆಯದ ಕಾರಣ ನಾವು ತಲೆ ಕೆರೆದುಕೊಂಡೆವು. ದಿನದ ಹದಿನೈದು ತಾಸು ಕಂಪ್ಯೂಟರ್-ಸ್ಮಾರ್ಟ್‌ಫೋನ್ ಸ್ಕ್ರೀನುಗಳಲ್ಲಿ ಬಂಧಿಯಾಗಿರುವ ನಮ್ಮಂಥವರಿಗೆ ಹೊರಗಡೆ ಅಡ್ಡಾಡುವುದಾಗಲೀ, ಠಪ್ರೀಗಳಲ್ಲಿ ಚಹಾ ಸವಿಯುವುದಾಗಲೀ, ಹಕ್ಕಿಗಳನ್ನು ನೋಡುವುದಾಗಲೀ ಕಷ್ಟಸಾಧ್ಯದ ಮಾತು. ಕೊನೆಯ ಬಾರಿ ಹೀಗೆ ಬಿಡುವು ಮಾಡಿಕೊಂಡು ಠಪ್ರಿಯೊಂದರಲ್ಲಿ ಚಹಾ ಕುಡಿದಿದ್ದೇ ನನಗೆ ನೆನಪಿಲ್ಲ. ಹೀಗಿರುವಾಗ ಹಕ್ಕಿಯ ಬಗ್ಗೆ ನಾನೇನು ಹೇಳಬಲ್ಲೆ! ನೀನೇ ಹೇಳಪ್ಪ ಅಂದುಬಿಟ್ಟೆ ನಾನು.

ಅಂದಹಾಗೆ ಈ ಗುರ್ಪಾಲ್ ತನ್ನ ಸುತ್ತಮುತ್ತ ಒಂದು ಪುಟ್ಟ ಜೀವಸಂಕುಲವನ್ನೇ ಪೋಷಿಸುತ್ತಿದ್ದಾನೆ ಎಂಬುದು ನನಗೆ ನಂತರ ತಿಳಿದುಬಂತು. ಆತ ತಾನಿರುವ ಪುಟ್ಟ ಜಾಗದಲ್ಲೇ ತಟ್ಟೆಯೊಂದರಲ್ಲಿ ನೀರಿಟ್ಟಿದ್ದಾನೆ. ದಿನದ ನಿರ್ದಿಷ್ಟ ಸಮಯದಲ್ಲಿ ಕಾಳುಗಳನ್ನೂ ಚೆಲ್ಲುತ್ತಾನಂತೆ. ಹೀಗಾಗಿ ನಾವಿರುವ ಕಾಂಕ್ರೀಟ್ ಕಾಡಿನಲ್ಲಿ ಸಾಮಾನ್ಯವಾಗಿ ಎಲ್ಲೂ ಕಾಣಸಿಗದ ಹಕ್ಕಿಗಳು ಇವನ ಬಳಿ ಬರುತ್ತವೆ. ಈತನ ಟೀ ಸಿದ್ಧತೆಗಾಗಿ ಬರುವ ಹಾಲಿನಲ್ಲಿ ಅಲ್ಲಿರುವ ಕೆಲ ಬೆಕ್ಕುಗಳಿಗೂ ಪಾಲಿದೆ. ಹೀಗಾಗಿ ಕೆಲವು ಬೆಕ್ಕುಗಳು ಠೊಣಪರಾಗಿಬಿಟ್ಟಿವೆ. “ಏನಪ್ಪಾ... ಈ ಬೆಕ್ಕುಗಳನ್ನು ಪೈಲ್ವಾನರಾಗಿ ಮಾಡಿಬಿಟ್ಟೆ?”, ಎಂದರೆ “ಪಾಪದವು ಸೊರಗಿಹೋಗಿವೆ ಸಾಬ್. ಮುಂಚೆ ನೋಡಬೇಕಿತ್ತು ನೀವು”, ಅಂತೆಲ್ಲ ರಾಗವೆಳೆಯುತ್ತಾನೆ ಗುರ್ಪಾಲ್.

ಗುರ್ಪಾಲ್ ಕೊಡುವ ತಿಂಡಿಗಳಿಗಾಗಿ ಸುತ್ತಮುತ್ತಲಿರುವ ಬೀದಿನಾಯಿಗಳು ಒಂದು ಕಣ್ಣಿಟ್ಟಿರುತ್ತವೆ. ಬಹುಷಃ ಈತ ದನಗಳಿಗೋಸ್ಕರವೂ ಏನೋ ಒಂದು ವ್ಯವಸ್ಥೆ ಮಾಡಿಕೊಂಡಿದ್ದಾನೆ. ಹೀಗಾಗಿ ನಮ್ಮ ಕಾರ್ಪೋರೆಟ್ ಓಣಿಯಲ್ಲೀಗ ದನಗಳೂ ಕಾಣತೊಡಗಿವೆ. ಹೀಗೆ ಮೈಕೊರೆಯುವ ಚಳಿಯಲ್ಲಿ ಚಾಯ್-ಸಿಗರೇಟು ಕಾಂಬೋ ಸವಿಯಲು ಬರುವ ಬಹುರಾಷ್ಟ್ರೀಯ ಕಂಪೆನಿಗಳ ಉದ್ಯೋಗಿಗಳು, ಸರಕಾರಿ ಅಧಿಕಾರಿಗಳು, ದಾರಿಹೋಕರು, ನಾಯಿ-ಬೆಕ್ಕುಗಳು, ದನಗಳು, ಹಕ್ಕಿಗಳು... ಹೀಗೆ ಗುರ್ಪಾಲನ ಟೀ ಅಂಗಡಿಯೆಂದರೆ ಒಂದು ಸಂಪೂರ್ಣ ಇಕೋ-ಸಿಸ್ಟಮ್ ಎಂಬಂತಾಗಿದೆ.

ಇವಿಷ್ಟೂ ಸಂಗತಿಗಳ ಮಧ್ಯೆ ಗುರ್ಪಾಲನಿಗೆ ವಿಶೇಷ ಆಸಕ್ತಿಯಿರುವುದು ಹಕ್ಕಿಗಳ ಬಗ್ಗೆ. ಮೊದಲೇ ಹೇಳಿದಂತೆ ಅವನು ಮಾರ್ಜಾಲಪ್ರಿಯನೂ ಹೌದು. “ಬರೀ ಆಫೀಸುಗಳಿಂದ ತುಂಬಿ ಬೋಳುಬೋಳಾಗಿತ್ತು ಈ ಏರಿಯಾ. ಈಗ ನೋಡಿ, ಕನಿಷ್ಠ ನಾಲ್ಕೈದು ಬಗೆಯ ಹಕ್ಕಿಗಳಾದರೂ ಬರುತ್ತಿವೆ. ಚೀಂವ್ ಚೀಂವ್ ಎನ್ನುತ್ತಾ ತಮ್ಮ ಪಾಡಿಗೆ ಹಾಡಿಕೊಂಡಿರುತ್ತವೆ. ನನಗೂ ಒಂದೊಳ್ಳೆಯ ಜೊತೆ”, ಎನ್ನುತ್ತಾನೆ ಗುರ್ಪಾಲ್. ಈತನಿಂದಾಗಿ ಕೆಲವು ಹಕ್ಕಿಗಳು ಅಲ್ಲೇ ಆಸುಪಾಸಿನಲ್ಲಿ ಬೀಡುಬಿಟ್ಟಿರಲೂಬಹುದು. ಇವುಗಳನ್ನೆಲ್ಲಾ ನೋಡಿದರೆ ಈತ ಈ ಹಕ್ಕಿಗಳ ಭಾಷೆಯನ್ನು ಅರ್ಥ ಮಾಡಿಕೊಂಡಿರಬಹುದೇ ಎಂದು ನಾನು ಕಣ್ಣರಳಿಸುತ್ತೇನೆ. ಅಲ್ಲಿಗೆ ಒಂದು ಸುತ್ತಿನ ಟೀ ಮುಗಿದು ಮತ್ತೊಂದು ಪಾತ್ರೆಯಲ್ಲಿ ಹಾಲು ಕುದಿಯತೊಡಗುತ್ತದೆ.

ಗುರ್ಪಾಲ್ ತನ್ನೂರಾದ ಬಿಹಾರದಲ್ಲೂ ಇಂಥದ್ದೊಂದು ವಿಶೇಷ ವ್ಯವಸ್ಥೆಯೊಂದನ್ನು ಹಕ್ಕಿಗಳಿಗಾಗಿ ಮಾಡಿಟ್ಟಿದ್ದಾನಂತೆ. ಅವನಿರುವ ಪುಟ್ಟ ಮನೆಯ ಕಟ್ಟಡದಲ್ಲಿ ಹಲವು ಪಾರಿವಾಳ ಗೂಡುಗಳಿವೆಯಂತೆ. ಇನ್ನು ಕಿಟಕಿಯ ಜೊತೆಗಿರುವ ಛಜ್ಜಾಗಳನ್ನು ಕೊಂಚ ವಿಸ್ತರಿಸಿ ಅವುಗಳಿಗೆ ಅನುಕೂಲವಾಗುವಂತೆ ಹೆಚ್ಚಿನ ಸ್ಥಳಾವಕಾಶವನ್ನು ಬೇರೆ ಮಾಡಿಕೊಟ್ಟಿದ್ದೇನೆ ಅನ್ನುತ್ತಾನೆ. ಈ ಬಗ್ಗೆ ತನ್ನ ಪರಿಚಿತರು, ಗೆಳೆಯರು ಮತ್ತು ಸಂಬಂಧಿಕರಿಗೆ ಹೇಳಿ ಅವರಲ್ಲಿ ಕೂಡ ಇಂಥದ್ದೊಂದು ಅಭ್ಯಾಸವನ್ನು ಹುಟ್ಟಿಸಿದ್ದಾನಂತೆ ಈತ.

ಜೀವ ಹೋಗುತ್ತಿದ್ದರೂ ನೆರಳಿನಲ್ಲಿ ಸಾಯೋಣವೆಂದರೆ ಒಂದೇ ಒಂದು ಗಿಡ ಇಲ್ಲಿ ಸಿಗುವುದಿಲ್ಲ ಎಂದು ನಾವೆಲ್ಲ ಹಿಂದೆ ಮಾತಾಡಿಕೊಳ್ಳುವುದಿತ್ತು. ನಗರವು ಬೇಸಿಗೆಯಲ್ಲಿ ಕಾದ ಕಾವಲಿಯಂತಾಗುವಾಗ ಮರಗಳು ಮತ್ತಷ್ಟು ನೆನಪಾಗುತ್ತವೆ. ಹಸಿರಿನ ಸುತ್ತ ಅರಳಿಕೊಳ್ಳುವ ಒಂದು ಚಂದದ ಜೀವವ್ಯವಸ್ಥೆಯ ನೆನಪಾಗುತ್ತದೆ. ಅಂದಹಾಗೆ ನಾವೆಲ್ಲ ಹೀಗೆ ಕಾಡುಹರಟೆ ಮಾಡಿಕೊಂಡು, ಬೊಗಳೆ ಭಾಷಣ ಬಿಗಿದುಕೊಂಡು ಅಬ್ಬೇಪಾರಿಗಳಂತೆ ಬದುಕುತ್ತಿದ್ದರೆ, ಈ ಗುರ್ಪಾಲ್ ಯಾರ ಮರ್ಜಿಗೂ ಕಾಯದೆ ತಂದಿರುವ ಚಂದದ ಬದಲಾವಣೆಗಳನ್ನು ನೋಡಿದರೆ ನಾವೆಲ್ಲ ಈ ಭೂಮಿಗೆ ಭಾರ ಎಂದನಿಸಿಬಿಡುತ್ತದೆ. ಈ ನಿಟ್ಟಿನಲ್ಲಿ ಆತನೊಬ್ಬ ಹೀರೋ ಎಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ.

ಗುರ್ಪಾಲನ ಕತೆ ಕೇಳುತ್ತಿದ್ದಾಗ ನನಗೆ ಥಟ್ಟನೆ ನೆನಪಾಗಿದ್ದು ರೋಸಾ ಪಾರ್ಕ್ಸ್. ಖ್ಯಾತ ಲೇಖಕಿ ಸುಸಾನ್ ಕೇಯ್ನ್ ತಮ್ಮ “Quiet” ಕೃತಿಯಲ್ಲಿ ರೋಸಾರ ಬಗ್ಗೆ ಮನಮುಟ್ಟುವಂತೆ ಬರೆಯುತ್ತಾರೆ. ಅದು ಡಿಸೆಂಬರ್ 01, 1955 ರ ದಿನ. ಎಂದಿನಂತೆ ಆ ಮಧ್ಯಾಹ್ನವೂ ನೀರಸವಾಗಿತ್ತು. ವೃತ್ತಿಯ ಸಲುವಾಗಿ ಓಡಾಟವೆಂದರೆ ರೋಸಾರಿಗೆ ನಿತ್ಯದ ದಿನಚರಿ. ಆ ದಿನದ ಕೆಲಸವನ್ನು ಮುಗಿಸಿದ ರೋಸಾ ಪಾರ್ಕ್ಸ್ ಮನೆಗೆ ಮರಳಲು ಎಂದಿನಂತೆ ಬಸ್ ಹತ್ತಿದ್ದರು. ಆದರೆ ಮುಂದಿನ ಕೆಲ ನಿಮಿಷಗಳಲ್ಲಿ ನಡೆಯಲಿದ್ದ ಬೆಳವಣಿಗೆಗಳು ಅವರ ಮತ್ತು ಇಡೀ ಅಮೆರಿಕಾದ ದಿಕ್ಕು ಬದಲಿಸಲಿದೆಯೆಂಬ ಸುಳಿವು ಅವರಿಗಾದರೂ ಎಲ್ಲಿತ್ತು?

ಆಗಿನ್ನೂ ಅಮೆರಿಕಾದಲ್ಲಿದ್ದ ಕಪ್ಪು ವರ್ಣೀಯರಿಗೆ ಸಾಂವಿಧಾನಿಕ ಹಕ್ಕುಗಳು ದೊರಕಿರಲಿಲ್ಲ. ಹೀಗಾಗಿ ಬಿಳಿಯರು ಇವರನ್ನು ಪ್ರಾಣಿಗಳಂತೆ ನಡೆಸಿಕೊಳ್ಳುತ್ತಿದ್ದಿದ್ದು ಆ ಕಾಲಕ್ಕೆ ಸಾಮಾನ್ಯ ಸಂಗತಿಯಾಗಿತ್ತು. ಅಂದು ಆಗಿದ್ದು ಕೂಡ ಅದೇ. ರೋಸಾ ಪಾರ್ಕ್ಸ್ ಮನೆಗೆ ಮರಳಲು ಎಂದಿನಂತೆ ಬಸ್ ಹತ್ತಿ ಸೀಟೊಂದರಲ್ಲಿ ಕೂತರು. ಸ್ವಲ್ಪ ಹೊತ್ತಿನ ನಂತರ ಬಿಳಿಯನೊಬ್ಬನೂ ಬಸ್ ಹತ್ತಿದ್ದರಿಂದ, ಹಿಂಬದಿಯ ಸೀಟಿಗೆ ತೆರಳುವಂತೆ ಮುಂದೆ ಕೂತಿದ್ದ ರೋಸಾ ಸೇರಿದಂತೆ ಮೂರು ಮಂದಿಗೆ ಆದೇಶಿಸಲಾಯಿತು. ಆದರೆ ರೋಸಾರಿಗೆ ಅಂದು ಅದೇನಾಗಿತ್ತೋ! ಅವರು ತಾನು ಕೂತಿದ್ದ ಸೀಟನ್ನು ಬಿಟ್ಟುಕೊಡಲು ಒಪ್ಪಲಿಲ್ಲ. ಬಿಳಿಯನ ಆಗಮನಕ್ಕೂ ತನಗೂ ಸಂಬಂಧವೇ ಇಲ್ಲವೆಂಬಂತೆ ತಾನಿದ್ದ ಸೀಟಿನಲ್ಲಿ ಬಿಮ್ಮನೆ ಕೂತುಬಿಟ್ಟಿದ್ದರು ರೋಸಾ ಪಾರ್ಕ್ಸ್.

ರೋಸಾ ತನಗರಿವಿಲ್ಲದಂತೆ ದೊಡ್ಡ ಕಾಡ್ಗಿಚ್ಚೊಂದಕ್ಕೆ ಕಿಡಿ ಹಚ್ಚಿದ್ದರು. ಘರ್ಷಣೆಯು ಸಹಜವಾಗಿತ್ತು. ಕೂಡಲೇ ರೋಸಾರನ್ನು ಅರೆಸ್ಟ್ ಮಾಡಲಾಯಿತು. ಶಿಕ್ಷೆಯ ರೂಪದಲ್ಲಿ ದಂಡವನ್ನೂ ಅವರ ಮೇಲೆ ವಿಧಿಸಲಾಯಿತು. ಆದರೆ ಮಾಂಟ್‌ಗೊಮೆರಿಯಲ್ಲಿ ನಡೆದ ಈ ಚಿಕ್ಕ ಘಟನೆಯು ಅಮೆರಿಕದಾದ್ಯಂತ ಸುದ್ದಿಯಾಗಿ ದೊಡ್ಡ ಮಟ್ಟಿನ ವಿರೋಧಕ್ಕೆ ಕಾರಣವಾಯಿತು. ಸಾವಿರಾರು ಮಂದಿ ಬೀದಿಗಿಳಿದರು. ಬಾಯ್ಕಾಟ್ ಆಗ್ರಹ ತಾರಕಕ್ಕೇರಿತು. ಎಲ್ಲಕ್ಕಿಂತ ಮುಖ್ಯವಾಗಿ ನಾಗರಿಕ ಹಕ್ಕುಗಳ ಐತಿಹಾಸಿಕ ಚಳುವಳಿಗೆ ಇದೊಂದು ಪುಟ್ಟ ಘಟನೆಯು ಭರ್ಜರಿಯಾಗಿ ನಾಂದಿ ಹಾಡಿತ್ತು. ಮುಂದೆ ನಾಗರಿಕ ಹಕ್ಕುಗಳ ಚಳುವಳಿಗೆ ಸಂಬಂಧಪಟ್ಟಂತೆ ಮಾರ್ಟಿನ್ ಲೂಥರ್ ಕಿಂಗ್ ವಿಶ್ವದಾದ್ಯಂತ ದೊಡ್ಡ ಹೆಸರಾದರೂ, ಈ ಐತಿಹಾಸಿಕ ಚಳುವಳಿಯ ಮಾತೆಯೆಂದು ಇಂದಿಗೂ ಕರೆಯಲಾಗುವುದು ರೋಸಾರನ್ನೇ.

ಇಲ್ಲಿ ರೋಸಾ ಪಾರ್ಕ್ಸ್ ನನಗೆ ಮುಖ್ಯವಾಗುವುದು ಅಮೆರಿಕಾದ ನಾಗರಿಕ ಹಕ್ಕುಗಳ ಚಳುವಳಿಗೆ ಕಾರಣರಾದರು ಎಂಬುದಕ್ಕಲ್ಲ. ಬದಲಾಗಿ ರೋಸಾ ಪಾರ್ಕ್ಸ್ ಓರ್ವ ಸಾಮಾನ್ಯ ಮಹಿಳೆಯಾಗಿದ್ದರು ಎಂಬ ಸತ್ಯಕ್ಕಾಗಿ. ಮೆಲುದನಿಯಲ್ಲಿ ಮಾತಾಡುತ್ತಿದ್ದ, ಸಾಮಾನ್ಯ ಮಧ್ಯವಯಸ್ಕ ಮಹಿಳೆಯಾಗಿದ್ದ ರೋಸಾ ಪಾರ್ಕ್ಸ್ ಯಾವತ್ತೂ ಹೋರಾಟ-ಚಳುವಳಿ ಎಂದು ಬೀದಿಗಿಳಿದವರೇ ಅಲ್ಲ. ಸ್ವಭಾವತಃ ಅಂತರ್ಮುಖಿ ಬೇರೆ. ತನ್ನ ಕುಟುಂಬ-ಉದ್ಯೋಗ-ಹೊಟ್ಟೆಪಾಡು ಎಂದು ತನ್ನ ಪಾಡಿಗಿದ್ದವರು. ಆದರೆ ಅಂದೇಕೋ ತನ್ನ ಒಳದನಿಗೆ ಕಿವಿಯಾಗಿ ತಣ್ಣಗೆ ಕೂತುಬಿಟ್ಟಿದ್ದರು ರೋಸಾ ಪಾರ್ಕ್ಸ್. ಅಂದು ಆಕೆ ಎಂದಿನಂತೆ ತನ್ನ ಸೀಟನ್ನು ಆ ಬಿಳಿಯನಿಗೆ ಸುಮ್ಮನೆ ಬಿಟ್ಟುಕೊಟ್ಟಿದ್ದರೆ “ಮಾಂಟೆಗ್ಮರಿ ಬಸ್ ಬಾಯ್ಕಾಟ್” ಮಾರುತವು ಸಂಭವಿಸುತ್ತಲೇ ಇರಲಿಲ್ಲ. ಜೊತೆಗೇ ಅಮೆರಿಕಾದಂತಹ ಅಮೆರಿಕಾದ ಹಣೆಬರಹವೂ ಕೂಡ!

ಸಾಮಾಜಿಕ ನ್ಯಾಯಕ್ಕಾಗಿ ತನ್ನದೊಂದು ಪುಟ್ಟ ಪ್ರತಿಭಟನೆ ಎಂದು ಹೆಚ್ಚಿನ ನಿರೀಕ್ಷೆಗಳಿಲ್ಲದೆ ರೋಸಾ ಪಾರ್ಕ್ಸ್ ಅಂದು ಆ ಹೆಜ್ಜೆಯನ್ನಿಟ್ಟಿರಬಹುದು. ತನ್ನ ಸುತ್ತಮುತ್ತ ಕಾಂಕ್ರೀಟ್ ಕಾಡಿದ್ದರೇನು? ತಾನಿರುವ ಕೈಯಳತೆಯ ದೂರದಲ್ಲಿ ಹಸಿರು ಬಿತ್ತುತ್ತೇನೆ, ಹಕ್ಕಿಗಳನ್ನು ಕರೆತರುತ್ತೇನೆ ಎಂದು ಗುರ್ಪಾಲ್ ಯೋಚಿಸಿರಬಹುದು. ಹಿಂದೆ ದೂರದರ್ಶನದಲ್ಲಿ ಸುಂಯ್ಯನೆ ಗಾಳಿಯಂತೆ ಬರುತ್ತಿದ್ದ ಶಕ್ತಿಮಾನ್ “ಛೋಟೀ-ಛೋಟೀ ಮಗರ್ ಮೋಟೀ ಬಾತೇ” (ಚಿಕ್ಕ-ಚಿಕ್ಕ, ಆದರೆ ದೊಡ್ಡ ಸಂಗತಿಗಳು) ಎಂದು ಆಗಾಗ ಹೇಳುತ್ತಿದ್ದ. ಆದರೆ ನಮ್ಮೆಲ್ಲರೊಳಗೂ ಒಬ್ಬ ಸೂಪರ್ ಹೀರೋ ಇರುತ್ತಾನೆ ಎಂಬುದು ಮಾತ್ರ ನಮಗಾಗ ತಿಳಿದಿರಲಿಲ್ಲ. ಗುರ್ಪಾಲ್ ಈ ಸತ್ಯವನ್ನು ಮತ್ತೊಮ್ಮೆ ನನಗೆ ನೆನಪಿಸಿದ್ದ. ❑

ಪ್ರಸಾದ್ ನಾಯ್ಕ್

ದೆಹಲಿ ಒಕ್ಕಲಿಗ ಗೌಡ ಸಂಘದಿಂದ ಶ್ರೀಮತಿ ಕುಮಾರಿ ಅವರಿಗೆ ಶ್ರದ್ಧಾಂಜಲಿ ಸಭೆ

ದೆಹಲಿ ಒಕ್ಕಲಿಗ ಗೌಡ ಸಂಘವು ದಿನಾಂಕ 08.06.2026 ರಂದು ಗೌಡ ಸಂಘದ ಆಜೀವ ಸದಸ್ಯರು ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯೆಯಾಗಿ ಸೇವೆ ಸಲ್ಲಿಸಿದ್ದ ಸಕ್ರಿಯ ಸದಸ್ಯೆ ಶ್ರೀಮತಿ ಕುಮಾರಿ ಎಚ್.ಎನ್ ಅವರಿಗೆ ದೆಹಲಿ ಕರ್ನಾಟಕ ಸಂಘದ ವಿಚಾರ ಸಂಕಿರಣ ಭವನದಲ್ಲಿ ಶ್ರದ್ಧಾಂಜಲಿ ಸಭೆಯನ್ನು ಆಯೋಜಿಸಲಾಗಿತ್ತು. ಶ್ರೀಮತಿ ಕುಮಾರಿ ಅವರು ಶ್ರೀ ನಂಜೇಗೌಡ ಮತ್ತು ಶ್ರೀಮತಿ ಕೃಷ್ಣ ಕುಮಾರಿ ದಂಪತಿಗಳಿಗೆ ಹಿರಿಯ ಪುತ್ರಿಯಾಗಿ ಮತ್ತಿಘಟ್ಟದ ಎಂ. ಹೊಸೂರು ಎಂಬಲ್ಲಿ ದಿನಾಂಕ 20.03.1978ರಲ್ಲಿ ಜನಿಸಿದರು. ಕುಮಾರಿ ಶೀಲ ಮತ್ತು ಪವಿತ್ರ ಇವರ ಕಿರಿಯ ಸಹೋದರಿಯರು. ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯಲ್ಲಿ ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢಶಿಕ್ಷಣವನ್ನು ಪಡೆದರು. 1994ರಲ್ಲಿ ಶ್ರೀ ಡಿ. ಅನಂತ ಅವರನ್ನು ಲಾಳನಕೆರೆ (ಕಾವಲುಬಾರೆ) ಗ್ರಾಮ, ಹಿರಿಸಾವೆಯಲ್ಲಿ ವಿವಾಹವಾದರು. ಇವರಿಗೆ "ತರುಣ್" ಎಂಬ ಮಗನಿದ್ದಾನೆ. ಕೌಟುಂಬಿಕ ಜೀವನದೊಂದಿಗೆ ದೆಹಲಿ ಒಕ್ಕಲಿಗ ಗೌಡ ಸಂಘ ಮತ್ತು ದೆಹಲಿ ಕರ್ನಾಟಕ ಸಂಘದೊಂದಿಗೆ ಸಕ್ರಿಯವಾಗಿ ಒಡನಾಟವನ್ನು ಇಟ್ಟುಕೊಂಡಿದ್ದ ಇವರ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ದೆಹಲಿ ಒಕ್ಕಲಿಗ ಗೌಡ ಸಂಘದ ಅಧ್ಯಕ್ಷ ಶ್ರೀ ಅನಂತರಾಮ ಅರಳಿ, ಪ್ರಧಾನ ಕಾರ್ಯದರ್ಶಿ ಶ್ರೀ ಪ್ರಶಾಂತ್ ಕುಮಾರ್, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ರೇಣುಕುಮಾರ್ ಆರ್., ಮತ್ತು ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿಯ ಸದಸ್ಯರು, ಮತ್ತು ದೆಹಲಿ ಒಕ್ಕಲಿಗ ಗೌಡ ಸಂಘದ ಸದಸ್ಯರುಗಳು ಮತ್ತು ಇನ್ನಿತರ ಸಂಘ ಸಂಸ್ಥೆಗಳ ಅಧ್ಯಕ್ಷರು, ಪದಾಧಿಕಾರಿಗಳು ಮತ್ತು ಸದಸ್ಯರುಗಳು ಉಪಸ್ಥಿತರಿದ್ದು ಕುಮಾರಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಶ್ರದ್ಧಾಂಜಲಿ ಅರ್ಪಿಸಲಾಯಿತು. ಆತ್ಮೀಯರು ಅವರೊಂದಿಗಿನ ಒಡನಾಟವನ್ನು ನೆನೆದರು. ❑

ದೆಹಲಿ ಒಕ್ಕಲಿಗ ಗೌಡ ಸಂಘ

ದೆಹಲಿ ಕರ್ನಾಟಕ ಸಂಘದ ಹಿರಿಯ ಆಜೀವ ಸದಸ್ಯರಾದ **ಶ್ರೀ ಸತೀಶ್ ಎ.ಎಸ್.** ಅವರು ದಿನಾಂಕ 07.05.2026ರಂದು ನಿಧನರಾಗಿದ್ದಾರೆಂದು ವಿಷಯ ತಿಳಿದು ಬಂದಿರುತ್ತದೆ. ವೃತ್ತಿ ಜೀವನದ ನಂತರ ಕರ್ನಾಟಕದಲ್ಲಿ ನೆಲೆಸಿದ್ದ ಇವರು ಸಂಘದ ಸಾಂಸ್ಕೃತಿಕ ಸಮುಚ್ಚಯದ ನಿರ್ಮಾಣ ಕಾರ್ಯದಲ್ಲಿ ಹಣ ಸಂಗ್ರಹಿಸುವಲ್ಲಿ ಸಹಕರಿಸಿದ್ದರು.



ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾಗಿದ್ದ **ಶ್ರೀ ವಿಜಯೇಂದ್ರಾಚಾರ್** ಅವರು ದಿನಾಂಕ 24.05.2026ರಂದು ನಿಧನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ಶ್ರೀಯುತರು ವೃತ್ತಿಯ ನಂತರ ದೆಹಲಿಯಿಂದ ತಾಯ್ನಾಡಿಗೆ ತೆರಳಿ ಬೆಂಗಳೂರಿನಲ್ಲಿ ವಾಸಿಸುತ್ತಿದ್ದರು.

ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾದ **ಶ್ರೀಮತಿ ಕುಮಾರಿ ಎಚ್.ಎನ್.** ಅವರು ದಿನಾಂಕ 07.06.2026ರಂದು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಕರ್ನಾಟಕ ಭವನದಲ್ಲಿ ಸೇವೆ ಸಲ್ಲಿಸುತ್ತಿರುವ ಶ್ರೀ ಅನಂತ ಜಿ. ಅವರ ಧರ್ಮಪತ್ನಿ. ಸಂಘದ ಕಾರ್ಯಕಾರಿ ಸಮಿತಿಗೆ ನಡೆದ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಇವರು ಸಂಘದ ಕಾರ್ಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ದೆಹಲಿ ಕರ್ನಾಟಕ ಸಂಘದ ಬೆಳವಣಿಗೆಗೆ ವಿಶೇಷ ಆಸಕ್ತಿಯನ್ನು ಹೊಂದಿದ್ದರು.

ಮೃತರುಗಳ ಆತ್ಮಕ್ಕೆ ಮೋಕ್ಷ ಸಿಗಲಿ, ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಕುಟುಂಬ ವರ್ಗಕ್ಕೆ ದೇವರು ದಯಪಾಲಿಸಲಿ ಭಗವಂತನಲ್ಲಿ ಪ್ರಾರ್ಥನೆ. ❑

ಉಲ್ಟಾ ಪಲ್ಟಾ ಖ್ಯಾತಿಯ ನಿರ್ದೇಶಕ, ಹಿರಿಯ ಪತ್ರಕರ್ತ, ಲೇಖಕರಾದ ಶ್ರೀ ಎನ್.ಎಸ್. ಶಂಕರ್ ನಿಧನ

ಮೂಲತಃ ಪತ್ರಕರ್ತರಾಗಿದ್ದ ಶ್ರೀ ಎನ್.ಎಸ್. ಶಂಕರ್ ಅವರು ಕನ್ನಡದ ಪ್ರಮುಖ ಪತ್ರಿಕೆಗಳಲ್ಲಿ ಕೆಲಸ ಮಾಡಿದ ಅನುಭವ ಹೊಂದಿದ್ದರು. ಲಂಕೇಶ್ ಪತ್ರಿಕೆಯ ಒಡನಾಟದಲ್ಲಿ ಬೆಳೆದ ಅವರು ತೀಕ್ಷ್ಣ ಬರಹಗಳ ಮೂಲಕ ಗುರುತಿಸಿಕೊಂಡಿದ್ದರು. ಕಳೆದ ಕೆಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಚಿಕಿತ್ಸೆ ಫಲಕಾರಿಯಾಗದೆ ಬೆಂಗಳೂರಿನಲ್ಲಿ 28.06.2026 ಕೊನೆಯುಸಿರೆಳೆದಿದ್ದಾರೆ. ವಿಲಿಯಂ ಶೇಕ್ಸ್‌ಪಿಯರ್‌ನ ಪ್ರಸಿದ್ಧ ನಾಟಕ 'ದಿ ಕಾಮಿಡಿ ಆಫ್ ಎರರ್ಸ್' ಕೈಗೆತ್ತಿಕೊಂಡು ಕನ್ನಡ ಚಿತ್ರರಂಗದ ಅತ್ಯಂತ ವಿಶಿಷ್ಟ ಹಾಗೂ ಜನಪ್ರಿಯ ಹಾಸ್ಯ ಪ್ರಧಾನ ಸಿನಿಮಾಗಳಲ್ಲೊಂದಾದ 'ಉಲ್ಟಾ ಪಲ್ಟಾ' 1997ರಲ್ಲಿ ತೆರೆಕಂಡಿತ್ತು. ಈ ಚಿತ್ರದ ನಿರ್ದೇಶಕರು ಎನ್. ಎಸ್. ಶಂಕರ್ ಅವರು. ಖ್ಯಾತ ಪತ್ರಕರ್ತರು, ಸಾಹಿತಿ ಮತ್ತು ಸಿನಿಮಾ ನಿರ್ದೇಶನ, ನಿರ್ಮಾಪಕರಾಗಿ ಕೆಲಸ ಮಾಡಿದವರು. ಮನರಂಜನೆ ಹಾಗೂ ಸಾಹಿತ್ಯ ಕ್ಷೇತ್ರಕ್ಕೆ ಇವರ ಕೊಡುಗೆ ಅಪಾರ. **ಅಗಲಿದ ಚೇತನಕ್ಕೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಭಾವಪೂರ್ಣ ಶ್ರದ್ಧಾಂಜಲಿ.** ❑

Delhi Karnataka Sangha Abhimata
June 2026, Vol. No.36, Issue No. 9, Price Rs.1/-
RNI Regn. No. 53405/91, DL-SW-01/4016/22-24
Date of Publication : June 8th / 9th, Posting Date : 10th / 11th, Total Pages-20 Monthly-Language Kannada, POSTED AT RMS DELHI-110006
Printed & Published by Radhakrishna, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press B-303, Okhla Industrial Area, Phase-I, New Delhi-110020, Tel: 40520770, Editor: Renuka Nidagundi